ಸಂಪುಟ: 37 ಸಂಚಿಕೆ: 10 | ಡಿಸೆಂಬರ್ 2024
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

**ಒಳ ಪುಟಗಳಲ್ಲಿ............**

ನವೆಂಬರ್ ಮಹಾಕ್ರಾಂತಿಯ 107ನೇ ವಾರ್ಷಿಕ------3
ಹೊಸ ಕಾರ್ಮಿಕ ಸಂಹಿತೆ---------------------4
ವಕ್ಫ್ ಕಾಯ್ದೆ ತಿದ್ದುಪಡಿ----------------------5
ಸೆಬಿ ಮುಖ್ಯಸ್ಥೆ ಮಾಧಬಿ ಬುಚ್‌ರ
ಮೇಲೆ ಷೇರು ಅಕ್ರಮದ ಆರೋಪ------------------6
5ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಎಸ್‌ಯುಸಿಐ(ಸಿ)-7
ಸಿಕ್ಕಿಂನಲ್ಲಿ ಮಾನವನಿರ್ಮಿತ ದುರಂತ---------------8
ಸೇವಾಕ್ಷೇತ್ರದಲ್ಲಿ ಕೆಲಸದ ಅವಧಿಯ ಹೆಚ್ಚಳ-----------9
ಒಂದು ದೇಶ, ಒಂದು ಚುನಾವಣೆ--------------------10
ಜಮ್ಮು ಮತ್ತು ಕಾಶ್ಮೀರ ಚುನಾವಣೆಯ ಕುರಿತು---------11




## ಶಿಕ್ಷಣ-ಸಂಸ್ಕೃತಿ-ಮಾನವತೆ ಉಳಿಸಿ!

## ಎಐಡಿಎಸ್‌ಓ ಸಂಘಟಿತ 10ನೇ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನದ ಕರೆ!!

ನವದೆಹಲಿ ತಾಲ್ಕಟೋರಾ ಒಳಾಂಗಣ ಕ್ರೀಡಾಂಗಣದಲ್ಲಿ ಅಖಿಲ ಭಾರತ ಮಟ್ಟದ 10ನೇ ವಿದ್ಯಾರ್ಥಿ ಸಮ್ಮೇಳನವನ್ನು ಎಐಡಿಎಸ್‌ಓ ವತಿಯಿಂದ ಆಯೋಜಿಸಲಾಗಿತ್ತು. 2024ರ ನವೆಂಬರ್ 27, 28, ಹಾಗೂ 29ರಂದು ಮೂರು ದಿನಗಳ ಕಾಲ ಈ ಸಮ್ಮೇಳನ ಜರುಗಿತು. ಶಿಕ್ಷಣ-ಸಂಸ್ಕೃತಿ-ಮಾನವತೆ ಉಳಿಸಿ ಘೋಷಣೆಗಳೊಂದಿಗೆ ನಡೆದ ಈ ಸಮ್ಮೇಳನವನ್ನು ದೇಶದ ಖ್ಯಾತ ಇತಿಹಾಸ ತಜ್ಞರಾದ ಪ್ರೊ॥ ಇರ್ಫಾನ್ ಹಬೀಬ್ ಅವರು ಉದ್ಘಾಟಿಸಿದರು. ಶಾಲಾ ಪಠ್ಯಪುಸ್ತಕಗಳಲ್ಲಿ ಇತಿಹಾಸ ತಿರುಚುವಿಕೆ ಅತಿರೇಕವಾಗುತ್ತಿದೆ. ಮುಸ್ಲಿಮರಿಂದಲೇ ಜಾತಿ ವ್ಯವಸ್ಥೆ ದೇಶದಲ್ಲಿ ಬಂತು ಎಂಬಂತಹ ಅವೈಜ್ಞಾನಿಕ ಚಿಂತನೆಗಳ ವಿರುದ್ಧ, ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ವಿದ್ಯಾರ್ಥಿಗಳು ರೈತ-ಕಾರ್ಮಿಕರು, ಜನಸಾಮಾನ್ಯರೊಂದಿಗೆ ಒಗ್ಗೂಡಿ ಪ್ರತಿಭಟಿಸಬೇಕು ಎಂದು ಅವರು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಬರಹಗಾರರು ಹಾಗೂ ಭಗತ್ ಸಿಂಗ್ ಆರ್ಕೈವ್‌ನ ನಿರ್ದೇಶಕರಾಗಿರುವ ಪ್ರೊ. ಚಮನ್ ಲಾಲ್ ಮಾತನಾಡುತ್ತಾ, ಸರ್ಕಾರಗಳ ದಮನಕಾರಿ ನೀತಿಗಳನ್ನು ಖಂಡಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟಿಷರೊಂದಿಗೆ ಕೈಜೋಡಿಸಿದ್ದ ವಿಭಜಕ ಶಕ್ತಿಗಳು ಇಂದು ದೇಶದ ಆಡಳಿತ ನಡೆಸುತ್ತಿವೆ. ಎನ್‌ಇಪಿ-2020 ಸರ್ಕಾರಗಳಿಂದ ಈಗಾಗಲೇ ತುಳಿತಕ್ಕೀಡಾಗಿರುವ ದೇಶದ ರೈತ-ಕಾರ್ಮಿಕರ ಮೇಲೆ ಮಾಡಿರುವ ದೊಡ್ಡ ಪ್ರಹಾರವಾಗಿದೆ. ವಿದ್ಯಾರ್ಥಿಗಳು ಭಗತ್ ಸಿಂಗ್‌ರಿಂದ ಸ್ಫೂರ್ತಿ ಹೊಂದಿ ಎಲ್ಲಾ ದಮನಕಾರಿ ನೀತಿಗಳನ್ನು ಎದುರಿಸಿ ಪ್ರಬಲ ಹೋರಾಟವನ್ನು ಬೆಳೆಸಬೇಕು ಎಂದು ಕರೆ ನೀಡಿದರು.

ಎಐಡಿಎಸ್‌ಓನ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ವಿ. ಎನ್ ರಾಜಶೇಖರ್ ಅವರು ಕೂಡ ಈ ಸಂದರ್ಭದಲ್ಲಿ ಮಾತನಾಡಿದರು.

### ಅಂತರರಾಷ್ಟ್ರೀಯ ಘೋಷ್ಠಿ

ಅಂತರರಾಷ್ಟ್ರೀಯ ಗೋಷ್ಠಿಯಲ್ಲಿ ನೇಪಾಳದ ವಿದ್ಯಾರ್ಥಿ ನಾಯಕರು ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಗಾಜಾದಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೆ ಬಂಡವಾಳ ಶಾಹಿಗಳು ಮತ್ತು ಸಾಮ್ರಾಜ್ಯಶಾಹಿಗಳ ಕುತಂತ್ರವೇ ಕಾರಣವಾಗಿದೆ. ಇದರ ವಿರುದ್ಧ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಒಗ್ಗಟ್ಟು ಹಾಗೂ ಭ್ರಾತೃತ್ವದಿಂದ ಹೋರಾಡಬೇಕು ಎಂದು ಕರೆ ನೀಡಿದರು.


ಎಐಡಿಎಸ್‌ಓ ಕರ್ನಾಟಕ ರಾಜ್ಯಾಧ್ಯಕ್ಷೆಯಾದ ಕಾ. ಅಶ್ವಿನಿ.ಕೆ.ಎಸ್ ಅವರು ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಫ್ಯಾಸಿಸಂನ ದಾಳಿಯನ್ನು ಸೋಲಿಸಬೇಕಾದಲ್ಲಿ ಸರಿಯಾದ ವೈಚಾರಿಕತೆಯ ಆಧಾರದ ಮೇಲೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಒಂದಾಗಿ ಬಲಿಷ್ಠ ಹೋರಾಟಗಳನ್ನು ಬೆಳೆಸುವ ತುರ್ತು ಅವಶ್ಯಕತೆ ಇದೆ ಎಂದರು.

### ಎಡ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಚರ್ಚೆ

ಎ.ಐ.ಎಸ್.ಎಫ್, ಎ.ಐ.ಎಸ್.ಎ, ಪಿ.ಎಸ್.ಯು ಹಾಗೂ ಎ.ಐ.ಎಸ್.ಬಿ ಎಡ ವಿದ್ಯಾರ್ಥಿ ಸಂಘಟನೆಗಳೊಂದಿಗೆ ನಡೆದ ಸಂವಾದದಲ್ಲಿ ಎಡ ವಿದ್ಯಾರ್ಥಿ ಸಂಘಟನೆಯನ್ನು ಬಲಿಷ್ಠಗೊಳಿಸುವ ಕುರಿತು ಚರ್ಚೆ ನಡೆಯಿತು. ಇಂದು ದೇಶದ ಮುಂದಿರುವ ಸವಾಲುಗಳನ್ನು ಎದುರಿಸಬೇಕಾದಲ್ಲಿ ಎಡ ವಿದ್ಯಾರ್ಥಿ ಸಂಘಟನೆಗಳು ಯಾವರೀತಿ ಒಂದಾಗಿ ಹೋರಾಟ ಬೆಳೆಸಬೇಕು ಎಂದು ಚರ್ಚಿಸಲಾಯಿತು.



ಎಸ್.ಯು.ಸಿ.ಐ(ಕಮ್ಯುನಿಸ್ಟ್)ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಐಡಿಎಸ್‌ಓನ ಪ್ರಥಮ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ವಿಡಿಯೋ ಮೂಲಕ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು


ಎಸ್.ಯು.ಸಿ.ಐ(ಕಮ್ಯುನಿಸ್ಟ್) ಪಕ್ಷದ ಪಾಲಿಟ್ ಬ್ಯೂರೊ ಸದಸ್ಯರಾದ ಕಾಮ್ರೇಡ್ ಚಂಡೀದಾಸ್ ಭಟ್ಟಾಚಾರ್ಯ

ಈ ಸಂದರ್ಭದಲ್ಲಿ ಶೈಕ್ಷಣಿಕ ವಿಷಯಗಳನ್ನು ಕುರಿತಂತೆ ದೇಶದ ಅನೇಕ ನುರಿತ ಹಾಗೂ ಹಿರಿಯ ಶಿಕ್ಷಣ ತಜ್ಞರೊಂದಿಗೆ ಸಂವಾದವನ್ನು ಏರ್ಪಡಿಸಲಾಗಿತ್ತು. ಈ ಸಂವಾದದಲ್ಲಿ ಪ್ರೊ. ಜಮೀರ್ ಉದ್ದಿನ್ ಷಾ, ವಿಶ್ರಾಂತ ಕುಲಪತಿಗಳು ಮುಸ್ಲಿಂ ವಿಶ್ವವಿದ್ಯಾನಿಲಯ, ಪ್ರೊ. ವಂಡೆಲ್ ಪಾಷ, ಪ್ರಖ್ಯಾತ ಪ್ರಗತಿಪರ ಚಿಂತಕರು, ಮೇಘಾಲಯ, ರಾಮ್ ಪುನಿಯಾನಿ, ನಿವೃತ್ತ ಪ್ರಾಧ್ಯಪಕರು ಐ ಐ ಟಿ, ಮುಂಬೈ, ಪ್ರೊ. ಜವಾಹರ್ ನೇಸನ್, ವಿಶ್ರಾಂತ ಕುಲಪತಿಗಳು ಜೆ. ಎಸ್. ಎಸ್. ತಾಂತ್ರಿಕ ವಿಶ್ವವಿದ್ಯಾನಿಲಯ, ಪ್ರೊ. ನವನೀತ್ ಶರ್ಮ, ಕೇಂದ್ರೀಯ ವಿಶ್ವ ವಿದ್ಯಾನಿಲಯ ಹಿಮಾಚಲ ಪ್ರದೇಶ, ಡಾ. ತರುಣ್ ಮಂಡಲ್, ಮಾಜಿ ಸಂಸದರು ಹಾಗೂ ಜನ ಆರೋಗ್ಯ ಹೋರಾಟದ ನಾಯಕರು ಭಾಗವಹಿಸಿದ್ದರು.


ದೇಶದ ಶಿಕ್ಷಣ ವ್ಯವಸ್ಥೆಯ ಮೇಲೆ ಜರುಗುತ್ತಿರುವ ಆಕ್ರಮಣಗಳ ಕುರಿತು ಹಾಗೂ ಎನ್.ಇ.ಪಿ ಯ ಹೊಸ ದಾಳಿಗಳ ಕುರಿತಾಗಿ ಪ್ರತಿನಿಧಿ ಅಧಿವೇಶನಗಳಲ್ಲಿ ಚರ್ಚಿಸಲಾಯಿತು. ಕಳೆದ ನಾಲ್ಕು ವರ್ಷಗಳಲ್ಲಿ ಸಂಘಟನೆ ನಡೆದು ಬಂದ ಹಾದಿ, ಎದುರಿಸಿದ ಸವಾಲುಗಳನ್ನು ನೆನೆದು, ಮುಂಬರುವ ಹೊಸ ಸವಾಲುಗಳಿಗೆ ವೈಚಾರಿಕವಾಗಿ, ಸಂಘಟನಾತ್ಮಕವಾಗಿ ಎಐಡಿಎಸ್‌ಓ ಅನ್ನು ಬಲಿಷ್ಠಗೊಳಿಸಬೇಕು ಎಂಬ ಒತ್ತಾಸೆಯಿರುವ ಸಂಘಟನಾತ್ಮಕ ವರದಿಯನ್ನು ಅಂಗೀಕರಿಸಲಾಯಿತು. ಗಾಜಾ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧ-ಶಾಂತಿಗಾಗಿ ಆಗ್ರಹಿಸಿ ಗೊತ್ತುವಳಿ, ಮಣಿಪುರದಲ್ಲಿ ಶಾಂತಿ ಸ್ಥಾಪನೆಗಾಗಿ ಆಗ್ರಹಿಸಿ ಗೊತ್ತುವಳಿ, ಮಹಿಳೆಯರ ಮೇಲೆ 2ನೇ ಪುಟಕ್ಕೆ

## 10ನೇ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನ

1ನೇ ಪುಟದಿಂದ ಹೆಚ್ಚುತ್ತಿರುವ ದೌರ್ಜನ್ಯಗಳ ವಿರುದ್ಧ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಸಂಘಟನೆಯ ಸಂವಿಧಾನದ ಕುರಿತು ಚರ್ಚಿಸಲಾಯಿತು.

ದೇಶದ ಮೂಲೆಮೂಲೆಗಳಿಂದ ವಿದ್ಯಾರ್ಥಿಗಳು ಅನೇಕ ಎಡರು ತೊಡರುಗಳಿಗೆ ಸೆಡ್ಡು ಹೊಡೆದು ಸಮ್ಮೇಳನಕ್ಕೆ ಧಾವಿಸಿದ್ದರು. ಕಲಹಗಳಿಗೆ ತುತ್ತಾಗಿರುವ ಮಣಿಪುರವನ್ನು ಒಳಗೊಂಡಂತೆ ದೇಶದ 26 ರಾಜ್ಯಗಳು ಹಾಗೂ 4 ಕೇಂದ್ರಾಡಳಿತ ಪ್ರದೇಶಗಳಿಂದ ವಿದ್ಯಾರ್ಥಿ ಪ್ರತಿನಿಧಿಗಳು ಬಂದಿದ್ದರು. 'ಸಾರ್ವಜನಿಕ ಶಿಕ್ಷಣ ಉಳಿಸಿ', 'ಶಿಕ್ಷಣ–ಮಾನವತೆ–ಸಂಸ್ಕೃತಿ ಉಳಿಸಿ', 'ಎನ್.ಇ.ಪಿ' ತಿರಸ್ಕರಿಸಿ ಎಂಬ ಘೋಷಣೆಗಳಿಂದ ತಾಲ್ಕಟೋರಾ ಮೈದಾನ ಪ್ರತಿಧ್ವನಿಸುತ್ತಿತ್ತು. ಕೊನೆಯ ಅಧಿವೇಶನದಲ್ಲಿ ಎಸ್‌ಯುಸಿಐ(ಸಿ) ಪಕ್ಷದ ಪಾಲಿಟ್ ಬ್ಯೂರೊ ಸದಸ್ಯರಾದ ಕಾಮ್ರೇಡ್ ಚಂಡೀದಾಸ್ ಭಟ್ಟಾಚಾರ್ಯರವರು ಮಾತನಾಡುತ್ತಾ, "ನೀವೆಲ್ಲಾ ವಿದ್ಯಾರ್ಥಿಗಳು ಎ.ಐ.ಡಿ.ಎಸ್.ಓ ಸೇರುವ ಮೂಲಕ ಕ್ರಾಂತಿಕಾರಿ ವಿಶ್ವವಿದ್ಯಾಲಯಕ್ಕೆ ಸೇರಿದ್ದೀರಿ. ಜ್ಞಾನವನ್ನು ಕರಗತಗೊಳಿಸಿ ಕೊಳ್ಳುವುದರೊಂದಿಗೆ ಚಾರಿತ್ರ್ಯ ರೂಪಿಸಿಕೊಳ್ಳುವ ಹೋರಾಟದತ್ತ ನೀವು ಹೆಜ್ಜೆ ಇಟ್ಟಿದ್ದೀರಿ. ಇಲ್ಲಿ ನಿಮ್ಮ ಕಲಿಕೆ ಸ್ವಾರ್ಥಕ್ಕಾಗಿ ಅಲ್ಲ, ಸಮಾಜದ ಬದಲಾವಣೆಗಾಗಿ, ಕ್ರಾಂತಿಗಾಗಿ" ಎಂದು ಪ್ರೇರೇಪಿಸಿದರು. ಕೊನೆಯದಾಗಿ ಎ.ಐ.ಡಿ.ಎಸ್.ಓನ ಮಾತೃ ಪಕ್ಷ ಎಸ್.ಯು.ಸಿ.ಐ(ಕಮ್ಯುನಿಸ್ಟ್)ನ ಪ್ರಧಾನ ಕಾರ್ಯದರ್ಶಿಗಳು ಹಾಗೂ ಎ.ಐ.ಡಿ.ಎಸ್.ಓನ ಪ್ರಥಮ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ವಿಡಿಯೋ ಮೂಲಕ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, "ಸಮಾಜವು ಇಂದು ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಸಂಕಷ್ಟಗಳ ಮಧ್ಯೆ ಸಾಗಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ತರವಾಗಿದೆ. ಸಮಾಜ ಬದಲಾಯಿಸುವ ಈ ಕಾರ್ಯಕ್ಕೆ ಮುಂಬರುವವರು ಕೆಲವೇ ಕೆಲವು ಜನ ವಿದ್ಯಾರ್ಥಿ–ಯುವಜನರು. ನೀವು ಅನೇಕ ಕಷ್ಟ ಕಾರ್ಪಣ್ಯಗಳನ್ನು, ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಕ್ರಾಂತಿಗೆ–ಸಮಾಜದ ಮೂಲಭೂತ ಬದಲಾವಣೆಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವ ಈ ಬದುಕಿನಲ್ಲಿ ನೋವು, ಹಸಿವು, ಕಷ್ಟಗಳು ತುಂಬಿವೆ; ಆದರೆ ಈ ಬದುಕು ಮಾತ್ರ ಘನತೆಯುಕ್ತ ಬದುಕು" ಎಂಬ ಮಹಾನ್ ಮಾರ್ಕ್ಸ್‌ವಾದಿ ಚಿಂತಕ ಕಾಮ್ರೇಡ್ ಶಿವದಾಸ್ ಘೋಷ್‌ರವರ ಮಾತುಗಳನ್ನು ಈ ಸಂದರ್ಭದಲ್ಲಿ ನೆನಪಿಸಿದರು.


ಮುಂಬರುವ ದಿನಗಳಲ್ಲಿ ವಿದ್ಯಾರ್ಥಿ ಹೋರಾಟವನ್ನು ಬಲಿಷ್ಠಗೊಳಿಸಲೋಸುಗ ಸಮ್ಮೇಳನವು ಬಲಿಷ್ಠ ಸಮಿತಿಯನ್ನು ಚುನಾಯಿಸಿತು.



ಡಾ. ತರುಣ್ ಮಂಡಲ್ ಮಾಜಿ ಸಂಸದರು

ಎಐಡಿಎಸ್‌ಓ ಅಖಿಲ ಭಾರತ ಅಧ್ಯಕ್ಷರಾಗಿ ಸೌರವ್ ಘೋಷ್, ಉಪಾಧ್ಯಕ್ಷರುಗಳಾಗಿ, ಮೃದುಲ್ ಸರ್ಕಾರ್, ಸಚಿನ್ ಜೈನ್, ದಿನೇಶ್ ಮೊಹಂತೋ, ಹಿಲ್ಲಲ್ ಭಟ್ಟಾಚಾರ್ಯ, ಹೇಮಂತ ಪೆಗು, ಶುಭಂಕರ್ ಚಟರ್ಜಿ, ಅಶ್ವಿನಿ ಕೆ.ಎಸ್, ಚಂದನ್ ಸಾಂತ್ರ, ಸೋಮಂತ ಬೆಹರಾ, ರಿಮಿ ಬಘೇಲಾ, ಪ್ರಧಾನ ಕಾರ್ಯದರ್ಶಿಗಳಾಗಿ ಶಿಬಾಷಿಶ್ ಪ್ರಹಾರಾಜ್, ಖಜಾಂಚಿ ಶಮಸುಲ್ ಆಲಂ, ಕಛೇರಿ ಕಾರ್ಯದರ್ಶಿ ಪ್ರಶಾಂತ್ ಕುಮಾರ್, ಅಂತರರಾಷ್ಟ್ರೀಯ ಸಂಬಂಧ ಕಾರ್ಯದರ್ಶಿ ಮಣಿಶಂಕರ್ ಪಟ್ಟನಾಯಕ್, ಜಂಟಿ ಕಾರ್ಯದರ್ಶಿಗಳಾಗಿ, ಪಲ್ಲವ್ ಪೆಗು, ಸಿದ್ಧಾರ್ಥ್ ರಥ್, ಅಜಿತ್ ಪನ್ವಾರ್, ರಾಹುಲ್ ಸರ್ಕಾರ್, ಸಮರ್ ಮಹಾತೋ, ಶ್ರುತಿ ಶಿವಾಹರ್, ಅಲೀನಾ ಎಸ್, ಅಜಯ್ ಕಾಮತ್, ಶ್ರೇಯ, ಅಪರ್ಣ ಆರ್, ರಾಮಪ್ರಸಾದ್ ಆಚಾರ್ಯ, ಅನಿರ್ಬನ್ ಭೌಮಿಕ್ ಅವರು ಚುನಾಯಿತರಾದರು.

ನವ ಉಲ್ಲಾಸ, ಉತ್ಸಾಹ, ಹೋರಾಟದ ಸ್ಫೂರ್ತಿಯೊಂದಿಗೆ ವಿದ್ಯಾರ್ಥಿ ಹೋರಾಟವನ್ನು ಬಲಿಷ್ಠಗೊಳಿಸುವ ಪ್ರತಿಜ್ಞೆಯೊಂದಿಗೆ ಎಲ್ಲಾ ಪ್ರತಿನಿಧಿಗಳು ತಮ್ಮ ರಾಜ್ಯಗಳಿಗೆ ಹಿಂದಿರುಗಿದ್ದಾರೆ.



ಕಾಮ್ರೇಡ್ ವಿ. ಎನ್ ರಾಜಶೇಖರ್
ಎಐಡಿಎಸ್‌ಓ ರಾಷ್ಟ್ರಾಧ್ಯಕ್ಷರು



ಕಾಮ್ರೇಡ್ ಸೌರವ್ ಘೋಷ್
ಎಐಡಿಎಸ್‌ಓ ಪ್ರಧಾನ ಕಾರ್ಯದರ್ಶಿ


ಕಾಮ್ರೇಡ್ ಶಿಬಾಷಿಶ್ ಪ್ರಹಾರಾಜ್
ಎಐಡಿಎಸ್‌ಓ ಕಛೇರಿ ಕಾರ್ಯದರ್ಶಿ



ಕಾಮ್ರೇಡ್ ಅಶ್ವಿನಿ ಕೆ.ಎಸ್.
ಎಐಡಿಎಸ್‌ಓ ಕರ್ನಾಟಕ ರಾಜ್ಯಾಧ್ಯಕ್ಷೆ

### ಎಐಡಿವೈಓ ಸಂಘಟಿತ

## ಯುವಜನ ಸಂಕಲ್ಪ ಸಮಾವೇಶ

ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್(ಎಐಡಿವೈಓ), 'ಮಹಿಳೆಯರ ಘನತೆ ಮತ್ತು ಮಾನವ ಮೌಲ್ಯ ಉಳಿಸೋಣ' ಎಂಬ ವಿಷಯದ ಕುರಿತು ವಿವಿಧೆಡೆ ಜಿಲ್ಲಾ ಮಟ್ಟದ ಯುವಜನರ ಸಂಕಲ್ಪ ಸಮಾವೇಶವನ್ನು ಸಂಘಟಿಸಿತ್ತು.



ಕೊಪ್ಪಳ


ಚಿತ್ರದುರ್ಗ



ಬೆಳಗಾವಿ

## ಬಳ್ಳಾರಿಯಲ್ಲಿ ಬಾಣಂತಿಯರ ಅಸಹಜ ಸಾವು:

### ಎಐಎಮ್‌ಎಸ್‌ಎಸ್ ಹಾಗೂ ಬಳ್ಳಾರಿ ನಾಗರಿಕ ಹೋರಾಟ ಸಮಿತಿಯಿಂದ ಪ್ರತಿಭಟನೆ

ಬಳ್ಳಾರಿಯ ಜಿಲ್ಲಾಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಒಳಗಾದ ಮೂವರು ಮಹಿಳೆಯರು ಸೋಂಕಿಗೆ ಒಳಗಾಗಿ ಬಹು ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ. ಹಾಗೆಯೇ ಇನ್ನೂ 4 ಬಾಣಂತಿಯರು ತುರ್ತು ನಿಗಾ ಘಟಕದಲ್ಲಿದ್ದು, ಅವರ ಪರಿಸ್ಥಿತಿ ಕೂಡ ಗಂಭೀರವಾಗಿದೆ. ಈ ಹಿನ್ನೆಲೆಯಲ್ಲಿ ಎಐಎಮ್‌ಎಸ್‌ಎಸ್ ಹಾಗೂ ಬಳ್ಳಾರಿ ನಾಗರಿಕ ಹೋರಾಟ ಸಮಿತಿಯಿಂದ ಜಿಲ್ಲಾಧಿಕಾರಿಗಳು, ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಮನವಿ ಪತ್ರ ಸಲ್ಲಿಸಲಾಯಿತು


ಎಐಎಮ್‌ಎಸ್‌ಎಸ್



ಬಳ್ಳಾರಿ ನಾಗರಿಕ ಹೋರಾಟ ಸಮಿತಿ

**ನವೆಂಬರ್ ಮಹಾಕ್ರಾಂತಿಯ 107ನೇ ವಾರ್ಷಿಕ – ಸಾರ್ವಜನಿಕ ಸಭೆ : ಬೆಂಗಳೂರು**

# “ಕಾರ್ಮಿಕ ವರ್ಗ ಮಾತ್ರ ಕ್ರಾಂತಿಗೆ ನಾಯಕತ್ವವನ್ನು ನೀಡಲು ಸಾಧ್ಯ.”

**– ಲೆನಿನ್**

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಮಿತಿಗಳ ವತಿಯಿಂದ ಜಂಟಿಯಾಗಿ ನವೆಂಬರ್ ಮಹಾಕ್ರಾಂತಿಯ 107ನೇ ವಾರ್ಷಿಕ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಅವರು ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, “ವಿಶ್ವದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಶೋಷಣೆ ರಹಿತ ಸಮಾಜವನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ. ಈ ಸೈದ್ಧಾಂತಿಕ ತಿಳುವಳಿಕೆಯನ್ನು ಆಚರಣೆಯಲ್ಲಿ ತಂದು ಸಾಬೀತು ಮಾಡಿದ್ದು ನವೆಂಬರ್ ಮಹಾಕ್ರಾಂತಿ. ವಾಸ್ತವದಲ್ಲಿ ರಷ್ಯಾದ ಕ್ರಾಂತಿಗೂ ಮುನ್ನ ಅವಿದ್ಯಾವಂತ ಕಾರ್ಮಿಕರು–ರೈತರು ಮತ್ತು ಅನಕ್ಷರಸ್ಥ ದುಡಿಯುವ ಜನತೆ ಆಳುವ ವರ್ಗವಾಗಿ ಹೊರಹೊಮ್ಮಲು ಸಾಧ್ಯ ಎಂದು ಇಡೀ ಜಗತ್ತೇ ಊಹಿಸಿರಲಿಲ್ಲ” ಎಂದರು.

ಅವರು ಮುಂದುವರೆದು ಮಾತನಾಡುತ್ತಾ, “1917ರ ಫೆಬ್ರವರಿಯಲ್ಲಿ ನಡೆದ ಕ್ರಾಂತಿಯಲ್ಲಿ ರಷ್ಯಾದ ರೈತ–ಕಾರ್ಮಿಕರು ಮತ್ತು ಬಂಡವಾಳಶಾಹಿಗಳು (ಬೂರ್ಜ್ವಾಜಿ) ಜಂಟಿಯಾಗಿ ಝಾರ್ ದೊರೆಯನ್ನು ಅಧಿಕಾರದಿಂದ ಕಿತ್ತೊಗೆದರೂ, ಬಂಡವಾಳಶಾಹಿಗಳು ರಾಜ್ಯಾಧಿಕಾರವನ್ನು ಕಬಳಿಸಿಕೊಂಡರು. ಅಷ್ಟರಮಟ್ಟಿಗೆ ಅಲ್ಲಿ ಬೂರ್ಜ್ವಾ ಜನತಾಂತ್ರಿಕ ಕ್ರಾಂತಿ ಪೂರ್ಣಗೊಂಡಂತೆ. ಹಾಗಾಗಿಯೇ ಕೆರೆನ್ಸ್ಕಿ ನೇತೃತ್ವದ ಬೂರ್ಜ್ವಾ ಸರ್ಕಾರ ಸ್ಥಾಪಿತವಾಯಿತು. ರಷ್ಯಾದಲ್ಲಿ ಫೆಬ್ರವರಿ ಕ್ರಾಂತಿಯ ಸಮಯದಲ್ಲಿ ಹಾಗೂ ನಂತರ, ಮಾರ್ಕ್ಸ್‌ವಾದವನ್ನು ಆರ್ಥಿಕ ನಿಶ್ಚಿತವಾದದ ಮಟ್ಟಕ್ಕೆ ಇಳಿಸಿದಂತಹ ತಪ್ಪು ಪರಿಕಲ್ಪನೆಗಳು ಹುಟ್ಟಿದ್ದವು. ಅಲ್ಲದೇ ಮಾರ್ಕ್ಸ್‌ವಾದವನ್ನು ಒಂದು ಕುರುಡು ಸಿದ್ಧಾಂತವಾಗಿ ಅನುಸರಿಸುತ್ತಾ – ಸಮಾಜದ ಪ್ರಗತಿ ಹಾಗೂ ಬೆಳವಣಿಗೆಯ ಗತಿಯಲ್ಲಿ ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯ ಧ್ಯೇಯೋದ್ದೇಶಗಳನ್ನು ಪೂರೈಸುವ ಸಲುವಾಗಿ ಕಾರ್ಮಿಕರ ಮತ್ತು ರೈತರ ಸೋವಿಯತ್‌ಗಳು ಕೆರೆನ್‌ಸ್ಕಿ ಸರ್ಕಾರದೊಂದಿಗೆ ಸಹಕರಿಸಬೇಕು ಹಾಗೂ ಈ ಅಪೂರ್ಣ ಹೋರಾಟವನ್ನು ಪೂರ್ಣಗೊಳಿಸಲು ಕಾರ್ಮಿಕರು–ರೈತರು, ಕಾರ್ಮಿಕ ವರ್ಗ ಸಂಸದೀಯ ರಾಜಕೀಯ ಮಾರ್ಗದಲ್ಲಿ ನಡೆಯಬೇಕು; ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯ ಈ ಆಶಯಗಳನ್ನು ನೆರವೇರಿಸುವ ತನಕ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸಲು ಶ್ರಮಿಸುವುದು ಸೂಕ್ತವಲ್ಲ – ಅನ್ನುವ ತಪ್ಪು ತಿಳಿವಳಿಕೆ ಮಾರ್ಕ್ಸ್‌ವಾದಿಗಳೆಂದು ಕರೆಸಿಕೊಳ್ಳುವ ಕೆಲವರಲ್ಲಿ ಆಳವಾಗಿತ್ತು. ಆದರೆ, ಲೆನಿನ್‌ರವರು ಮಾರ್ಕ್ಸ್‌ವಾದವೆಂದರೆ – ಕೇವಲ ಸೂಕ್ತಿಗಳನ್ನು ಬಡಬಡಿಸುವುದು, ಹೋಲಿಕೆಗಳನ್ನು ನೀಡುವುದು, ಐತಿಹಾಸಿಕ ಸಾಮ್ಯತೆಗಳನ್ನು ತೋರುವುದಕ್ಕೆ ಸೀಮಿತವಾದ– ಕುರುಡು ಸಿದ್ಧಾಂತವಲ್ಲ ಎಂದಿದ್ದರು. ಅವರ ಪ್ರಕಾರ ಮಾರ್ಕ್ಸ್‌ವಾದವನ್ನು ನೈಜವಾಗಿ ಗ್ರಹಿಸುವುದು ಎಂದರೆ ವೈಜ್ಞಾನಿಕ ವಿಧಾನಕ್ರಮವನ್ನು ಮೈಗೂಡಿಸಿಕೊಳ್ಳುವುದು, ಜೊತೆಗೆ ಮಾರ್ಕ್ಸ್‌ವಾದಿ ದ್ವಂದ್ವಾತ್ಮಕತೆ ಮತ್ತು ತತ್ವಜ್ಞಾನದ ದೃಷ್ಟಿಕೋನವನ್ನು ಮೈಗೂಡಿಸಿಕೊಳ್ಳುವುದು ಹಾಗೂ ಅದನ್ನು ಆಚರಣೆಯಲ್ಲಿ ಅಳವಡಿಸಿಕೊಳ್ಳುವುದು. ಅಲ್ಲದೇ ಮಾರ್ಕ್ಸ್, ಎಂಗೆಲ್ಸ್ ಮತ್ತಿತರ ಮಾರ್ಕ್ಸ್‌ವಾದಿಗಳು ಮಾಡಿದ ಪ್ರತಿಪಾದನೆಗಳನ್ನು ನಿರ್ದಿಷ್ಟ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಗ್ರಹಿಸುವುದು. ಇದು ಬಹಳ ಮುಖ್ಯ. ಇದನ್ನು ಲೆನಿನ್‌ರವರು ಅರ್ಥಮಾಡಿಕೊಂಡಿದ್ದರಿಂದಲೇ ತಮ್ಮ ‘ಏಪ್ರಿಲ್ ಥೀಸೀಸ್’ ಮೂಲಕ ಅಂದು ಪ್ರಚಲಿತವಿದ್ದ ಗೊಂದಲಪೂರ್ಣ ಚಿಂತನೆಗಳಿಗೆ ಕೊಡಲಿಯೇಟು ಕೊಟ್ಟರು. ವಿಶ್ವದ ಕಮ್ಯುನಿಸ್ಟರಿಗೆ ಮಾರ್ಕ್ಸ್‌ವಾದವೆಂದರೆ ಬರಿಯ ಆರ್ಥಿಕ ನಿಶ್ಚಿತವಾದವಲ್ಲ ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟರು. ರಾಜಕೀಯ ಮತ್ತು ಆರ್ಥಿಕತೆಗಳ ನಡುವಣ ಪರಸ್ಪರ ಸಂಬಂಧವನ್ನು ಅರ್ಥ ಮಾಡಿಕೊಳ್ಳದೆ, ಆರ್ಥಿಕ ಪರಿಸ್ಥಿತಿ ಬದಲಾದಂತೆಯೇ ತಕ್ಷಣ ರಾಜಕೀಯ ಪರಿಸ್ಥಿತಿಯೂ ಬದಲಾಗುತ್ತದೆ ಎಂದು ಆಲೋಚಿಸಿದರೆ, ಅಂದರೆ, ರಾಜಕೀಯ ಪರಿಸ್ಥಿತಿಯು ಆರ್ಥಿಕ ಪರಿಸ್ಥಿತಿಯಲ್ಲಾಗುವ ಬದಲಾವಣೆಯ ಪ್ರತಿಬಿಂಬವಾಗಿ ಮಾತ್ರ ಬದಲಾಗುತ್ತದೆ ಎಂದುಕೊಂಡರೆ ಅವರು ಮಾರ್ಕ್ಸ್‌ವಾದವನ್ನು ಸರಿಯಾಗಿ ಗ್ರಹಿಸಿಲ್ಲ ಎಂದರ್ಥ. ಅಂದರೆ ರಷ್ಯಾದಲ್ಲಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಬಲವಾಗಿ ಸ್ಥಾಪನೆಯಾದರೆ ಮಾತ್ರವೇ ಸಮಾಜವಾದಿ ಕ್ರಾಂತಿಯ ಕಡೆಗೆ ಸಾಗಲು ಸಾಧ್ಯ ಎಂಬ ತಪ್ಪು ಕಲ್ಪನೆಯನ್ನು ಅವರು ಸೋಲಿಸಿದರು” ಎಂದರು.



**ಕಾಮ್ರೇಡ್ ಕೆ. ರಾಧಾಕೃಷ್ಣ**
**ಪಾಲಿಟ್ ಬ್ಯೂರೋ ಸದಸ್ಯರು, ಎಸ್‌ಯುಸಿಐ(ಸಿ)**

ಶೋಷಿತ ವರ್ಗವಾದ ಕಾರ್ಮಿಕ ವರ್ಗವನ್ನು ಅಧಿಕಾರಕ್ಕೆ ತಂದ ಈ ನವೆಂಬರ್ ಮಹಾಕ್ರಾಂತಿಯ ಹಲವು ಪಾಠಗಳು ನಮ್ಮ ಮುಂದಿವೆ. 1871ರಲ್ಲಿ ಪ್ಯಾರಿಸ್ ಕಮ್ಯೂನ್ ಮೂಲಕ ಮೊಟ್ಟ ಮೊದಲ ಬಾರಿಗೆ ಕಾರ್ಮಿಕ ವರ್ಗವು ಅಧಿಕಾರಕ್ಕೆ ಬರುವ ಪ್ರಯತ್ನ ಮಾಡಿದರೂ ಸಹ ಅದು ಕೆಲವೇ ಕೆಲವು ತಿಂಗಳುಗಳ ಕಾಲವೂ ಉಳಿಯಲಿಲ್ಲ. ಅಸ್ತಿತ್ವದಲ್ಲಿರುವ ರಾಜ್ಯ ಯಂತ್ರವನ್ನು ನುಚ್ಚುನೂರು ಮಾಡದೆ ಕೇವಲ ಸುಧಾರಣೆಯ ಮೂಲಕ ಶೋಷಿತ ವರ್ಗದ ಕ್ರಾಂತಿಯನ್ನು ನೆರವೇರಿಸಲಾಗದು ಎಂಬ ಪಾಠವನ್ನು ಅದು ಕಲಿಸಿತು. ಉಳಿದೆಲ್ಲಾ ವ್ಯವಸ್ಥೆಗಳು ಶೋಷಕ ರಾಜ್ಯಗಳನ್ನು ಭದ್ರ ಪಡಿಸಿದರೆ, ಕೇವಲ ಸಮಾಜವಾದಿ ಕ್ರಾಂತಿಗೆ ಮಾತ್ರವೇ ರಾಜ್ಯ ಯಂತ್ರವನ್ನು ಪುಡಿಗಟ್ಟಿ



**ಸಮಾಜವಾದ ಎಂದರೆ ವರ್ಗಗಳ ನಿರ್ಮೂಲನೆ. ಕಾರ್ಮಿಕ ವರ್ಗದ ಸರ್ವಾಧಿಕಾರ ವರ್ಗಗಳನ್ನು ನಿರ್ಮೂಲನೆ ಮಾಡಲು ಸಾಧ್ಯವಿರುವ ಎಲ್ಲವನ್ನೂ ಮಾಡಿದೆ. ಆದರೆ ಒಂದೇ ಹೊಡೆತದಲ್ಲಿ ವರ್ಗಗಳನ್ನು ನಿರ್ಮೂಲನೆಗೊಳಿಸಲಾಗುವುದಿಲ್ಲ. ಹಾಗಾಗಿ ವರ್ಗಗಳು ಇನ್ನೂ ಉಳಿದಿರುತ್ತವೆ ಮತ್ತು ಕಾರ್ಮಿಕ ವರ್ಗದ ಸರ್ವಾಧಿಕಾರದ ಯುಗದಲ್ಲಿಯೂ ಉಳಿಯುತ್ತವೆ.ವರ್ಗಗಳು ಕಣ್ಮರೆಯಾದಾಗ ಕಾರ್ಮಿಕ ವರ್ಗದ ಸರ್ವಾಧಿಕಾರವು ಅನಗತ್ಯವಾಗುತ್ತದೆ. ಆದರೆ ಕಾರ್ಮಿಕ ವರ್ಗದ ಸರ್ವಾಧಿಕಾರವಿಲ್ಲದೆ ಅವು ಕಣ್ಮರೆಯಾಗುವುದಿಲ್ಲ.**

**– ಲೆನಿನ್**

“ಕಾರ್ಮಿಕರು ತಮ್ಮ ಸೇವಾ ಸವಲತ್ತುಗಳನ್ನು ಹೆಚ್ಚಿಸಿಕೊಳ್ಳಲು ಹೋರಾಡಬೇಕು ಸರಿ. ಹಾಗಾಗಿ ತಮ್ಮದೇ ಟ್ರೇಡ್ ಯೂನಿಯನ್ ಹೊಂದಿ ಹೋರಾಟದ ಮೂಲಕ ಅದನ್ನು ಗಳಿಸಿಕೊಳ್ಳಬೇಕು ಅನ್ನುವುದೂ ಸರಿಯೇ. ಆದರೆ ಅದೇನಿದ್ದರೂ ಈ ಬಂಡವಾಳಶಾಹಿ ವ್ಯವಸ್ಥೆಯ ಒಳಗೆಯೇ ತಮ್ಮ ಸ್ಥಿತಿಯ ಸುಧಾರಣೆಗಾಗಿ ಹೋರಾಟ. ಈ ಸುಧಾರಣೆಯಾದರೂ ಎಂತಹದ್ದು? ಗುಲಾಮಗಿರಿ ವ್ಯವಸ್ಥೆಯಲ್ಲಿ ಗುಲಾಮರಾದವರು, 5ನೇ ಪುಟಕ್ಕೆ

## ವಿವಿಧ ಜಿಲ್ಲೆಗಳಲ್ಲಿ ನವೆಂಬರ್ ಮಹಾಕ್ರಾಂತಿಯ 107ನೇ ವಾರ್ಷಿಕದ ಆಚರಣೆ


ಬಳ್ಳಾರಿ



ಮೈಸೂರು



ಹೊಸಪೇಟೆ



ಧಾರವಾಡ

# ಹೊಸ ಕಾರ್ಮಿಕ ಸಂಹಿತೆ

# ಮತ್ತಷ್ಟು ಸಂಕಟಮಯವಾದ ಕಾರ್ಮಿಕರ ಬದುಕು!

ನಮ್ಮ ದೇಶದಲ್ಲಿ ಕಾರ್ಮಿಕರ ಸಾವಿಗೆ ಮತ್ತು ಗಂಭೀರ ಗಾಯಗಳಿಗೆ ಕಾರಣವಾಗಿರುವ ಕೈಗಾರಿಕಾ ಅಪಘಾತಗಳು ವಿಪರೀತವಾಗಿ ಹೆಚ್ಚುತ್ತಿವೆ. ಇದೇ ವರ್ಷದ ಅಗಸ್ಟ್ 21 ರಂದು ಆಂಧ್ರಪ್ರದೇಶದ ಅಂಕಪಲ್ಲಿ ಜಿಲ್ಲೆಯ ವಿಶೇಷ ಆರ್ಥಿಕ ವಲಯದಲ್ಲಿ ಎಸ್ಕ್‌ಇನ್ಷಿಯಾ ಅಡ್ವಾನ್ಸ್ಡ್ ಸೈನ್ಸಸ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯಲ್ಲಿ ನಡೆದ ಅಪಘಾತವು 17 ಜನರ ಅಮೂಲ್ಯ ಜೀವವನ್ನು ಬಲಿ ತೆಗೆದುಕೊಂಡಿತು ಮತ್ತು 36 ಜನರು ತೀವ್ರವಾಗಿ ಗಾಯಗೊಂಡರು. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದಂತೆ, ಕಳೆದ 2019 ರಿಂದ ಕೇವಲ ವಿಶಾಖಪಟ್ಟಣ ಜಿಲ್ಲೆಯಲ್ಲೇ 119 ಕೈಗಾರಿಕಾ ಅಪಘಾತಗಳಲ್ಲಿ 120 ಜೀವಗಳು ಬಲಿಯಾಗಿವೆ. ಗುಜರಾತಿನ ಬಿಜೆಪಿ ಸರ್ಕಾರ ವಿಧಾನಸಭೆಗೆ ತಿಳಿಸಿದಂತೆ, 2020 ರಿಂದ 587 ಕೈಗಾರಿಕಾ ಅಪಘಾತಗಳು ನಡೆದು 700 ಕಾರ್ಮಿಕರು ಸತ್ತರೆ, 213 ಕಾರ್ಮಿಕರು ಗಂಭೀರವಾಗಿ ಗಾಯಗೊಂಡರು. ದೆಹಲಿಯ ಕಾರ್ಮಿಕ ಇಲಾಖೆ ಬಿಡುಗಡೆ ಮಾಡಿದ ವರದಿಯ ಪ್ರಕಾರ, 2018 ರಿಂದ 2022 ರ ಮಧ್ಯೆ 13,464 ನೋಂದಾಯಿತ ಕಾರ್ಖಾನೆಗಳಲ್ಲಿ 118 ಅಪಘಾತಗಳು ವರದಿಯಾಗಿವೆ. ತೀರಾ ಇತ್ತೀಚೆಗೆ ಪಶ್ಚಿಮ ಬಂಗಾಳದ ಬೀರ್‌ಭೂಮ್ ಜಿಲ್ಲೆಯ ಖಾಸಗಿ ಮಾಲೀಕತ್ವದ ಗಂಗಾರಾಂಪುರ ಗಣಿಯಲ್ಲಿ ನಡೆದ ಸ್ಫೋಟದಿಂದಾಗಿ 8 ಕಾರ್ಮಿಕರು ಮರಣ ಹೊಂದಿದರು ಮತ್ತು ಹಲವರಿಗೆ ಗಂಭೀರ ಗಾಯಗಳಾಗಿವೆ. ಕಾರ್ಮಿಕ ಸಚಿವಾಲಯವು ಪ್ರಕಟಿಸಿದ ಅಂಕಿಅಂಶಗಳಿಂದ ತಿಳಿದು ಬರುವುದೇನೆಂದರೆ, ನೋಂದಾಯಿತ ಕಾರ್ಖಾನೆಗಳಲ್ಲಿ ನಡೆದ ಅಪಘಾತಗಳಿಂದಾಗಿ ಪ್ರತಿದಿನ ಸರಾಸರಿ ಮೂವರು ಸಾವನ್ನಪ್ಪುತ್ತಾರೆ ಮತ್ತು ಹನ್ನೊಂದು ಕಾರ್ಮಿಕರು ಗಂಭೀರವಾಗಿ ಗಾಯಗೊಳ್ಳುತ್ತಾರೆ. ಸೂರತ್ ಎನ್‌ಐಟಿ ಮತ್ತು ದೆಹಲಿ ಐಐಟಿ ನಡೆಸಿದ ಅಧ್ಯಯನಗಳು ಭಾರತದಲ್ಲಿ ಪ್ರತಿವರ್ಷ 48,000 ಜನರು ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಜೀವ ಕಳೆದುಕೊಳ್ಳುತ್ತಾರೆ ಮತ್ತು ಅದರಲ್ಲಿ ಕನಿಷ್ಠ 11,614 ಸಾವುಗಳು ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಾಗುತ್ತವೆ ಎಂದು ಅಂದಾಜು ಮಾಡಿವೆ.

### ಅಸಂಘಟಿತ ಮತ್ತು ಅತಿಸಣ್ಣ, ಸಣ್ಣ, ಮಧ್ಯಮ ಉದ್ಯಮಗಳು (ಎಂಎಸ್‌ಎಂಇ)

ಕಾರ್ಮಿಕ ಕಾನೂನುಗಳನ್ನು ಅನುಸರಿಸಲೇಬೇಕಾದ ನೋಂದಾಯಿತ ಕೈಗಾರಿಕಾ ಘಟಕಗಳಿಂದ ತೆಗೆದುಕೊಂಡಿರುವುದರಿಂದ ಅದು ಮೇಲೆ ಕೊಟ್ಟಿರುವ ಅಂಕಿ ಅಂಶಗಳು ಸಮಸ್ಯೆಯ ಅಂಚನ್ನು ಮಾತ್ರ ತೋರಿಸುತ್ತದೆ. ಅಪಘಾತಕ್ಕೊಳಗಾದ ವ್ಯಕ್ತಿಗೆ ಪರಿಹಾರ ಮತ್ತು ವೈದ್ಯಕೀಯ ಖರ್ಚುಗಳನ್ನು ಭರಿಸಬೇಕಾಗುತ್ತದೆಯೆಂದು ಮಾಲೀಕರು ಅವುಗಳನ್ನು ವರದಿ ಮಾಡುವುದೇ ಇಲ್ಲ. ಎಂಎಸ್‌ಎಂಇ ಕ್ಷೇತ್ರದಲ್ಲಿ ಶೇ.35 ರಷ್ಟು ಕೆಲಸದ ಸ್ಥಳಗಳಲ್ಲಿ ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಭೀಕರ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ಭಾರತದ 52.2 ಕೋಟಿ ಕಾರ್ಮಿಕರಲ್ಲಿ ಶೇ.90 ರಷ್ಟು ಕಾರ್ಮಿಕರು ಇಂತಹ ಕ್ಷೇತ್ರದಲ್ಲೇ ಕೆಲಸ ಮಾಡುತ್ತಾರೆ. ಸರ್ಕಾರಿ ಅಂಕಿ ಅಂಶಗಳ ಪ್ರಕಾರ, ಅಸಂಘಟಿತ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಪ್ರತಿದಿನವೂ ಸರಾಸರಿ 38 ಭೀಕರ ಅಪಘಾತಗಳಾಗುತ್ತವೆ ಎಂದು ವರದಿಯಾಗಿದೆ. ಕಾರ್ಖಾನೆಗಳ ಕಾಯ್ದೆ, 1948ರ ಅಡಿಯಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಸುರಕ್ಷತೆ ಬರುವುದಿಲ್ಲ ಮತ್ತು ಅಲ್ಲಿ ಸಂಭವಿಸುವ ಅಪಘಾತಗಳ ಅಂಕಿಅಂಶಗಳನ್ನು ತಯಾರು ಮಾಡಿಲ್ಲ ಎಂದು ದೆಹಲಿ ಕಾರ್ಮಿಕ ಇಲಾಖೆಯು ಒಪ್ಪಿಕೊಂಡಿದೆ. ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಸಾಮಾನ್ಯವಾಗಿ ವಲಸೆ ಕಾರ್ಮಿಕರು ಹೆಚ್ಚಿಗಿದ್ದು, ಅವರು ಬಹುಮಹಡಿ ಕಟ್ಟಡಗಳ ಮೇಲೇರುವ ಕೆಲಸ ಮಾಡುವುದರಿಂದ ವಿದ್ಯುತ್ ಅಪಘಾತಕ್ಕೆ ಒಳಗಾಗುವುದು ಮತ್ತು ಕುಸಿತದಲ್ಲಿ ಹೂತು ಹೋಗುವುದು ಸಂಭವಿಸುತ್ತದೆ.


### ಕಾನೂನನ್ನು ತಿರುಚುವ ಮಾಲೀಕರು

ಕಾರ್ಮಿಕರ ದೇಹಕ್ಕೆ ಗಾಯವಾಗುವ ಅಥವಾ ಅಂಗವಿಕಲತೆ ತರುವ ಅಪಘಾತಗಳು ಕಾರ್ಖಾನೆಯಲ್ಲಿ ಸಂಭವಿಸಿದರೆ, ಅದನ್ನು ಮಾಲೀಕರು ವರದಿ ಮಾಡಬೇಕೆಂದು ಕಾರ್ಖಾನೆ ಕಾಯ್ದೆಯು ಕಡ್ಡಾಯ ಮಾಡಿದೆ. ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 39 ರಂತೆ, ವೈದ್ಯಕೀಯ ಕಾನೂನು ಪ್ರಕರಣಗಳನ್ನು (ಎಂಎಲ್‌ಸಿ) ವೈದ್ಯಾಧಿಕಾರಿಗಳು ಅಥವಾ ವೈದ್ಯರು ವರದಿ ಮಾಡಬೇಕು; ಇಲ್ಲವಾದರೆ ಅವರ ಮೇಲೆ ಕಾನೂನು ಕ್ರಮ ಜರುಗಿಸಬಹುದು. ನಮ್ಮ ದೇಶದಲ್ಲಿ ಅದೆಂತಹ ಮಟ್ಟದ ಭ್ರಷ್ಟಾಚಾರ ಮತ್ತು ರಾಜಕೀಯದ ಮಧ್ಯ ಪ್ರವೇಶವಿದೆಯೆಂದರೆ, ಕಡ್ಡಾಯವಾಗಿ ಪಾಲಿಸಬೇಕಾದ ಕಾನೂನುಗಳ ಉಲ್ಲಂಘನೆಯನ್ನು ಕಾರ್ಖಾನೆಯ ಪರಿಶೀಲಕರೂ ಸಹ ನಿರ್ಲಕ್ಷಿಸುತ್ತಾರೆ ಅಥವಾ ಮೌನವಾಗಿರುತ್ತಾರೆ. ಕೈಗಾರಿಕಾ ಅಪಘಾತಗಳು ಹೆಚ್ಚಲು ಕಾರಣವನ್ನು ತಿಳಿಯಲು ಬ್ರಹ್ಮವಿದ್ಯೆಯೇನೂ ಬೇಕಾಗಿಲ್ಲ. ತುರ್ತು ಸಂದರ್ಭಗಳಲ್ಲಿ ನಿರ್ವಹಿಸಲು ಬೇಕಾದ ಮುಂಜಾಗ್ರತಾ ಕ್ರಮಗಳ ಕೊರತೆ; ಸುರಕ್ಷತೆಯನ್ನು ಪರಿಶೀಲಿಸಬೇಕಾದ ಅಧಿಕಾರಿಗಳ ನಿರ್ಲಕ್ಷ್ಯ ಇವೇ ಕಾರಣ. ಉದಾಹರಣೆಗೆ, ಕೆಮಿಕಲ್ ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ ಮೂಲಭೂತ ತರಬೇತಿಗಳನ್ನೂ ನೀಡದೆ ರಿಯಾಕ್ಟರ್ ನಿರ್ವಹಿಸುವ ಕೆಲಸ ಮಾಡಿಸುವುದು ಮತ್ತು ಅವರಿಗೆ ಸುರಕ್ಷಾ ಪರಿಕರಗಳನ್ನು ಕೊಡದಿರುವುದು ಸಹ ನಡೆಯುತ್ತದೆ. ಕೆಮಿಕಲ್ ಕಾರ್ಖಾನೆಗಳಲ್ಲಿ ಸೋರಿಕೆಯಾದರೆ ಅಥವಾ ಬೆಂಕಿ ಹತ್ತಿದರೆ ಅದನ್ನು ಆರಿಸಲು ಬೇಕಾದ ಫೋಮ್ ದಾಸ್ತಾನು ಕೂಡ ಇರುವುದಿಲ್ಲ. ಕೈಗಾರಿಕಾ ಅಪಘಾತಗಳು ಕಾರ್ಮಿಕರ ಜೀವ ಬಲಿತೆಗೆದುಕೊಂಡರೂ ಅಥವಾ ಅಂಗವಿಕಲರನ್ನಾಗಿ ಮಾಡಿದರೂ ಸಹ ಮಾಲೀಕರಿಗೆ ಅಥವಾ ಅದಕ್ಕೆ ಕಾರಣರಾದ ಆಡಳಿತ ವರ್ಗದವರಿಗೆ ಶಿಕ್ಷೆಯಾದ ನಿದರ್ಶನಗಳು ಇಲ್ಲ. ಇದಕ್ಕೆ ಕೈಗಾರಿಕೋದ್ಯಮಿಗಳಿಗೂ ಮತ್ತು ರಾಜಕಾರಣಿಗಳಿಗೂ ಇರುವ ನಂಟು ಸಾಮಾನ್ಯ ಕಾರಣ. ಮಹಾರಾಷ್ಟ್ರದ ಡೊಂಬಿವಿಲಿ ಕೆಮಿಕಲ್ ಕಾರ್ಖಾನೆಯಲ್ಲಿ ಸ್ಫೋಟವಾದಾಗ 13 ಕಾರ್ಮಿಕರು ಜೀವ ಕಳೆದುಕೊಂಡರು. ಅದರ ಮಾಲೀಕನನ್ನು ಬಂಧಿಸಲಾಯಿತು. ಆದರೆ ಮೂರು ವಾರಗಳಲ್ಲಿ ಜಾಮೀನು ಪಡೆದು ಆತ ಹೊರಬಂದನು. ಸ್ಫೋಟವು ದೇವರ ಆಟವೆಂದು ಹೇಳಿಬಿಟ್ಟರು.

### ಸಡಿಲಗೊಂಡ ಕಾರ್ಮಿಕರ ಸುರಕ್ಷತಾ ಕಾನೂನುಗಳು

ಇತ್ತೀಚಿನ ಅಪಘಾತಗಳು ಕಾನೂನುಗಳನ್ನು ಮತ್ತಷ್ಟು ಬಿಗಿಗೊಳಿಸುವ ಅವಶ್ಯಕತೆಯನ್ನು ಎತ್ತಿ ತೋರಿಸುತ್ತಿವೆ. ಆದರೆ ಸರ್ಕಾರ ಮಾಲೀಕರ ಪರವಾಗಿ ಕಾನೂನುಗಳನ್ನು ಸಡಿಲಗೊಳಿಸುತ್ತಿದೆ. ಕೆಲಸ ಮಾಡುವ ಸ್ಥಳದಲ್ಲಿ ಸುರಕ್ಷತೆ, ಆರೋಗ್ಯ ಹಾಗೂ ಕೆಲಸದ ಪರಿಸ್ಥಿತಿಗಳನ್ನು ನಿಯಂತ್ರಿಸುವ ಕಾಯ್ದೆಯಾದ 'ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಸಂಹಿತೆ'ಯನ್ನು (ಓಎಸ್‌ಎಚ್ ಸಂಹಿತೆ) 2020 ರಲ್ಲಿ ಜಾರಿಗೆ ತರಲಾಯಿತು. ಇದರಲ್ಲಿ ಹಲವಾರು ಆರ್ಥಿಕ ಚಟುವಟಿಕೆಗಳ ಶಾಖೆಗಳನ್ನು, ಮುಖ್ಯವಾಗಿ ಶೇ.50ಕ್ಕೂ ಹೆಚ್ಚು ಕಾರ್ಮಿಕರಿರುವ ಕೃಷಿ ಕ್ಷೇತ್ರ ಹಾಗೂ ಸಣ್ಣ ಗಣಿಗಳು, ಹೋಟೆಲ್, ಆಹಾರಸ್ಥಳಗಳು, ಯಂತ್ರ ರಿಪೇರಿ ಕೇಂದ್ರಗಳು, ಇಟ್ಟಿಗೆಗೂಡು, ಕಟ್ಟಡ ನಿರ್ಮಾಣ, ಪಟಾಕಿ, ಕಾರ್ಪೆಟ್ ತಯಾರಿಕಾ ಕೇಂದ್ರ ಮತ್ತು ಅಸಂಘಟಿತ ಕಾರ್ಮಿಕರಿರುವ ಕ್ಷೇತ್ರಗಳನ್ನು ಹೊರಗಿಡಲಾಗಿದೆ. ಇದು ಓಎಸ್‌ಎಚ್ ಜಂಭ ಕೊಚ್ಚಿಕೊಳ್ಳುವ ಕಾರ್ಮಿಕರ ಸುರಕ್ಷತೆಯ ಕ್ರಮಗಳ ಸತ್ಯ ಬಯಲು ಮಾಡಿದೆ.

ಕೈಗಾರಿಕಾ ಕಾಯ್ದೆ, 1948 ರಲ್ಲಿ ಕಾರ್ಖಾನೆ




ದೊಡ್ಡದಿರಲಿ ಅಥವಾ ಚಿಕ್ಕದಿರಲಿ, ಅಪಾಯಕಾರಿ ಕಾರ್ಖಾನೆಗಳು ಸುರಕ್ಷತಾ ಸಮಿತಿಗಳನ್ನು ರಚಿಸುವುದನ್ನು ಕಡ್ಡಾಯ ಮಾಡಿದೆ. ಆದರೆ ಓಎಸ್‌ಎಚ್ ಸಂಹಿತೆಯು ಅಂತಹ ಸಮಿತಿ ರಚಿಸಲು ಅಪಾಯದ ಕಾರ್ಖಾನೆಗಳಲ್ಲಿ 250 ಮತ್ತು ಇನ್ನಿತರ ಕಾರ್ಖಾನೆಗಳಲ್ಲಿ 500 ಕಾರ್ಮಿಕರಿರಬೇಕೆಂದು ತಿದ್ದುಪಡಿ ಮಾಡಿದೆ. ಇದು ದೇಶದ ಶೇ.90 ರಷ್ಟು ಕಾರ್ಖಾನೆಗಳನ್ನು ಸುರಕ್ಷತೆಯ ಪರಿಧಿಯಿಂದ ಹೊರಹಾಕುತ್ತದೆ. ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ವಿಷಯದಲ್ಲಿ ಮಾಲೀಕರಿಗೆ ಯಾವುದೇ ಜವಾಬ್ದಾರಿ ಇರುವುದಿಲ್ಲ. ಔದ್ಯೋಗಿಕ ಸುರಕ್ಷತೆ, ಆರೋಗ್ಯ, ಪ್ರತಿದಿನ ಮತ್ತು ವಾರದ ಕೆಲಸದ ಅವಧಿಯ ಬಗ್ಗೆ ಕನಿಷ್ಠ ಗುಣಮಟ್ಟವನ್ನೂ ಸೂಚಿಸಿಲ್ಲ. ಬದಲಿಗೆ, ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ನೋಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡಲಾಗಿದೆ. ವೇತನ ಮತ್ತು ಉದ್ಯೋಗದ ಇನ್ನಿತರ ವಿಷಯಗಳಲ್ಲಿ ಖಾಯಂ ಕಾರ್ಮಿಕರಿಗಿಂತ ಸಂಖ್ಯೆಯಲ್ಲಿ ಹೆಚ್ಚಾಗುತ್ತಿರುವ ಕಾಂಟ್ರಾಕ್ಟ್ ಕಾರ್ಮಿಕರನ್ನು ಸಮಾನ ರೀತಿಯಲ್ಲಿ ನೋಡುವುದರ ಬಗ್ಗೆ ಯಾವ ಇಂಗಿತವೂ ಇಲ್ಲ.

ಪಡಿತರ ವ್ಯವಸ್ಥೆಗೆ ಸಂಬಂಧಪಟ್ಟಂತೆ ನೋಂದಾವಣೆ, ವರ್ಗಾವಣೆ ಮತ್ತು ತಮ್ಮ ಸಮಸ್ಯೆಗಳನ್ನು ತಿಳಿಸಲು ಸಂಬಂಧಪಟ್ಟ ಅಧಿಕಾರಿಗಳ ಟೋಲ್ ಫ್ರೀ ಫೋನ್ ನಂಬರ್‌ಗಳ ಬಗ್ಗೆ ದೊಡ್ಡದಾಗಿ ಮಾತನಾಡುತ್ತಾರೆ. ಆದರೆ ಇವುಗಳನ್ನು ಜಾರಿಗೆ ತರುವುದರ ಬಗ್ಗೆ ದೊಡ್ಡ ಪ್ರಶ್ನೆಯಿದೆ. ಜೊತೆಗೆ, ರಾಜ್ಯದೊಳಗಿನಿಂದ ಬರುವ ಕಾರ್ಮಿಕರಿಗಿಂತ ದೊಡ್ಡ ಸಂಖ್ಯೆಯಲ್ಲಿರುವ ಮತ್ತು ಹೆಚ್ಚು ಅಪಾಯಕ್ಕೆ ಸಿಲುಕುವ ಹೊರರಾಜ್ಯಗಳ ಕಾರ್ಮಿಕರ ಬಗ್ಗೆ ಸಂಹಿತೆಯು ಏನನ್ನೂ ಹೇಳಿಲ್ಲ. ವಲಸೆ ಹಾಗೂ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಾಮಾಜಿಕ ಸುರಕ್ಷತೆಯ ನಿಧಿಯನ್ನು ಘೋಷಿಸಲಾಗಿದೆ, ಆದರೆ ಬಜೆಟ್‌ನಲ್ಲಿ ಹಣ ನೀಡಿಲ್ಲ. ಇದರರ್ಥ, ವಲಸೆ ಕಾರ್ಮಿಕರಿಗೆ ಅಪಘಾತ, ಕಾರ್ಖಾನೆ ಮುಚ್ಚುವಿಕೆ ಹಾಗೂ ಸಾಂಕ್ರಾಮಿಕ ರೋಗದ ಸಂದರ್ಭದ ಲಾಕ್‌ಡೌನ್‌ಗಳಿಂದ ಯಾವ ವಿಶೇಷ ರಕ್ಷಣೆಗಳೂ ಇಲ್ಲ.

### ರಾಜ್ಯದ ನಿರ್ದೇಶನಾ ತತ್ವಗಳು ಏನು ಹೇಳುತ್ತವೆ?

ಪ್ರಧಾನಿ ಮೋದಿಯವರು ಪ್ರಮಾಣ ವಚನ ಸ್ವೀಕರಿಸುವಾಗ ಸಂವಿಧಾನವನ್ನು ಹಣೆಗೊತ್ತಿಕೊಂಡು ಸಂವಿಧಾನದ ಬಗ್ಗೆ ತಮಗೆಷ್ಟು ಬದ್ಧತೆಯಿದೆಯೆಂದು ತೋರಿಸಿದರು. ಆದರೆ ಸಂವಿಧಾನದ 'ರಾಜ್ಯ ನೀತಿಯ ನಿರ್ದೇಶನಾ ತತ್ವ'ಗಳು (Directive Principles of the State Policy) ಪುರುಷ ಹಾಗೂ ಮಹಿಳೆಯರಿಬ್ಬರನ್ನೂ ಸಬಲೀಕರಣಗೊಳಿಸಲು ಜೀವನೋಪಾಯದ ಹಕ್ಕುಗಳು ಹಾಗೂ ಕಾರ್ಮಿಕರ ಆರೋಗ್ಯ ಹಾಗೂ ಶಕ್ತಿಗಳನ್ನು ಖಚಿತಪಡಿಸುವುದು (30ನೇ ವಿಧಿ); ನಿರುದ್ಯೋಗ, ವೃದ್ಧಾಪ್ಯ, ಅನಾರೋಗ್ಯ ಹಾಗೂ ಅಸಾಮರ್ಥ್ಯ ಮುಂತಾದ ಸಂದರ್ಭಗಳಲ್ಲಿ ಸಾರ್ವಜನಿಕ ಸಹಾಯ ನೀಡುವುದು (41ನೇ ವಿಧಿ); ನ್ಯಾಯಬದ್ಧ ಹಾಗೂ ಮಾನವೀಯ ಕೆಲಸದ ಪರಿಸ್ಥಿತಿಯನ್ನು ಸೃಷ್ಟಿಸುವುದು (42ನೇ ವಿಧಿ); ಜೀವನ ನಿರ್ವಹಣೆಗಾಗಿ ವೇತನ ಗಳಿಸುವುದು, ಸಭ್ಯ ಜೀವನ ನಡೆಸಲು ಸಾಧ್ಯವಾಗುವಂತಹ ಕೆಲಸದ ಪರಿಸ್ಥಿತಿಯನ್ನು ವಿಸ್ತರಿಸುವುದು ಹಾಗೂ ವಿರಾಮ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ನೀಡುವುದು (43ನೇ ವಿಧಿ) ಮುಂತಾದವುಗಳನ್ನು ಖಾತ್ರಿಪಡಿಸಲು ನೀತಿ ಅಥವಾ ಕಾನೂನುಗಳನ್ನು ರೂಪಿಸಬೇಕು ಎಂದು ಹೇಳುತ್ತವೆ. ಹಾಗಾದರೆ ಮೋದಿ ಸರ್ಕಾರ ಸಂವಿಧಾನದ ಈ ಆಶಯಗಳಿಗೆ ಬದ್ಧವಾಗಿದೆಯೇ? ಖಂಡಿತ ಇಲ್ಲ.

### ಜಾರಿಹೋದ ಕಾರ್ಮಿಕ ಸಂಹಿತೆಗಳ ಜಾರಿ

ಸಂಹಿತೆಯಲ್ಲಿ ಕಾರ್ಮಿಕರ ಸುರಕ್ಷತೆಯ ಬಗ್ಗೆ ಎಷ್ಟೇ ಒತ್ತು ನೀಡಿದ್ದರೂ ವಾಸ್ತವದಲ್ಲಿ ಜಾರಿಯಾಗಿರುವುದು ಸೊನ್ನೆ. ಹಿಂದಿನ ಕೈಗಾರಿಕಾ ಕಾಯ್ದೆ 1948, ಕಾರ್ಖಾನೆ ನಿರೀಕ್ಷಕರು ಮತ್ತು ಪರಿಶೋಧಕರಿಗೆ ನೀಡಿದ್ದ ಅಲ್ಪಸ್ವಲ್ಪ ಅಧಿಕಾರವನ್ನೂ ಹೊಸ ಸಂಹಿತೆ ಕಸಿದುಕೊಂಡಿದೆ. ಸರ್ಕಾರವು ಕೈಗಾರಿಕಾ ಕಾಯ್ದೆ 1948, ವೃತ್ತಪತ್ರಿಕೆ ಕಾರ್ಮಿಕರ ಕಾಯ್ದೆ 1955 ಸೇರಿದಂತೆ 13 ಸಣ್ಣಪುಟ್ಟ ಶಾಸನಗಳನ್ನು ಒಂದುಗೂಡಿಸಿದೆ. ಹೊಸ ಸಂಹಿತೆ ಪ್ರಕಾರ ನಿರೀಕ್ಷಕರು ಕಾರ್ಖಾನೆಗಳಿಗೆ ದಿಢೀರ್ ಭೇಟಿ ನೀಡುವ ಹಾಗಿಲ್ಲ. ಈ ಸಂಹಿತೆಯಡಿ ಬರುವ ಅಪರಾಧಗಳಿಗೆ ದಂಡ ಮತ್ತು ಮೂರು ತಿಂಗಳ ಜೈಲು ಶಿಕ್ಷೆ ನೀಡಬಹುದು; ಆದರೆ ಸಂಬಂಧಪಟ್ಟ ಸರ್ಕಾರದ ಅನುಮತಿಯಿಲ್ಲದೆ ಯಾವ ನ್ಯಾಯಾಲಯವೂ ವಿಚಾರಣೆ ನಡೆಸುವಂತಿಲ್ಲ. ಅಸಂಘಟಿತ ಕಾರ್ಮಿಕರು ಯಾವ ಕಾರ್ಮಿಕ ಸಂಹಿತೆಯಡಿಯೂ ಬರುವುದಿಲ್ಲ.

ಈ ನೆಲದ ಕಾನೂನು ಜೀವ ಕಳೆದುಕೊಳ್ಳುವ ಕಾರ್ಮಿಕರ ಪರವಾಗಿ ಇಲ್ಲದಿರುವುದರಿಂದ, ಕಾರ್ಮಿಕರಿಗೆ ಸಂಘಟಿತರಾಗಿ ಹೋರಾಟ ನಡೆಸದೆ ಅನ್ಯ ಮಾರ್ಗವಿಲ್ಲ. ಭಾರತದ ಕಾರ್ಮಿಕರು ಅತ್ಯಂತ ನಿರಂಕುಶಾಧಿಕಾರಿ ವಸಾಹತು ಆಳ್ವಿಕರ ವಿರುದ್ಧ ಧೀರೋದಾತ್ತವಾಗಿ ಹೋರಾಡಿದ್ದಾರೆ. ಇದರ ಪ್ರತಿಫಲವೇ ಕಾರ್ಮಿಕ ಸಂಘಗಳ ಕಾಯ್ದೆ 1926; ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯ್ದೆ 1946; ಕೈಗಾರಿಕಾ ವಿವಾದ ಕಾಯ್ದೆ 1947. ಇವುಗಳ ಪ್ರಕಾರ ಕಾರ್ಮಿಕ ಸಂಘ ಕಟ್ಟಿಕೊಳ್ಳುವುದು ಹಕ್ಕಾದರೂ, ಮಾಲೀಕರು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವ ಹಾಗೂ ಇತರ ರೀತಿಯ ಬೆದರಿಕೆಗಳ ಮೂಲಕ ಕಾನೂನು ಉಲ್ಲಂಘನೆ ಮಾಡುತ್ತಾರೆ. ಖಾಲಿ ಹುದ್ದೆಗಳನ್ನು ಗುತ್ತಿಗೆ ಕಾರ್ಮಿಕರಿಂದ ತುಂಬಿಸುತ್ತಾರೆ. ಬಿಜೆಪಿಯ 'ಅಮೃತ ಕಾಲ'ದಲ್ಲಿ ತಿದ್ದಪಡಿಯಾದ ಕೈಗಾರಿಕಾ ಸಂಬಂಧಗಳ ಸಂಹಿತೆಯು (ಐಆರ್‌ಸಿ) ಕಾರ್ಮಿಕರು ರಕ್ತ, ಬೆವರು ಸುರಿಸಿ ಗಳಿಸಿದ ಕಾರ್ಮಿಕ ಸಂಘದ ಹಕ್ಕನ್ನು ಕಸಿದುಕೊಂಡಿದೆ.

ಐಆರ್‌ಸಿ ಕಾರ್ಮಿಕ ಸಂಘಗಳನ್ನು ರಚಿಸಲು ಹಲವಾರು ಷರತ್ತುಗಳನ್ನು ವಿಧಿಸಿದೆ 6ನೇ ಪುಟಕ್ಕೆ


## ವಕ್ಫ್ ಕಾಯ್ದೆ ತಿದ್ದುಪಡಿ!

# ಕೇಂದ್ರ ಸರ್ಕಾರದ ಮತ್ತೊಂದು ಧರ್ಮವಿಭಜಕ ಕುತಂತ್ರ

ಕಳೆದ ಆಗಸ್ಟ್ 8 ರಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ವಕ್ಫ್ (ತಿದ್ದುಪಡಿ) ಮಸೂದೆ 2024ರ ಪ್ರಸ್ತಾವನೆ ಸಲ್ಲಿಸಿತು. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳ ತಿದ್ದುಪಡಿಯ ವಿರುದ್ಧ ಗಂಭೀರ ಆಕ್ಷೇಪಣೆಗಳೆದ್ದ ಕಾರಣ, ಮಸೂದೆಯನ್ನು ಈಗ ಹೆಚ್ಚಿನ ಪರಿಶೀಲನೆಗಾಗಿ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ನೇತೃತ್ವದ 31 ಸದಸ್ಯರ ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಲಾಗಿದೆ. ಆಡಳಿತ ಪಕ್ಷ ಮಾತ್ರವಲ್ಲ, ಕೆಲವು ವಿರೋಧ ಪಕ್ಷಗಳು ಕೂಡ ತಮ್ಮ ತಮ್ಮ ಮತೀಯ ರಾಜಕೀಯ ಹಿತಾಸಕ್ತಿಗಳಿಗಾಗಿ ದೋಷಪೂರಿತ ಪ್ರಚಾರವನ್ನು ಹಬ್ಬಿಸಲು ತೊಡಗಿವೆ. ಇಂತಹ ವಿಧೇಯಕವನ್ನು ತರುವುದರ ಹಿಂದೆ ಆಡಳಿತಾರೂಢ ಪಕ್ಷವು ದುಷ್ಟ ಉದ್ದೇಶವನ್ನು ಹೊಂದಿದೆ ಎಂಬುದು ಸ್ಪಷ್ಟವಾಗಿದೆ. ಭಾರತವು ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು, ಬೌದ್ಧರು, ಜೈನರು, ಸಿಖ್ಖರು ಮತ್ತು ಇತರ ಅನೇಕ ಧಾರ್ಮಿಕ ಗುಂಪುಗಳು ಮತ್ತು ಸಮುದಾಯಗಳನ್ನು ಒಳಗೊಂಡ ಬಹು–ಧರ್ಮೀಯ ಸಮಾಜವಾಗಿರುವುದರಿಂದ, ಯಾವುದೇ ಧಾರ್ಮಿಕ ಕಾನೂನುಗಳಿಗೆ ಯಾವುದೇ ಬದಲಾವಣೆ ತರುವುದು ಸೂಕ್ಷ್ಮವಾದದ್ದು ಮತ್ತು ಇವುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.

### ಏನಿದು ವಕ್ಫ್?

ಇಸ್ಲಾಮಿಕ್ ಕಾನೂನಿನ ಅಡಿಯಲ್ಲಿ, ವಕ್ಫ್ ಎನ್ನುವುದನ್ನು ಧಾರ್ಮಿಕ ಮತ್ತು ದತ್ತಿ ಉದ್ದೇಶಗಳಿಗಾಗಿ ರಚಿಸಲಾಗಿದೆ. ಮಸೀದಿಗಳು, ಭೂಮಿ, ಮನೆಗಳು, ಆಸ್ಪತ್ರೆಗಳು, ಕಚೇರಿಗಳು, ಕಟ್ಟಡಗಳು ಮತ್ತು ಯಾವುದೇ ಇತರ ಭೌತಿಕ ಆಸ್ತಿಗಳು ವಕ್ಫ್ ಅಡಿಯಲ್ಲಿ ಬರುತ್ತವೆ. ವಕ್ಫ್ ಆಸ್ತಿಗಳು ಕಾನೂನು ವಿಧಾನಗಳ ಮೂಲಕ ಸ್ವಾಧೀನಪಡಿಸಿಕೊಂಡಿರುವ ಖಾಸಗಿ ಆಸ್ತಿಗಳಾಗಿವೆ. ಒಮ್ಮೆ ವಕ್ಫ್ ಅನ್ನು ಸ್ಥಾಪಿಸಿದರೆ, ಅದು ಶಾಶ್ವತವಾಗಿರುತ್ತದೆ, ಬದಲಾಯಿಸಲಾಗದು ಮತ್ತು ಅದನ್ನು ಮರಳಿ ಖರೀದಿಸಲು, ಉಡುಗೊರೆಯಾಗಿ ನೀಡಲು, ಆನುವಂಶಿಕವಾಗಿ ಪಡೆಯಲು ಅಥವಾ ಮಾರಾಟ ಮಾಡಲು ಸಾಧ್ಯವಿಲ್ಲ. ವಕ್ಫ್‌ನ ಫಲಾನುಭವಿಗಳು ಮುಸ್ಲಿಮರು ಮತ್ತು ಮುಸ್ಲಿಮೇತರರೂ ಆಗಿರುತ್ತಾರೆ. ಒಟ್ಟಿನಲ್ಲಿ ಧರ್ಮಭೇದವಿಲ್ಲದೆ ಬಡ ಜನಸಾಮಾನ್ಯರಿಗೆ ಸಹಾಯವಾಗಲೆಂದು ವಕ್ಫ್ ಸ್ಥಾಪನೆ ಮಾಡಲಾಗಿತ್ತು. ವಕ್ಫ್‌ಗಳನ್ನು ವಕ್ಫ್ ಕಾಯಿದೆ 1995 ಮತ್ತು




ಮುಸಲ್ಮಾನ್ ವಕ್ಫ್ ಕಾಯಿದೆ, 1923 ರ ಮೂಲಕ ನಿಯಂತ್ರಿಸಲಾಗುತ್ತದೆ.

### ಸರ್ಕಾರ ಮತ್ತು ಧಾರ್ಮಿಕ ಕೇಂದ್ರಗಳು

ಪ್ರಜಾಸತ್ತಾತ್ಮಕ ನಿಯಮಗಳು ಮತ್ತು ತತ್ವಗಳು ಎಲ್ಲಾ ಧರ್ಮಗಳನ್ನು ಪ್ರಭುತ್ವದ ಮುಂದೆ ಸಮಾನವೆಂದು ಗುರುತಿಸಬೇಕು ಮತ್ತು ಯಾವುದೇ ಧರ್ಮಕ್ಕೆ ಇತರಕ್ಕಿಂತ ಹೆಚ್ಚು ಆದ್ಯತೆ ನೀಡಬಾರದು ಎಂದು ಷರತ್ತು ವಿಧಿಸುತ್ತವೆ.

ಪ್ರಭುತ್ವವು ಯಾವುದೇ ಧರ್ಮವನ್ನು ಉತ್ತೇಜಿಸುವುದಿಲ್ಲ ಅಥವಾ ವಿರೋಧಿಸುವುದಿಲ್ಲ. ಎಲ್ಲಾ ಧಾರ್ಮಿಕ ಪಂಗಡಗಳು ಧರ್ಮದ ವಿಷಯಗಳಲ್ಲಿ ತಮ್ಮ ವ್ಯವಹಾರಗಳನ್ನು ನ್ಯಾಯಯುತವಾಗಿ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಿರ್ವಹಿಸಲು ಅವಕಾಶ ನೀಡಬೇಕು. 1882 ರ ಭಾರತೀಯ ಟ್ರಸ್ಟ್ ಕಾಯಿದೆಯು ಸಾರ್ವಜನಿಕ ಮತ್ತು ಖಾಸಗಿ ದೇವಾಲಯಗಳ ಆಡಳಿತಕ್ಕೆ ದೃಢವಾದ ಕಾನೂನು ಚೌಕಟ್ಟನ್ನು ಒದಗಿಸುತ್ತದೆ. ವಕ್ಫ್‌ಗಳು ಶಾಶ್ವತ ಇಸ್ಲಾಮಿಕ್ ಧಾರ್ಮಿಕ ದತ್ತಿಗಳಾಗಿವೆ. ವಕ್ಫ್ ಕಾಯಿದೆಯ ಆಧಾರವು ಷರಿಯಾ ಕಾನೂನಾಗಿದ್ದು, ಇತರ ಧಾರ್ಮಿಕ ಕಾರ್ಯಗಳು ಮುಖ್ಯವಾಗಿ ಇಂಡಿಯನ್ ಟ್ರಸ್ಟ್ ಆಕ್ಟ್ 1882 ಅನ್ನು ಆಧರಿಸಿವೆ. 'ಇಂಡಿಯನ್ ಚರ್ಚ್ ಆಕ್ಟ್, 1927' ಚರ್ಚುಗಳನ್ನು ನಿಯಂತ್ರಿಸುತ್ತದೆ. ಸಿಖ್ ಗುರುದ್ವಾರಗಳ ಕಾಯಿದೆ, 1925, ಭಾರತದಲ್ಲಿ ಸಿಖ್ ಗುರುದ್ವಾರಗಳ ಆಡಳಿತವನ್ನು ನಿಯಂತ್ರಿಸುತ್ತದೆ. ಸರ್ಕಾರವು ತನ್ನ ವ್ಯಾಖ್ಯಾನಿತ ಪಾತ್ರಕ್ಕೆ ಬದ್ಧವಾಗಿದ್ದರೆ, ಧರ್ಮನಿರಪೇಕ್ಷ ತತ್ವಗಳನ್ನು ಅನುಸರಿಸಬೇಕು. ಆದ್ದರಿಂದ ದೇವಾಲಯಗಳ, ಚರ್ಚುಗಳ, ಗುರುದ್ವಾರಗಳ ಅಥವಾ ಮಸೀದಿಗಳ ನಿರ್ವಹಣೆಯ ಮೇಲೆ ಯಾವುದೇ ನೇರ ನಿಯಂತ್ರಣವನ್ನು ಹೇರಲಾಗದು. ಧಾರ್ಮಿಕ ಸಂಸ್ಥೆಗಳ ಸ್ವಾಯತ್ತತೆಯನ್ನು ಸಾರ್ವಜನಿಕ ಅಭಿಪ್ರಾಯದ ಸಹಾಯದಿಂದ ಪ್ರಜಾಪ್ರಭುತ್ವದ ಕಕ್ಷೆಯೊಳಗೆ ಖಾತ್ರಿಪಡಿಸಿಕೊಳ್ಳಬೇಕು. ಬೇರೆ ರೀತಿಯಲ್ಲಿ ಹೇಳುವುದಾದರೆ, ಅಂತಹ ಧಾರ್ಮಿಕ ಪೂಜಾಸ್ಥಳಗಳು ಸಾರ್ವಜನಿಕ ನಿಯಂತ್ರಣದಲ್ಲಿ ಉಳಿಯುವುದು ಆಡಳಿತದ ತತ್ವವಾಗಿರಬೇಕು. ಯಾವುದೇ ಶಾಸಕಾಂಗದ ಹಸ್ತಕ್ಷೇಪ ಇರಬಾರದು. ಈ ಪೂಜಾಸ್ಥಳಗಳು ಮತ್ತು ಸಂಸ್ಥೆಗಳು ಯಾವುದೇ ವ್ಯೆಪರೀತ್ಯದಿಂದ ಮುಕ್ತವಾಗಿ ಸರಿಯಾಗಿ ನಡೆಯುವುದನ್ನು ಶಾಸಕಾಂಗ ಖಚಿತಪಡಿಸಿಕೊಳ್ಳುವುದು. ಆದರೆ, ಸ್ವಾತಂತ್ರ್ಯದ ನಂತರ, ನಮ್ಮ ದೇಶದ ಸರ್ಕಾರಗಳು–ಕೇಂದ್ರ ಮತ್ತು ರಾಜ್ಯಗಳೆರಡೂ, ವಸಾಹತುಶಾಹಿ ಪರಂಪರೆಯ ಭಾಗವಾಗಿ, ಸ್ವಯಂಸೇವಾ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಯುಜಿಸಿ, ಚುನಾವಣಾ ಆಯೋಗದಂತಹ ಪ್ರಜಾಪ್ರಭುತ್ವ ಸಂಸ್ಥೆಗಳಿಗೆ ಎಂದಿಗೂ ಸಂಪೂರ್ಣ ಸ್ವಾಯತ್ತತೆಯನ್ನು ಮಂಜೂರು ಮಾಡಿಲ್ಲ. ಯಾವುದೇ ಆಡಳಿತ ಪಕ್ಷಗಳು, ಸಾಮಾನ್ಯವಾಗಿ ಸರ್ಕಾರಿ ನಿಯಂತ್ರಣವನ್ನು ಎಂದಿಗೂ ವಿರೋಧಿಸಿಲ್ಲ, ಬದಲಿಗೆ ಅವರೇ ಅಧಿಕಾರವನ್ನು ತಮ್ಮ ಬಳಿ ಹಿಡಿದಿಟ್ಟುಕೊಳ್ಳುತ್ತಾರೆ. ಇದರ ಮುಂದುವರಿಕೆಯಾಗಿಯೇ ಈ ಮಸೂದೆ ಬಂದಿದೆ.

### ವಕ್ಫ್ ಕಾಯಿದೆಯಲ್ಲಿ ಪ್ರಸ್ತಾವಿತ ತಿದ್ದುಪಡಿಗಳು ಇಂತಿವೆ:

1. ವಕ್ಫ್ ಮಂಡಳಿಯನ್ನು ಹಲ್ಲಿಲ್ಲದ ಸಂಸ್ಥೆಯನ್ನಾಗಿ ಮಾಡಲು ಬಯಸುತ್ತವೆ.
2. ವಕ್ಫ್ ಟ್ರಿಬ್ಯೂನಲ್‌ಗಳ(ನ್ಯಾಯಾಲಯಗಳ) ತೀರ್ಪುಗಳ ಅಂತಿಮತೆಯನ್ನು ರದ್ದುಗೊಳಿಸುವುದು.
3. ಮುಸ್ಲಿಮೇತರ ವ್ಯಕ್ತಿಯ ಕಾನೂನುಬದ್ಧ ಒಡೆತನದ ಆಸ್ತಿಯನ್ನು ವಕ್ಫ್‌ಗೆ ದಾನ ಮಾಡುವ ಹಕ್ಕನ್ನು ನಿರ್ಬಂಧಿಸುವುದು.
4. ವಕ್ಫ್ ಬೋರ್ಡ್‌ಗಳು 12 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕಾಲ ವಕ್ಫ್ ಆಸ್ತಿಯನ್ನು ಆಕ್ರಮಿಸಿಕೊಂಡಿರುವ ಆಪಾದಿತ ಅತಿಕ್ರಮಣದಾರರನ್ನು ತೆಗೆದುಹಾಕಲು ಕಾನೂನಿನ ಆಶ್ರಯವನ್ನು ಪಡೆಯುವುದನ್ನು ತಡೆಯುವುದು.

### ಈಗೇಕೆ ತಿದ್ದುಪಡಿ?

ಬಿಜೆಪಿ ಸರ್ಕಾರದ ನೀತಿಗಳು ಸಮಾಜದಲ್ಲಿ ಕೋಮುವಾದವನ್ನು ಹೆಚ್ಚಿಸಲು ಪ್ರಯತ್ನ ಪಡುತ್ತಲೇ ಇವೆ. ದೇಶವಿರೋಧಿ ಚಟುವಟಿಕೆಗಳು ಮತ್ತು ಭ್ರಷ್ಟಾಚಾರವನ್ನು ನಿಗ್ರಹಿಸುವ ನೆಪದಲ್ಲಿ ಇಸ್ಲಾಮಿಕ್ ಸಂಸ್ಥೆಗಳನ್ನು ಹೆಚ್ಚು ಹೆಚ್ಚು ಸರ್ಕಾರಿ ನಿಯಂತ್ರಣಕ್ಕೆ ತರುವ ಉದ್ದೇಶವು ಈಗ ಸ್ಪಷ್ಟವಾಗಿದೆ. ಇತರ ವಿಷಯಗಳ ಹೊರತಾಗಿ, ಧರ್ಮದ ಆಧಾರದ ಮೇಲೆ ಜನರನ್ನು ವಿಭಜಿಸಲು ಆಳುವ ಬಂಡವಾಳಶಾಹಿ ವರ್ಗದ ದುರಾಲೋಚನೆಗೆ ಇದು ಸರಿಹೊಂದುತ್ತದೆ. ಹಾಗಾಗಿ, ಇತ್ತೀಚಿನ ವರ್ಷಗಳಲ್ಲಿ ಆರೆಸ್ಸೆಸ್–ಬಿಜೆಪಿಯಿಂದ ಈ ರೀತಿ ಹಲವಾರು ನೀತಿಗಳು ಬರುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ.

ನಮ್ಮ ಪಕ್ಷ, ಎಸ್‌ಯುಸಿಐ(ಸಿ) ಇಂತಹ ಕುತಂತ್ರ ಮತ್ತು ಅಸಂಬದ್ಧ ಯೋಜನೆಗಳನ್ನು ಬಲವಾಗಿ ಖಂಡಿಸುತ್ತದೆ, ವಕ್ಫ್ ಕಾಯಿದೆಗೆ ಯಾವುದೇ ತಿದ್ದುಪಡಿಯನ್ನು ತಕ್ಷಣವೇ ಕೈಬಿಡಬೇಕೆಂದು ಒತ್ತಾಯಿಸುತ್ತದೆ. ಇದರೊಂದಿಗೆ ದೇಶದ ಜನಸಾಮಾನ್ಯರೂ ಸಹ ಸರ್ಕಾರದ ಇಂತಹ ನೀತಿಗಳನ್ನು ವಿರೋಧಿಸಿ, ತಾವು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ವಿರುದ್ಧ ಹೋರಾಟ ಬೆಳೆಸಲು ಕರೆ ನೀಡುತ್ತದೆ.

# ನವೆಂಬರ್ ಮಹಾಕ್ರಾಂತಿಯ 107ನೇ ವಾರ್ಷಿಕ

3ನೇ ಪುಟದಿಂದ

ಪ್ರಜಾಪ್ರಭುತ್ವದಲ್ಲಿ ಅರೆಗುಲಾಮರಾಗುತ್ತಾರೆ. ಅಂದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರನ್ನು 'ವೇತನ ಗುಲಾಮರು' ಎನ್ನಬಹುದು. ಎಲ್ಲಾ ಕಾರ್ಮಿಕರು ಕಮ್ಯುನಿಸ್ಟರಾಗಿರುವುದಿಲ್ಲ. ಹಾಗಾಗಿಯೇ ಬರಿಯ ಟ್ರೇಡ್ ಯೂನಿಯನ್‌ಗಳ ಮೂಲಕ ಕ್ರಾಂತಿ ಬರುವುದಿಲ್ಲ. ಕ್ರಾಂತಿಕಾರಿ ಸಿದ್ಧಾಂತ ಹೊಂದಿದ ಕ್ರಾಂತಿಕಾರಿ ಪಕ್ಷ ಮಾತ್ರವೇ ಕ್ರಾಂತಿಯನ್ನು ತರಬಲ್ಲದು ಎಂದು ಕಾರ್ಮಿಕ ವರ್ಗದ ಮಹಾನ್ ಲೆನಿನ್‌ರವರು ನಿರೂಪಿಸಿದರು. ರಷ್ಯಾದಲ್ಲಿ ಕ್ರಾಂತಿ ತರುವಲ್ಲಿ ಅವರು ಯಶಸ್ವಿಯಾದರು. ಅವರ ಜೊತೆ ಇನ್ನೊರ್ವ ಮಹಾನ್ ನಾಯಕ ಸ್ಟಾಲಿನ್ ದೃಢವಾಗಿ ನಿಂತರು" ಎಂದು ವಿವರಿಸಿದರು.

ಅವರು ಮುಂದುವರೆಸುತ್ತಾ "ಮರಣಾಸನ್ನ ಬಂಡವಾಳವಾದದ ಪ್ರಸಕ್ತ ಯುಗದಲ್ಲಿ ವಿಶ್ವ ಬಂಡವಾಳವಾದವು ಸಾಮ್ರಾಜ್ಯವಾದದ ಹಂತವನ್ನು ಪ್ರವೇಶಿಸಿದೆ ಮತ್ತು ತೀವ್ರ ಪ್ರತಿಗಾಮಿಯಾಗಿದೆ; ಆದ್ದರಿಂದ ಎಲ್ಲಾ ದೇಶಗಳಲ್ಲೂ ಬೂರ್ಜ್ವಾಜಿಗಳು, ಹಾಗೂ ವಸಾಹತು ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಆಂದೋಲನಗಳಲ್ಲಿ ಭಾಗವಹಿಸುತ್ತಿರುವ ಬೂರ್ಜ್ವಾಜಿಗಳೂ ಸಹ, ಈ ಹಿಂದೆ ಹೊಂದಿದ್ದ ಕ್ರಾಂತಿಕಾರಿ ಗುಣಲಕ್ಷಣಗಳನ್ನು ಕಳೆದುಕೊಂಡಿದ್ದಾರೆ. ಏಕೆಂದರೆ ಅವರೂ ಸಹ ಅಂತರರಾಷ್ಟ್ರೀಯ ಪ್ರತಿಗಾಮಿ ಬೂರ್ಜ್ವಾಜಿಗಳ ಅವಿಭಾಜ್ಯ ಅಂಗವಾಗಿದ್ದಾರೆ. ಹಾಗಾಗಿಯೇ ಸಾಮ್ರಾಜ್ಯವಾದ ಮತ್ತು ಕಾರ್ಮಿಕ ಕ್ರಾಂತಿಯ ಈ ಯುಗದಲ್ಲಿ ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಗಳನ್ನು ಅವುಗಳ ತಾರ್ಕಿಕ ಅಂತ್ಯಕ್ಕೆ ಮುನ್ನಡೆಸಲು ಬೇಕಾದುದೆಂದರೆ, ಮೊದಲನೆಯದಾಗಿ ಅವನ್ನು ವಿಶ್ವ ಸಮಾಜವಾದಿ ಕ್ರಾಂತಿಯ ಭಾಗವಾಗಿಯೇ ಪರಿಗಣಿಸಬೇಕು, ಎರಡನೆಯದಾಗಿ, ಅವನ್ನು ಕಾರ್ಮಿಕವರ್ಗದ ನೇತೃತ್ವದಲ್ಲಿಯೇ ನಡೆಸಬೇಕು. ರಷ್ಯಾದ ಕ್ರಾಂತಿಯ ಬಳಿಕ ವಿವಿಧ ದೇಶಗಳ ಕ್ರಾಂತಿಕಾರಿಗಳು ಲೆನಿನ್‌ರ ಈ ವಿಚಾರಕ್ಕೆ ಸೂಕ್ತ ಮನ್ನಣೆ ಕೊಡಲು ಪ್ರಾರಂಭಿಸಿದರು."

"ಕಮ್ಯುನಿಸಂ ಸ್ಥಾಪನೆಯಾಗುವುದಕ್ಕೆ ಮುಂಚಿನ ಸ್ಥಿತ್ಯಂತರ ಘಟ್ಟವೇ ಸಮಾಜವಾದಿ ವ್ಯವಸ್ಥೆ. ಸಮಾಜವಾದದಲ್ಲಿ ಬಂಡವಾಳಶಾಹಿ ವರ್ಗವು ಇನ್ನೂ ಅಸ್ತಿತ್ವದಲ್ಲಿ ಇರುತ್ತದೆ. ಆದರೆ ಅದು ಅಧಿಕಾರದಲ್ಲಿರುವುದಿಲ್ಲ ಅಷ್ಟೇ. ಅವಕಾಶ ಸಿಕ್ಕರೆ ಮೊದಲಿಗಿಂತ ಹತ್ತುಪಟ್ಟು ಹೆಚ್ಚು ಶಕ್ತಿಯುತವಾಗಿ ಪ್ರತಿರೋಧ ತೋರಿಸಲು ತಯಾರಾಗುತ್ತದೆ. ಹಾಗಾಗಿ ಕ್ರಾಂತಿ ಘಟಿಸಿ ಸಮಾಜವಾದಿ ವ್ಯವಸ್ಥೆ ಸ್ಥಾಪನೆಯಾದ ನಂತರ ಅದನ್ನು ಉಳಿಸಿಕೊಳ್ಳುವುದೂ ದೊಡ್ಡ ಹೋರಾಟ. ಮೈಮರೆತರೆ ಯಾವುದೇ ಕ್ಷಣದಲ್ಲಿ ಬೂರ್ಜ್ವಾ ವಿಚಾರಗಳು ನುಸುಳಿ ಪ್ರತಿಕ್ರಾಂತಿಗೆ ಮುನ್ನುಡಿ ಬರೆಯಬಲ್ಲವು. ಈ ಪ್ರತಿಕ್ರಾಂತಿ ವಿಚಾರಗಳು ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್, ಮಾವೋ ಅವರ ಹೆಸರಿನಲ್ಲಿಯೇ ನುಸುಳಬಹುದು. ಅದಕ್ಕಾಗಿ ಜನರ ಪ್ರಜ್ಞಾಮಟ್ಟವನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಬೇಕಾಗುತ್ತದೆ. ಹಾಗಾಗಿಯೇ ಸಾಂಸ್ಕೃತಿಕ ಕ್ರಾಂತಿಯನ್ನೂ ಹರಿಬಿಡಬೇಕಾಗುತ್ತದೆ. ಇದನ್ನು ಮಾವೋರವರು ಮನಗಂಡಿದ್ದರು" ಎಂದರು.

"ಲೆನಿನ್ ಮತ್ತು ಸ್ಟಾಲಿನ್ ನೆರವೇರಿಸಿದ ನವೆಂಬರ್ ಮಹಾಕ್ರಾಂತಿಗೆ ಈಗ 107 ವರ್ಷಗಳು ತುಂಬಿವೆ. ವಿಶ್ವದಾದ್ಯಂತ ಕಾರ್ಮಿಕ ವರ್ಗಕ್ಕೆ ಇಂದಿಗೂ ಸಹ ಅದು ಮಹಾ ಸ್ಫೂರ್ತಿಯ ಪ್ರಘಟನೆಯಾಗಿದೆ, ಸ್ಫೂರ್ತಿಯ ಸೆಲೆಯಾಗಿದೆ. ಇಂದು ಇಡೀ ವಿಶ್ವವು ಈ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯ ಅಂತ್ಯಕ್ಕಾಗಿ ತುದಿಗಾಲ್ಲಲಿದೆ. ಸಮಸ್ಯೆಗಳ ವಿರುದ್ಧ ಹೋರಾಟದ ಜ್ವಾಲಾಮುಖಿಗಳು ಸ್ಫೋಟಿಸತೊಡಗಿವೆ. ಸಮಾಜ ಸಮರ್ಥ ನಾಯಕತ್ವಕ್ಕಾಗಿ ಹಾತೊರೆಯುತ್ತಿದೆ. ಆದರೆ ಈ ವಿಷಯದಲ್ಲಿ ದೊಡ್ಡ ನಿರ್ವಾತವೂ ಕಾಣುತ್ತಿದೆ. ಈ ನಿರ್ವಾತವನ್ನು ಕಾಮ್ರೇಡ್ ಶಿವದಾಸ್ ಘೋಷ್‌ರವರ ವಿಚಾರಗಳಿಂದ ತುಂಬಿಸಿ ಇಡೀ ವಿಶ್ವದೆಲ್ಲೆಡೆ ಕ್ರಾಂತಿಯ ಪತಾಕೆ ಹಾರಾಡುವಂತೆ ಮಾಡಬೇಕಿದೆ" ಎಂದು ಕರೆ ಕೊಟ್ಟರು.

ನಗರದ ಗಾಂಧಿ ಭವನದಲ್ಲಿ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಮ್ರೇಡ್ ವಿ. ಜ್ಞಾನಮೂರ್ತಿಯವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ನಗರದ ನಾನಾ ಬಡಾವಣೆಗಳಿಂದ ಪಕ್ಷದ ಬೆಂಬಲಿಗರು, ಹಿತೈಷಿಗಳು ಹಾಗೂ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.



ತಲ್ಲೀನತೆಯಿಂದ ಆಲಿಸುತ್ತಿರುವ ಸಭೆ

# ಸೆಬಿ ಮುಖ್ಯಸ್ಥೆ ಮಾಧಬಿ ಬುಚ್ ಮೇಲೆ ಷೇರು ಅಕ್ರಮದ ಆರೋಪ!

2024ರ ಆಗಸ್ಟ್ 10ರಂದು ಅಮೆರಿಕಾದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ಹೊಸ ಆರೋಪವನ್ನು ಮಾಡಿದ್ದು, ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಹಾಗೂ ಅವರ ಪತಿ ಧಾಬಲ್ ಬುಚ್ ಅವರು ಅದಾನಿ ಕಂಪನಿಗಳಲ್ಲಿ ಭಾರೀ ಪ್ರಮಾಣದ ಪಾಲು ಹೊಂದಿದ್ದಾರೆ ಎಂಬ ಸ್ಫೋಟಕ ಮಾಹಿತಿಯನ್ನು ಬಹಿರಂಗಪಡಿಸಿತ್ತು. ಅದಾನಿ ಷೇರುಗಳ ಮೌಲ್ಯ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದರಿಂದ ಅದಾನಿ ಕಂಪನಿ ಹಣಕಾಸು ಸಂಸ್ಥೆಗಳಿಂದ ಭಾರೀ ಪ್ರಮಾಣದ ಸಾಲವನ್ನು ಪಡೆಯಲು ಅದು ಸಹಕಾರಿಯಾಗಿತ್ತು. ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಹಾಗೂ ಅವರ ಪತಿ ಅದಾನಿ ಕಂಪನಿಯಲ್ಲಿ ಹೂಡಿಕೆ ಮಾಡಿರುವುದು ಸೆಬಿ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದ್ದು, ಹಿತಾಸಕ್ತಿ ಸಂಘರ್ಷವೂ ಕಂಡು ಬಂದಿದೆ. ಸೆಬಿಯ ಇತಿಹಾಸದಲ್ಲಿ ಇದುವರೆಗೂ ಯಾರೂ ಅದರ ಮುಖ್ಯಸ್ಥರ ಸಾಚಾತನದ ಬಗ್ಗೆ ಈಗಿನಷ್ಟು ಪ್ರಶ್ನೆಗಳನ್ನು ಕೇಳಿರಲಿಲ್ಲ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು 2023ರ ಜನವರಿಯಲ್ಲಿ ಪ್ರಕಟಿಸಿದ ವರದಿಯಲ್ಲಿ ಅದಾನಿ ಕಂಪನಿ ಹೇಗೆ ಮೋಸದ ಮಾರ್ಗದಿಂದ ತನ್ನ ಷೇರುಗಳ ಮೌಲ್ಯವನ್ನು ವೃದ್ಧಿಸಿಕೊಂಡಿತ್ತು ಎಂಬುದನ್ನು ಬಯಲಿಗೆಳೆಯಲಾಗಿತ್ತು. ಅದಾನಿ ಕಂಪನಿಯ ಚೇರ್‌ಮನ್ ಗೌತಮ್ ಅದಾನಿ ಕಳೆದ ಮೂರು ವರ್ಷಗಳಲ್ಲಿ 100 ಬಿಲಿಯನ್ ಡಾಲರ್ ಹಣವನ್ನು ತನ್ನ ಸಮೂಹದ 7 ಪ್ರಮುಖ ಕಂಪನಿಗಳಲ್ಲಿ ತೊಡಗಿಸಿದ್ದರು. ಆ ಮೂಲಕ ಷೇರುಗಳ ಮೌಲ್ಯ ಶೇ 819ರಷ್ಟು ಹೆಚ್ಚಳವಾಗಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಇದನ್ನೇ ಆಧರಿಸಿ ಅದಾನಿ ಸಮೂಹವು ಹಣಕಾಸು ಸಂಸ್ಥೆಗಳಿಂದ ಭಾರೀ ಪ್ರಮಾಣದ ಸಾಲವನ್ನು ಪಡೆದುಕೊಂಡಿತ್ತು. ಸಾಲಕ್ಕೆ ಪ್ರತಿಯಾಗಿ ಷೇರುಗಳನ್ನು ಖಾತರಿಯಾಗಿ ನೀಡಿತ್ತು ಎಂದು ವರದಿಯಲ್ಲಿ ಹೇಳಿತ್ತು. ಅಲ್ಲದೇ, ಸಾಗರದಾಚೆಯ ಶೆಲ್ ಕಂಪನಿಗಳ ಮೂಲಕ ಭಾರತೀಯರ ಹಣವನ್ನು ಷೇರುಮಾರುಕಟ್ಟೆಯಲ್ಲಿ ತೊಡಗಿಸಿತ್ತು. ಇಂತಹ ಅಕ್ರಮ ದಶಕಗಳ ಕಾಲ ನಡೆದಿತ್ತು. ಈ ಸ್ಫೋಟಕ ವಿಚಾರವು ಹೊರಬಿದ್ದ ಬಳಿಕ ಭಾರತದಲ್ಲಿ ಭಾರೀ ಸಂಚಲನ ಮೂಡಿತ್ತು. ಅಲ್ಲದೇ, ಕಾರ್ಪೊರೇಟ್ ಇತಿಹಾಸದಲ್ಲಿ ಇದೊಂದು ದೊಡ್ಡ ಅಕ್ರಮ ಎಂದು ಪರಿಗಣಿಸಲಾಗಿತ್ತು. ಇಷ್ಟಾಗಿಯೂ ದೇಶದ ಬಂಡವಾಳ (ಷೇರು) ಮಾರುಕಟ್ಟೆಯ ಮೇಲೆ ನಿಗಾ ಇರಿಸಬೇಕಿದ್ದ ಭಾರತ ಸರ್ಕಾರದ ನಿಯಂತ್ರಣ ಸಂಸ್ಥೆ ಸೆಬಿಯು ಇದನ್ನು ಗಮನಿಸಿಲ್ಲವೇ ಎಂಬ ಪ್ರಶ್ನೆ ಈ ವಿಚಾರದಲ್ಲಿ ಆತಂಕಿತರಾಗಿರುವವರನ್ನು ಕಾಡುತ್ತಿದೆ.

ಷೇರುಪೇಟೆಯಲ್ಲಿ ವಹಿವಾಟು ನಡೆಸುವ ನಿರ್ದಿಷ್ಟ ಕಂಪನಿಗಳಲ್ಲಿ ಹಣ ತೊಡಗಿಸಿದರೆ ಅಂತಹ ಷೇರುಗಳ ಬೆಲೆಗಳಲ್ಲಿ ಏರಿಕೆ ಕಂಡು ಬರುತ್ತದೆ. ಆದರೆ, ಉತ್ಪಾದನೆ ಆಧಾರಿತ ಹೂಡಿಕೆಯಲ್ಲಿ ಕುಸಿತ ಕಂಡು ಬಂದರೆ, ಅದು ಅರ್ಥವ್ಯವಸ್ಥೆಯು ಗಂಡಾಂತರದಲ್ಲಿ ಇರುವ ಸಂಕೇತವಾಗಿದೆ. ಸದ್ಯಕ್ಕೆ ಇದಕ್ಕಿಂತ ಹೊರತಾದ ವಿದ್ಯಮಾನವೊಂದು ಈಗ ಘಟಿಸುತ್ತಿದೆ. ದೊಡ್ಡ ಪ್ರಮಾಣದ ಬಂಡವಾಳವು ಹಲವು ಬಗೆಯ ಅಕ್ರಮಗಳ ರೂಪಗಳಲ್ಲಿ, ಅನುಮಾನಾಸ್ಪದ ವಿಧಾನಗಳಿಂದ ಮತ್ತು ಪ್ರಶ್ನಾರ್ಹ ಮಾರ್ಗಗಳಿಂದ ಷೇರುಪೇಟೆಯಲ್ಲಿ ಹೂಡಿಕೆ ಆಗುತ್ತಿದೆ. 'ತೆರಿಗೆ ಸ್ವರ್ಗ' ಎಂದೇ ಪರಿಗಣಿಸಲಾಗಿರುವ ಮಾರಿಷಸ್, ಗರ್ನ್‌ಜಿ ದ್ವೀಪ ಮತ್ತಿತರೆ ಕಡೆಗಳಲ್ಲಿ ನಕಲಿ ಕಂಪನಿಗಳನ್ನು ಸ್ಥಾಪಿಸಿ ಅವುಗಳ ಮೂಲಕ ಹಣ ಹೂಡಿಕೆ ಮಾಡಲಾಗುತ್ತಿದೆ.

ಆ ಮೂಲಕ ಎಷ್ಟೇ ಹಣವನ್ನು ತೊಡಗಿಸಿದರೂ ಅದಕ್ಕೆ ತೆರಿಗೆ ವಿನಾಯಿತಿಯನ್ನು ನೀಡುವ ಅನುಕೂಲವೂ ಇಲ್ಲಿ ಇರುವುದರಿಂದ ಹೆಚ್ಚಿನ ಭಾರತೀಯ ಕಾರ್ಪೊರೇಟ್ ಮನೆತನಗಳು ಇಂತಹ ಕಂಪೆನಿಗಳಲ್ಲಿ ಬಂಡವಾಳ ಹೂಡಲು ಮುಂದೆ ಬರುತ್ತವೆ. ಅಲ್ಲದೇ, ತಮ್ಮಲ್ಲಿನ ಹೆಚ್ಚುವರಿ ಬಂಡವಾಳವನ್ನು ದೇಶಿ ಷೇರು ಮಾರುಕಟ್ಟೆಯಲ್ಲಿ ತೊಡಗಿಸುವ ಅವಕಾಶವನ್ನೂ ಪಡೆದುಕೊಂಡು ಕೃತಕವಾಗಿ ತಮ್ಮ ಷೇರುಗಳಿಗೆ ಬೇಡಿಕೆ ಕುದುರಿಸಿಕೊಳ್ಳುವ ವ್ಯವಹಾರವೂ ನಡೆಯುತ್ತದೆ. ಇದರಿಂದಾಗಿ ಕಂಪನಿಯ ಷೇರಿಗೆ ಹೆಚ್ಚಿನ ಬೆಲೆ ದೊರಕಿ, ಇದೇ ಕಾರಣದಿಂದ ಆ ಕಂಪನಿಯು ಬ್ಯಾಂಕ್ ಸೇರಿದಂತೆ ಇತರೆ ಹಣಕಾಸು ಸಂಸ್ಥೆಗಳಲ್ಲಿ ಹೆಚ್ಚಿನ ಸಾಲವನ್ನು ಪಡೆಯಲು ಅರ್ಹತೆಯನ್ನು ಪಡೆದುಕೊಳ್ಳುತ್ತದೆ. ಆ ಮೂಲಕ ಜಾಗತಿಕ ಕಾರ್ಪೊರೇಟ್ ವಲಯದಲ್ಲಿ ಆ ಕಂಪನಿ ಉತ್ತಮ ಆರ್ಥಿಕ ಆರೋಗ್ಯವನ್ನು ಹೊಂದಿದೆ ಎಂದು ಬಿಂಬಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಪ್ತರು ಎಂದು ಬಿಂಬಿಸಿಕೊಂಡಿರುವ ಅದಾನಿ ಸಮೂಹ ಸಂಸ್ಥೆಯು ಇದೇ ತಂತ್ರವನ್ನು ಅನುಸರಿಸಿದ್ದು, ಇದೇ ಮಾರ್ಗದ ಮೂಲಕ ತನ್ನ ಷೇರುಗಳ ದರವನ್ನು ಅಕ್ರಮವಾಗಿ ವೃದ್ಧಿಸಿಕೊಂಡು ಬ್ಯಾಂಕುಗಳಿಂದ ಹೆಚ್ಚಿನ ಸಾಲವನ್ನು ಪಡೆದುಕೊಂಡ ಆರೋಪ ಎದುರಿಸಿತು.

ಈ ಕುರಿತು 2023ರ ಫೆಬ್ರುವರಿಯಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಅದೇ ವರ್ಷದ ಮಾರ್ಚ್ 2ರಂದು ಪಿಐಎಲ್‌ನಲ್ಲಿರುವ ವಿಷಯಗಳ ಕುರಿತು ತನಿಖೆ ನಡೆಸುವಂತೆ ಸೆಬಿಗೆ ಆದೇಶ ನೀಡಿತ್ತು. ಜೊತೆಗೆ ಷೇರು ವಹಿವಾಟಿನಲ್ಲಿ ಅಕ್ರಮ ನಡೆದಿರುವ, ಹಣಕಾಸು ವಹಿವಾಟಿನಲ್ಲಿ ಹೆಚ್ಚುಕಡಿಮೆಯಾಗಿರುವ ಕುರಿತೂ ತನಿಖೆ ನಡೆಸುವಂತೆ ಸೂಚನೆ ನೀಡಿತ್ತು. ಈ ಕುರಿತು ಸಮಗ್ರ ತನಿಖೆ ನಡೆಸಿ ತನಗೆ ವರದಿ ಸಲ್ಲಿಸುವಂತೆ ಉನ್ನತ ನ್ಯಾಯಾಲಯವು 6 ಜನ ಪರಿಣಿತರ ತಂಡವನ್ನು ರಚನೆ ಮಾಡಿತ್ತು. ಮುಂದಿನ ಆರು ದಿನಗಳಲ್ಲಿ ಅಂದರೆ ಮಾರ್ಚ್ 8ರಂದು ಸುಪ್ರೀಂಕೋರ್ಟ್‌ಗೆ ತನಿಖೆಯ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನೀಡಿದ್ದ ಸಮಿತಿಯು ಅದಾನಿ ಸಮೂಹ ಸಂಸ್ಥೆಗಳು ಷೇರು ವಹಿವಾಟಿನಲ್ಲಿ ಅಕ್ರಮ ನಡೆಸಿರುವ ಬಗ್ಗೆ ಯಾವುದೇ ಆಧಾರಗಳು ಸಿಕ್ಕಿಲ್ಲ. ಅಲ್ಲದೇ, ನಿಯಂತ್ರಣ ಸಂಸ್ಥೆಯಿಂದ ನಿಗಾ ವಹಿಸುವಲ್ಲಿಯೂ ಯಾವುದೇ ಲೋಪವಾಗಿಲ್ಲ ಎಂದು ಪ್ರಾಥಮಿಕ ವರದಿಯಲ್ಲಿ ತಿಳಿಸಿತ್ತು. 2023ರ ಮೇ ತಿಂಗಳಲ್ಲಿ ಅಂತಿಮ ವರದಿ ಸಲ್ಲಿಸಿದ್ದ ಸಮಿತಿಯು ತನ್ನ ಮೊದಲ ವರದಿಯನ್ನೇ ಎತ್ತಿ ಹಿಡಿದಿತ್ತು. ಇಂತಹ ಭಾರಿ ಪ್ರಮಾಣದ ಹಣಕಾಸು ವಂಚನೆಯ ಕುರಿತು ಸೆಬಿ ಏಕೆ ಮೂಕಪ್ರೇಕ್ಷಕನಾಗಿತ್ತು ಎಂಬುದಕ್ಕೆ ಕಾರಣಗಳು ಈಗ ಬೆಳಕಿಗೆ ಬರುತ್ತಿವೆ.

ಸೆಬಿಯ ಬಗ್ಗೆ ಕೆಲ ಮಾಹಿತಿಗಳನ್ನು ತಿಳಿದುಕೊಳ್ಳುವುದಾದರೆ ಈ ಮಂಡಳಿಯನ್ನು 1988ರಲ್ಲಿ ಭಾರತ ಸರ್ಕಾರವು ನಿಲುವಳಿಯೊಂದನ್ನು ಮಂಡಿಸುವುದರ ಮೂಲಕ ಸ್ಥಾಪಿಸಿತ್ತು. 1992ರಲ್ಲಿ ಭಾರತದ ಸಂಸತ್ತು ಈ ಕುರಿತು ಕಾಯ್ದೆಯನ್ನು ರಚಿಸಿದ ಬಳಿಕ ಇದು ಅಧಿಕೃತ ನಿಯಂತ್ರಣ ಸಂಸ್ಥೆಯಾಯಿತು. ಸೆಬಿಯ ದಾಖಲೆಗಳಲ್ಲಿ ಇದು ವಹಿಸಬೇಕಾದ ಪಾತ್ರದ ಕುರಿತು ಹೀಗೆ ಹೇಳಲಾಗಿದೆ: 'ಸೆಬಿಯು ಷೇರುಗಳಲ್ಲಿ ಹೂಡಿಕೆ ಮಾಡುವ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಬೇಕು. ಇದನ್ನು ಅಭಿವೃದ್ಧಿಪಡಿಸಬೇಕು. ಷೇರುಪೇಟೆಯಲ್ಲಿನ ಬೆಳಗಣಿಗೆಗಳ ಮೇಲೆ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕು'. ಸೆಬಿ ಮುಖ್ಯಸ್ಥರನ್ನು ಪ್ರಧಾನಿ ನೇತೃತ್ವದ ಸಚಿವ ಸಂಪುಟದ ನೇಮಕಾತಿ ಸಮಿತಿ ನೇಮಕ ಮಾಡುತ್ತದೆ. ಪ್ರಧಾನಿ ಮೋದಿ ಜೊತೆಗೆ ಅವರ ಬಲಗೈ ಬಂಟ ಎಂದು ಕರೆಸಿಕೊಳ್ಳುವ ಅಮಿತ್ ಷಾ ಸಹ ಈ ಸಮಿತಿಯಲ್ಲಿ ಇದ್ದಾರೆ. ಈ ಇಬ್ಬರೂ ಉನ್ನತ ನಾಯಕರು ಮಾಧವಿ ಪುರಿ ಬುಚ್ ಅವರನ್ನು ಸೆಬಿ ಅಧ್ಯಕ್ಷೆಯನ್ನಾಗಿ ನೇಮಕ ಮಾಡುವ ಮೊದಲು ಆಕೆಯ ವರಮಾನದ ಮೂಲಗಳ ಬಗ್ಗೆ ಯಾವುದೂ ಪ್ರಶ್ನಾರ್ಹ ಎಂದು ಅನಿಸಲಿಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ.

ಸೆಬಿ ಅಧ್ಯಕ್ಷರ ಮೇಲೆ ಇಂತಹ ಆರೋಪದ ಕುರಿತು ಸರಿಯಾಗಿ ತನಿಖೆ ನಡೆಸಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರವೇ ನಾಮಕಾವಾಸ್ತೆ ತನಿಖೆ ನಡೆಸಿ ಆಕೆಯನ್ನು ಆರೋಪ ಮುಕ್ತ ಗೊಳಿಸಿತು. ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಅವರನ್ನು ವಿಚಾರಣೆಗೆ ಕರೆದರೂ, ನೆಪಗಳನ್ನು ನೀಡಿ ಗೈರು ಹಾಜರಾಗಿ ತಪ್ಪಿಸಿಕೊಂಡಿದ್ದಾರೆ. ಆದರೆ ಕೇಂದ್ರ ಲೋಕಪಾಲ್ ಆಕೆಗೆ ವಿವರಣೆ ನೀಡುವಂತೆ ನೋಟಿಸ್ ನೀಡಿದ್ದು, ಅಲ್ಲಿಯಾದರೂ ನಿಷ್ಪಕ್ಷಪಾತ ತನಿಖೆ ನಡೆಯುತ್ತದೆಯೇ ಎಂದು ಕಾದು ನೋಡಬೇಕು.

> **ಉತ್ಪಾದನೆ ಆಧಾರಿತ ಹೂಡಿಕೆಯಲ್ಲಿ ಕುಸಿತ ಕಂಡು ಬಂದರೆ ಅದು ಅರ್ಥವ್ಯವಸ್ಥೆಯು ಗಂಡಾಂತರದಲ್ಲಿ ಇರುವ ಸಂಕೇತವಾಗಿದೆ. ಸದ್ಯಕ್ಕೆ ಇದಕ್ಕಿಂತ ಹೊರತಾದ ವಿದ್ಯಮಾನವೊಂದು ಈಗ ಘಟಿಸುತ್ತಿದೆ. ದೊಡ್ಡ ಪ್ರಮಾಣದ ಬಂಡವಾಳವು ಹಲವು ಬಗೆಯ ಅಕ್ರಮಗಳ ರೂಪಗಳಲ್ಲಿ, ಅನುಮಾನಾಸ್ಪದ ವಿಧಾನಗಳಿಂದ ಮತ್ತು ಪ್ರಶ್ನಾರ್ಹ ಮಾರ್ಗಗಳಿಂದ ಷೇರುಪೇಟೆಯಲ್ಲಿ ಹೂಡಿಕೆ ಆಗುತ್ತಿದೆ. 'ತೆರಿಗೆ ಸ್ವರ್ಗ' ಎಂದೇ ಪರಿಗಣಿಸಲಾಗಿರುವ ಮಾರಿಷಸ್, ಗರ್ನ್‌ಜಿ ದ್ವೀಪ ಮತ್ತಿತರೆ ಕಡೆಗಳಲ್ಲಿ ನಕಲಿ ಕಂಪನಿಗಳನ್ನು ಸ್ಥಾಪಿಸಿ ಅವುಗಳ ಮೂಲಕ ಹಣ ಹೂಡಿಕೆ ಮಾಡಲಾಗುತ್ತಿದೆ.**

ಇಂಥದ್ದೇ ಇನ್ನೊಂದು ಉದಾಹರಣೆಯೊಂದನ್ನು ನೆನಪಿಸಿಕೊಳ್ಳುವುದಾದರೆ, 2018ರಲ್ಲಿ ಚಂದಾ ಕೊಚ್ಚರ್ ಐಸಿಐಸಿಐ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದಾಗ ಬ್ಯಾಂಕ್, ಆಕೆಯ ಕುಟುಂಬದ ಸದಸ್ಯರು ಹಾಗೂ ವಿಡಿಯೊಕಾನ್ ಕಂಪನಿ ಮಧ್ಯೆ ನಡೆದ ಸಂಕೀರ್ಣ ಹಣಕಾಸಿನ ವಹಿವಾಟಿನ ಬಗ್ಗೆ ಭಾರೀ ಚರ್ಚೆ ನಡೆದಿತ್ತಲ್ಲದೇ ಅಲ್ಲಿಯೂ ಹಿತಾಸಕ್ತಿ ಸಂಘರ್ಷದ ಆರೋಪ ಕೇಳಿ ಬಂದಿತ್ತು. ಚಂದಾ ಕೊಚ್ಚರ್ ಅವರು 2012ರಲ್ಲಿ ವಿಡಿಯೊಕಾನ್ ಸಮೂಹ ಕಂಪನಿಗೆ 32.5 ಬಿಲಿಯನ್ ಸಾಲವನ್ನು ಮಂಜೂರು ಮಾಡಿದ್ದರು. ಆಶ್ಚರ್ಯವೆಂಬಂತೆ 2017ರಲ್ಲಿ ಬ್ಯಾಂಕು 8.1 ಬಿಲಿಯನ್ ಸಾಲವನ್ನು ಪಾವತಿಸದೇ ಬಾಕಿ ಉಳಿಸಿಕೊಂಡು ಸುಸ್ತಿದಾರನಾಗಿತ್ತು. ಆ ಬಗ್ಗೆ ನಂತರ ಕೇಳಿಬಂದ ಆರೋಪವೇನೆಂದರೆ ಚಂದಾ ಕೊಚ್ಚರ್ ಕುಟುಂಬದವರು ವಿಡಿಯೊಕಾನ್ ಪ್ರವರ್ತಕರಿಂದ ಭಾರಿ ಪ್ರಮಾಣದ ಲಾಭ ಪಡೆದಿದ್ದರಿಂದಲೇ ಚಂದಾ ಅವರು ಇಷ್ಟು ಪ್ರಮಾಣದ ಸಾಲವನ್ನು ಮಂಜೂರು ಮಾಡಿದ್ದರು ಎಂಬುದು. ಈ ಆರೋಪಗಳ ಹಿನ್ನೆಲೆಯಲ್ಲಿ ಚಂದಾ ಕೊಚ್ಚರ್ ಅವರನ್ನು ಐಸಿಐಸಿಐ ಮುಖ್ಯಸ್ಥರ ಸ್ಥಾನದಿಂದ ವಜಾಗೊಳಿಸಲಾಯಿತು. ಆದರೆ, ಇಂದಿಗೂ ಈ ಪ್ರಕರಣ ಇನ್ನೂ ಮುಕ್ತಾಯಗೊಂಡಿಲ್ಲ.

ಅದಾನಿ ಕಂಪನಿ ಅಕ್ರಮವಾಗಿ ಷೇರುಗಳ ಬೆಲೆ ಹೆಚ್ಚಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಮಗ್ರ ತನಿಖೆ ನಡೆಸುವುದೇ ಎಂದು ದೇಶದ ಜನತೆ ಕೇಳುತ್ತಿದ್ದಾರೆ. ಈ ಲೇಖನ ಪ್ರಕಟವಾಗುವ ವೇಳೆಗೆ ಅದಾನಿ ಕಂಪೆನಿಯ ಮೇಲೆ ಅಮೆರಿಕಾದ ನ್ಯಾಯಾಲಯವೊಂದು ಲಂಚದ ಗಂಭೀರ ಆರೋಪ ಮಾಡಿದ್ದು, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದೆ. 'ನಾನು ತಿನ್ನುವುದಿಲ್ಲ. ಯಾರಿಗೂ ತಿನ್ನಲು ಬಿಡುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೊಂಡಿದ್ದಾರೆ. ಆದರೆ, ಅವರ ಕಪಾಟಿನಿಂದ ಅಸ್ತಿಪಂಜರಗಳು ಹೊರಬೀಳುತ್ತಲೇ ಇರುವುದರಿಂದ ಹಣಕಾಸು ಅಕ್ರಮದ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ಅದಾನಿಯ ಹಿತವೇ ದೇಶದ ಹಿತ ಎಂದು ವಾದಿಸುವ ಬಿಜೆಪಿ ಸರ್ಕಾರದ ಆಳ್ವಿಕೆಯಲ್ಲಿ ಇಂತಹ ನಿರೀಕ್ಷೆ ಅರ್ಥಹೀನ ಎಂದರೆ ತಪ್ಪಾಗಲಾರದು.

## ಹೊಸ ಕಾರ್ಮಿಕ ಸಂಹಿತೆ

4ನೇ ಪುಟದಿಂದ

ಮತ್ತು ಕಾರ್ಮಿಕರು ಮುಷ್ಕರ ಮಾಡಲು ನಿರ್ಬಂಧಗಳನ್ನು ಹೇರಿದೆ. ಮುಷ್ಕರ ಮಾಡಲು ಶೇ.50 ಮತ್ತು ಅದಕ್ಕಿಂತ ಹೆಚ್ಚು ಕಾರ್ಮಿಕರು ಒಪ್ಪಿಗೆ ನೀಡಬೇಕು ಮತ್ತು ಅದನ್ನು 'ಸಾಂದರ್ಭಿಕ ರಜೆ' ಎಂದು ಪರಿಗಣಿಸಲಾಗುತ್ತದೆ. ನೋಂದಾಯಿತ ಸಂಘವು ಯಾವಾಗಲೂ ನೂರು ಅಥವಾ ಒಟ್ಟು ಕಾರ್ಮಿಕರ ಶೇ.10 ರಷ್ಟು ಕಾರ್ಮಿಕರನ್ನು ಹೊಂದಿರಬೇಕು. ಅಷ್ಟೇ ಅಲ್ಲದೆ, ಶೇ.51 ರಷ್ಟು ಕಾರ್ಮಿಕರ ಬೆಂಬಲವಿರುವ ಸಂಘಕ್ಕೆ ಮಾತ್ರ ಮಾಲೀಕರ ಜೊತೆ ಮಾತುಕತೆಗೆ ಅರ್ಹತೆ ಇದೆ. ಇದು ಒಂದು ಸಂಘದ ಏಕಸ್ವಾಮ್ಯಾಧಿಪತ್ಯಕ್ಕೆ ದಾರಿ ಮಾಡಿಕೊಡುತ್ತದೆ.

ಹೊಸ ಸಂಹಿತೆಯು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಓ) ಸಮಾವೇಶದ ನಿರ್ಧಾರಗಳಿಗೂ ಬದ್ಧವಾಗಿರದೇ ಒಂದು ಕಾರ್ಮಿಕ ಸಂಘ ಮಾತ್ರ ಮಾತುಕತೆ ನಡೆಸಲು ಅವಕಾಶ ನೀಡಿದೆ. ಕೈಗಾರಿಕಾ ವಿವಾದ ಕಾಯ್ದೆ 1947ರ ಪ್ರಕಾರ, ಮಾತುಕತೆಯು ಕಾರ್ಮಿಕ ಸಂಘ ಅಥವಾ ಕಾರ್ಮಿಕರ ಗುಂಪುಗಳು ಹಾಗೂ ಮಾಲೀಕರ ಮಧ್ಯೆ ನಡೆಯಬೇಕೇ ಹೊರತು ಒಬ್ಬರ ಜೊತೆಯಲ್ಲ. ಇದಕ್ಕೆ ವಿರುದ್ಧವಾಗಿ ಹೊಸ ಸಂಹಿತೆಯು ಖಾಯಂ ಕಾರ್ಮಿಕರ ಸೇವಾ ನಿಯಮಗಳ ಬಗ್ಗೆಯೂ ವ್ಯಕ್ತಿಗತವಾಗಿ ಮಾತುಕತೆ ನಡೆಸಬಹುದು ಎಂದಿದೆ. ಇಂತಹ ಸಂಹಿತೆಯನ್ನು ಕೈಗಾರಿಕೆಗಳು ಸ್ವಾಗತಿಸುವುದರಲ್ಲಿ ಅಶ್ಚರ್ಯವೇನಿದೆ! ಭಾರತೀಯ ಕೈಗಾರಿಕಾ ಒಕ್ಕೂಟದ ಡೈರೆಕ್ಟರ್ ಜನರಲ್, ಈ ಸಂಹಿತೆಯು ಭಾರತವನ್ನು ಹೂಡಿಕೆಗೆ ಪ್ರಶಸ್ತ ಸ್ಥಳವನ್ನಾಗಿ ಮಾಡುತ್ತದೆ ಮತ್ತು ಉದ್ಯೋಗವಕಾಶ ಸೃಷ್ಟಿಸುತ್ತದೆ ಎಂದು ಹೇಳಿದ್ದಾರೆ.

ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 172, ಪೊಲೀಸ್ ಅಧಿಕಾರಿಗಳು ಕೊಡುವ ಕಾನೂನು ನಿರ್ದೇಶನಗಳನ್ನು ಜನರು ಪಾಲಿಸಬೇಕು ಮತ್ತು ಅದನ್ನು ಉಲ್ಲಂಘಿಸಿದರೆ ಬಂಧಿಸಬಹುದು ಎಂದು ಹೇಳುತ್ತದೆ. ಇದನ್ನು ಹೊಸ ಕಾರ್ಮಿಕ ಸಂಹಿತೆಗೆ ಹೋಲಿಸಿದಾಗ, ಕಾರ್ಮಿಕರು ಮುಷ್ಕರ ಅಥವಾ ಹೋರಾಟವನ್ನು ನಿಲ್ಲಿಸಲು ಮಾಲೀಕರು ನೀಡಿದ ಆದೇಶವನ್ನು ಪಾಲಿಸದಿದ್ದರೆ ಅವರನ್ನು ದಸ್ತಗಿರಿ ಮಾಡಬಹುದು. ಅಷ್ಟೇ ಅಲ್ಲ, ಯುಎಪಿಎ ಕಾಯ್ದೆಯಡಿ ಮುಷ್ಕರವನ್ನೂ ಭಯೋತ್ಪಾದಕ ಚಟುವಟಿಕೆ ಎಂದು ಹೇಳಬಹುದು.

ಕಾನೂನು ತಿದ್ದುಪಡಿಗಳು ವಿಶ್ವಬ್ಯಾಂಕ್‌ನ 'ಸುಗಮ ವ್ಯಾಪಾರ'ದ ರ್‍ಯಾಂಕಿಂಗ್‌ನಲ್ಲಿ ಭಾರತ ಉತ್ತಮ ಪ್ರದರ್ಶನ ತೋರಬಹುದು; ಆದರೆ ಕಾರ್ಮಿಕರ ಸುರಕ್ಷತೆ, ಆರೋಗ್ಯದ ರ್‍ಯಾಂಕಿಂಗ್ ಪಾತಾಳಕ್ಕೆ ಕುಸಿಯುತ್ತದೆ. ಆದ್ದರಿಂದ ಮಾಲೀಕರು ಕೆಲಸದ ಸ್ಥಳಗಳಲ್ಲಿ ಸುರಕ್ಷತೆ, ನೈರ್ಮಲ್ಯಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ನಿರ್ಲಕ್ಷ್ಯ ತೋರಬಹುದು; ಅಪಘಾತಗಳಲ್ಲಿ ಸತ್ತರೆ ಸರಿಯಾದ ಪರಿಹಾರ ಕೊಡದಿರಬಹುದು. ಹಾಗಾಗಿ ಕಾರ್ಮಿಕ ವರ್ಗದ ಮುಂದೆ ಎರಡು ದಾರಿಗಳಿವೆ. ಒಂದು, ಹೊಸ ಕಾರ್ಮಿಕ ಸಂಹಿತೆಯನ್ನು ತಲೆಬಾಗಿಸಿ ಒಪ್ಪಿಕೊಳ್ಳುವುದು; ಎರಡು, ಸಂಘಟಿತರಾಗಿ ಭಯಾನಕ ಶಾಸನಗಳ ವಿರುದ್ಧ ಹೋರಾಟ ಕಟ್ಟುವುದು. ದುಡಿಯುವ ಜನರು ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಕಸಿದುಕೊಳ್ಳುವುದರ ವಿರುದ್ಧ ಸರಿಯಾದ ನಾಯಕತ್ವದಡಿ ಸಂಘಟಿತರಾಗಿ ತಲೆಯೆತ್ತಿ ನಿಂತರೆ, ಯಾವ ನಿರಂಕುಶ ಅಧಿಕಾರವೂ ಅಸ್ತಿತ್ವದಲ್ಲುಳಿಯಲು ಸಾಧ್ಯವಿಲ್ಲ ಎನ್ನುವುದನ್ನು ಇತಿಹಾಸ ತೋರಿಸಿದೆ.

ಜರ್ಮನಿ: ಕ್ರಾಂತಿಕಾರಿ ಪಕ್ಷಗಳು ಹಾಗೂ ಸಂಘಟನೆಗಳ

# 5ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಎಸ್‌ಯುಸಿಐ(ಸಿ)

(ನಮ್ಮ ಪಕ್ಷ ಎಸ್‌ಯುಸಿಐ(ಸಿ)ನ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಅಮಿತಾವ ಚಟರ್ಜಿಯವರು, ಜರ್ಮನಿಯಲ್ಲಿ 2024ರ ಸೆಪ್ಟೆಂಬರ್ 8ರಿಂದ ಶುರುವಾದ ಐಸಿಒಆರ್ (ICOR)ನ 5ನೇ ಸಮ್ಮೇಳನದಲ್ಲಿ, ತದನಂತರ ಅಲ್ಲಿ ಆಯೋಜಿಸಲಾದ ಲೆನಿನ್ ಕುರಿತಾದ ವಿಚಾರ ಸಂಕಿರಣದಲ್ಲೂ ಭಾಗವಹಿಸಿದ್ದರು. ಅವರು ಪಕ್ಷದ ಬಂಗಾಲಿ ಮುಖಪತ್ರಿಕೆ 'ಗಣದಾಬಿ'ಗೆ ಈ ಬಗ್ಗೆ ಕೊಟ್ಟ ಸಂದರ್ಶನದಲ್ಲಿ ಚರ್ಚಿಸಿದ ವಿಷಯಗಳ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.)

'ICOR' ಅಂದರೆ ಇಂಟರ್‌ನ್ಯಾಷನಲ್ ಕೋಆರ್ಡಿನೇಶನ್ ಆಫ್ ರೆವಲ್ಯೂಶನರಿ ಪಾರ್ಟಿಸ್ ಆಂಡ್ ಆರ್ಗನೈಸೇಷನ್ಸ್ (ಕ್ರಾಂತಿಕಾರಿ ಪಕ್ಷಗಳು ಮತ್ತು ಸಂಘಟನೆಗಳ ಅಂತರರಾಷ್ಟ್ರೀಯ ಸಮನ್ವಯ), ಒಂದು ಅಂತರರಾಷ್ಟ್ರೀಯ ಸಂಘಟನೆ. ಅದರ ಬೆನ್ನೆಲುಬೆಂದರೆ, ಡ್ಯೂಶ್‌ಲ್ಯಾಂಡ್(ಅಂದರೆ ಜರ್ಮನಿ)ನ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷ (ಎಂಪಿಎಲ್‌ಡಿ–MPLD). ಕಮ್ಯುನಿಸಂಗೆ ಬದ್ಧತೆ ಉಳ್ಳ ಹಾಗೂ ಕಾರ್ಮಿಕವರ್ಗ ಕ್ರಾಂತಿಯನ್ನು ಆಕಾಂಕ್ಷಿಸುವ ವಿಶ್ವದ ಎಲ್ಲಾ ಪಕ್ಷಗಳನ್ನು ಮತ್ತು ಸಮೂಹ ಸಂಘಟನೆಗಳನ್ನು ಒಗ್ಗೂಡಿಸುವ ಉದ್ದೇಶದಿಂದ MPLD 2010ರಲ್ಲಿ ಈ ಸಂಘಟನೆಗೆ ಜನ್ಮ ನೀಡಿತು. ಹಿಂದೆ ಅದು ಕೊಮಿನ್‌ಟರ್ನ್ ಆಗಿದ್ದು ಮುಂದೆ ಕೊಮಿನ್‌ಫಾರ್ಮ್ ಆಗಿದ್ದ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ವೇದಿಕೆಯಂತಹುದೇ ತರಹವೇ ಒಂದು ವೇದಿಕೆಯನ್ನು ರಚಿಸುವ ಧ್ಯೇಯ ಹೊಂದಿದೆ. ಇದಕ್ಕಾಗಿ ಅದರ ಸದಸ್ಯರೆಲ್ಲರ ಮಧ್ಯೆ ಹಲವಾರು ವಿಷಯಗಳ ಬಗ್ಗೆ ಒಮ್ಮತ ತರುವ ಅವಶ್ಯಕತೆಯಿದ್ದು, ಈ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದೆ. ಕಳೆದ ವರ್ಷ MPLD ಯ ಮಹಾಧಿವೇಶನದಲ್ಲಿ ನಮ್ಮ ಪಕ್ಷ ಪಾಲ್ಗೊಂಡಿದ್ದು, 'ICOR' ಬಗ್ಗೆ ತಿಳಿದು ಅದರ ಸದಸ್ಯತ್ವ ಪಡೆಯಿತು. ಅದರ ಎಲ್ಲಾ ಸದಸ್ಯರು, ಸಮಾಜವಾದದಲ್ಲಿ ವಿಶ್ವಾಸ ಹೊಂದಿದ್ದು, ಕಮ್ಯುನಿಸಂ ಅನ್ನು ಸ್ಥಾಪಿಸುವ ದಿಕ್ಕಿನಲ್ಲಿ ಹೆಜ್ಜೆ ಇಡುತ್ತಿವೆ.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಪ್ರತಿನಿಧಿಯೂ, 'ICOR' ನ ಮನವಿಯಂತೆ, ತಮ್ಮ ದೇಶದ ಸಾಮಾಜಿಕ–ಆರ್ಥಿಕ–ರಾಜಕೀಯ ಪರಿಸ್ಥಿತಿ ಹಾಗೂ ತಮ್ಮ ಪಕ್ಷದ ಪಾತ್ರದ ಕುರಿತಾದ ಸಂಕ್ಷಿಪ್ತ ವರದಿಯನ್ನು ಮಂಡಿಸಿದರು. ಜೊತೆಗೆ ಅವರು ಪ್ಯಾಲೆಸ್ಟೀನಿನ ಮೇಲಿನ ಇಸ್ರೇಲ್‌ನ ದಾಳಿಯ ಬಗ್ಗೆಯೂ ಮಾತನಾಡಿದರು; ಮಹಾನ್ ಲೆನಿನ್‌ರವರ ಮರಣ ಶತಾಬ್ದಿಯ ಸಂದರ್ಭದಲ್ಲಿ ಆಯೋಜಿಸಲಾಗಿದ್ದ 'ಲೆನಿನ್ ವಿಚಾರ ಸಂಕಿರಣ'ದಲ್ಲಿ ಅವರು ಲೆನಿನ್‌ರವರ ಅನೇಕ ಚಿಂತನೆಗಳನ್ನು ಪ್ರಸ್ತುತ ಪಡಿಸಿದರು. ಸಮ್ಮೇಳನದಲ್ಲಿ, ಭಾರತದಿಂದ ನಮ್ಮ ಪಕ್ಷ ಮಾತ್ರವಲ್ಲದೆ ಸಿಪಿಐ(ಎಂಎಲ್)–ಮಾಸ್‌ಲೈನ್ ಎಂಬ ನಕ್ಸಲ್‌ಪರವಾದ ಸಂಘಟನೆಯೂ ಪಾಲ್ಗೊಂಡಿತ್ತು. ಇವುಗಳ ಹೊರತಾಗಿ ಏಷ್ಯಾದಿಂದ, ನೇಪಾಳದ 2 ಪಕ್ಷಗಳು ಮತ್ತು ಬಾಂಗ್ಲಾದೇಶದ BASAD (Marxist) ಪಾಲ್ಗೊಂಡಿದ್ದವು. ಶ್ರೀಲಂಕಾ ಪರವಾಗಿ ಬ್ರಿಟನ್ ವಾಸಿಯಾದ ಒಬ್ಬರು ವೀಕ್ಷಕರಾಗಿ ಬಂದಿದ್ದರು.

ಸಮ್ಮೇಳನದಲ್ಲಿ ಕಾ. ಅಮಿತಾವ ಚಟರ್ಜಿಯವರು, ಆಗತಾನೇ ಕೊನೆಗೊಂಡ ಲೊಕಸಭಾ ಚುನಾವಣೆಯ ಕುರಿತು ಮಾತನಾಡುತ್ತಾ, ಹೇಗೆ ಸ್ಪರ್ಧೆಯು, 2 ಬಂಡವಾಳಶಾಹಿ ಬಣಗಳಾದ ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ಮಿಥ್ಯಾ ಕಮ್ಯುನಿಸ್ಟ್ ಪಕ್ಷಗಳಾದ ಸಿಪಿಐ ಮತ್ತು ಸಿಪಿಐ(ಎಂ)ಗಳನ್ನು ಒಳಗೊಂಡಂಥ ಕಾಂಗ್ರೆಸ್ ನೇತೃತ್ವದ INDIA ನಡುವೆ ಧ್ರುವೀಕರಣಗೊಂಡಿತ್ತು ಎಂದು ಹೇಳಿದರು. ಇವೆರಡರ ವಿರುದ್ಧ, 542 ಲೋಕಸಭಾ ಕ್ಷೇತ್ರಗಳಲ್ಲಿನ 151 ಕ್ಷೇತ್ರಗಳಲ್ಲಿ ನಮ್ಮ ಪಕ್ಷ ನಮ್ಮ ಕಾರ್ಮಿಕವರ್ಗದ ಕ್ರಾಂತಿಕಾರಿ ನಿಲುವಿನ ಆಧಾರದ ಮೇಲೆ ಸ್ಪರ್ಧಿಸಿತು ಮತ್ತು ಪ್ರಮುಖ ಧಾರೆಯ ಪಕ್ಷಗಳು ಆಳುವ ಬಂಡವಾಳಶಾಹಿ ವರ್ಗಕ್ಕೆ ಅಡಿಯಾಳಾಗಿರುವುದನ್ನು ಬಯಲುಗೊಳಿಸಿತು ಎಂದು ಅವರು ವಿವರಿಸಿದರು. ಜನರಿಂದ ನಮಗೆ ಅಪಾರ ಪ್ರಶಂಸೆ ಹರಿದು ಬಂದಿರುವ ಬಗ್ಗೆ ಅವರು ತಿಳಿಸಿದರು. ನಾವು ಜನಾಂದೋಳನದ ಹಂತದಲ್ಲಿದ್ದೇವೆ, ಜನಜೀವನದ ವಿಭಿನ್ನ ಜ್ವಲಂತ ಸಮಸ್ಯೆಗಳ ವಿರುದ್ಧ ಜನತಾಂತ್ರಿಕ ಚಳುವಳಿಗಳನ್ನು ಬೆಳೆಸುವುದೇ ನಮ್ಮ ಧ್ಯೇಯ; ನಾವು ಐಕ್ಯ ಎಡ ಚಳುವಳಿಗಳನ್ನು ಕಟ್ಟುವ ಪರ ಇದ್ದರೂ, ತಮ್ಮನ್ನು ಮಾರ್ಕ್ಸ್‌ವಾದಿ–ಎಡವಾದಿ ಎಂದು ಕರೆದುಕೊಳ್ಳುವ ಪಕ್ಷಗಳು ಸಂಸದೀಯ ಚುನಾವಣಾ ರಾಜಕೀಯದ ಬೆನ್ನು ಹತ್ತಿದ್ದು, ಹೋರಾಟದ ಮಾರ್ಗವನ್ನು ಕೈಬಿಟ್ಟಿವೆ ಎಂದವರು ವಿಷಾದ ವ್ಯಕ್ತ ಪಡಿಸಿದರು.

2ನೇ ವಿಶ್ವಯುದ್ಧದ ಬಳಿಕ ಜರ್ಮನಿ–ಇಟಲಿ–ಜಪಾನ್ ಕೂಟದ ಮಿಲಿಟರಿ ಶಕ್ತಿಯನ್ನು ಸೋಲಿಸಲು ಸಾಧ್ಯವಾಯಿತೇ ಹೊರತು, ಫ್ಯಾಸೀವಾದವನ್ನು ಅಲ್ಲ ಎಂದು 1948ರಷ್ಟರಲ್ಲೇ, ನಮ್ಮ ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾದ ಕಾ. ಶಿವದಾಸ್ ಘೋಷ್‌ರವರು ತೋರಿಸಿಕೊಟ್ಟಿದ್ದನ್ನು ಮತ್ತು ಫ್ಯಾಸೀವಾದ ಈಗ ವಿಶ್ವದ ಎಲ್ಲಾ ಬಿಕ್ಕಟ್ಟುಪೀಡಿತ ಬಂಡವಾಳಶಾಹಿ ದೇಶಗಳ ಗುಣಲಕ್ಷಣವಾಗಿದೆ ಎಂದು ಕಾ. ಚಟರ್ಜಿಯವರು ಸಭೆಯ ಮುಂದಿಟ್ಟರು.

ಈ ಸಮ್ಮೇಳನದಲ್ಲಿ ಅನೇಕ ನಿರ್ಧಾರಗಳನ್ನು ತೆಗೆದುಕೊಂಡಿದ್ದು, ಅನೇಕ ಪ್ರಸ್ತಾಪಗಳನ್ನು ಅನುಮೋದಿಸಲಾಯಿತು. ಕೊಲ್ಕತ್ತೆಯ ಆರ್‌ಜಿ ಕರ್ ಹೋರಾಟವನ್ನು ಬೆಂಬಲಿಸುವ ಗೊತ್ತುವಳಿಯೊಂದು ಅನುಮೋದನೆಗೊಂಡಿತು. ಜರ್ಮನಿಯಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಾಲ್ಗೊಂಡಿದ್ದ MLPD, ಜನರ ಮೇಲೆ ಬಲಪಂಥೀಯ ಫ್ಯಾಸೀವಾದಿ ಶಕ್ತಿಗಳ ಪ್ರಭಾವ ಹೆಚ್ಚುತ್ತಿದ್ದು, ಫ್ಯಾಸೀವಾದಿ ಪಕ್ಷವಾದ AfD 30% ಮತಗಳನ್ನು ಗಳಿಸಿರುವ ಬಗ್ಗೆ ಆತಂಕ ವ್ಯಕ್ತಪಡಿಸಿತು. ಸಭೆಯಲ್ಲಿ ಫ್ಯಾಸೀವಾದದ ವಿರುದ್ಧ ಹೋರಾಡುವ ಅವಶ್ಯಕತೆಗೆ ಒತ್ತು ನೀಡಲಾಯಿತು.

ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ದೌರ್ಬಲ್ಯಕ್ಕೆ ಕಾರಣ ಸರಿಯಾದ ಕಮ್ಯುನಿಸ್ಟ್ ನಾಯಕತ್ವದ ಕೊರತೆ ಎಂಬ ನಮ್ಮ ಪಕ್ಷದ ವಿಶ್ಲೇಷಣೆಯೊಂದಿಗೆ MLPD ಸಹಮತ ಹೊಂದಿದೆ. ಅದರ ಉನ್ನತ ಸ್ತರದ ನಾಯಕರನ್ನು ಒಳಗೊಂಡ ನಿಯೋಗವೊಂದು ಕಳೆದ ಮಾರ್ಚ್‌ನಲ್ಲಿ ಕೊಲ್ಕತ್ತೆಯ ನಮ್ಮ ಕೇಂದ್ರ ಕಛೇರಿಗೆ ಭೇಟಿ ನೀಡಿ ನಮ್ಮ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್, ಹಿರಿಯ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಅಸಿತ್ ಭಟ್ಟಾಚಾರ್ಯರವರನ್ನು ಮತ್ತು ಇನ್ನಿತರ ಕೆಲವು ಕೇಂದ್ರ ಸಮಿತಿ–ಪಾಲಿಟ್ ಬ್ಯೂರೋ ಸದಸ್ಯರನ್ನು ಭೇಟಿ ಮಾಡಿ ವಿಚಾರ ವಿನಿಮಯ ನಡೆಸಿತ್ತು.

ಈ ಸಮ್ಮೇಳನದ ಮುಖ್ಯ ಗುರಿಯೆಂದರೆ, ಕಮ್ಯುನಿಸ್ಟ್ ಚಳುವಳಿಯನ್ನು ಬಲಪಡಿಸುವುದು ಹಾಗೂ ಅಂತರರಾಷ್ಟ್ರೀಯವಾಗಿ ಒಂದು ಕಮ್ಯುನಿಸ್ಟ್ ನಾಯಕತ್ವನ್ನು ಸ್ಥಾಪಿಸುವುದು.

ಪ್ಯಾಲೆಸ್ಟೀನ್‌ಗಾಗಿಯೆಂದೇ ಒಂದು ಅಧಿವೇಶನವನ್ನು ಮೀಸಲಿಟ್ಟು ಸಮ್ಮೇಳನದ ಸಂಜೆ ಈ ಬಗ್ಗೆ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಆದರೆ, ಹಮಾಸ್‌ಅನ್ನು ಒಂದು ಮೂಲಭೂತವಾದಿ ಶಕ್ತಿಯಾಗಿ ಪರಿಗಣಿಸಿ ಅದು ಮಾಡಿದ ದಾಳಿಯನ್ನು MLPD ಖಂಡಿಸಿ ಮಂಡಿಸಿದ ಗೊತ್ತುವಳಿಯನ್ನು ಪ್ಯಾಲೆಸ್ಟೀನ್‌ನ ಪ್ರತಿನಿಧಿಗಳು ವಿರೋಧಿಸಿದರು; ಅವರು ಹಮಾಸ್, ಪ್ಯಾಲೆಸ್ಟೀನಿನ ಪ್ರತಿರೋಧಿ ಹೋರಾಟದ ಭಾಗ ಎಂದು ವಾದಿಸಿದರು. ಈ ಸಂಘರ್ಷದ ಕಾರಣದಿಂದ ಚರ್ಚೆಯನ್ನು ಮುಂದುವರೆಸಲಾಗಲಿಲ್ಲ. ಹಮಾಸ್ ಒಂದು ಉಗ್ರವಾದಿ ಶಕ್ತಿಯಾದರೂ ಅದನ್ನು ಈಗ ಟೀಕಿಸುವುದು ಸಮಂಜಸವಲ್ಲ ಎಂಬುದು ನಮ್ಮ



ನಿಲುವಾಗಿತ್ತು; ಅದನ್ನು ಹೋರಾಡಬೇಕಿರುವುದು ವೈಚಾರಿಕವಾಗಿ ಮತ್ತು ಸಾಂಸ್ಕೃತಿಕವಾಗಿ. ಮತ್ತೆ, ICOR ಗೊತ್ತುವಳಿಯಂತೆ, ಯಾವುದೇ ವೈಚಾರಿಕ ವಿಷಯಗಳನ್ನು ಮತದಾನದ ಮುಖಾಂತರ ನಿರ್ಧರಿಸಲಾಗದು. ಇದಕ್ಕೆ ಸಂಬಂಧಪಟ್ಟಂತೆಯೂ ಅದರೊಡನೆ ನಮಗೆ ಸಹಮತವಿದೆ. ಕಾ. ಶಿವದಾಸ್ ಘೋಷ್‌ರವರ ಬೋಧನೆಯಂತೆ, ವೈಚಾರಿಕ ಭಿನ್ನಾಭಿಪ್ರಾಯಗಳನ್ನು ಚರ್ಚೆಗಳ ಮೂಲಕ ಬಗೆಹರಿಸಬೇಕೇ ವಿನ: ಮತದಾನದ ಮೂಲಕ ಅಲ್ಲ.

'ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್'ನ ಸ್ಥಾಪನೆಯ ಪ್ರಯತ್ನದ ಅಂಗವಾಗಿಯೇ ನಮ್ಮ ಪಕ್ಷ ಏಷ್ಯಾ ತಂಡದ ಭಾಗವಾಗಿ ICOR ನ ಸದಸ್ಯತ್ವ ಹೊಂದಿದೆ. ಈಗಾಗಲೇ ಅಮೆರಿಕಾ ಮತ್ತು ಸ್ಪೇನ್‌ನ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ನಮ್ಮನ್ನು ಸಂಪರ್ಕಿಸಿವೆ. ವೆನಿಜುವೆಲಾದ ಕಮುನಿಸ್ಟ್ ಪಕ್ಷದೊಂದಿಗೆ ನಮ್ಮ ಮಾತುಕತೆ ನಡೆದಿದೆ. ರಷ್ಯಾದಿಂದ 2 ಗುಂಪುಗಳು ಬಂದಿದ್ದವು. ರಷ್ಯಾದ ಮಾವೋವಾದಿ ಎಂದು ತನ್ನ ಪರಿಚಯ ಮಾಡಿಕೊಂಡ ಯುವಕನೊಬ್ಬ ಬಂದಿದ್ದ. ರಷ್ಯಾದ ಕಮ್ಯುನಿಸ್ಟ್ ಕಾರ್ಮಿಕರ ಪಕ್ಷದ (RCWP)ದ ಪ್ರತಿನಿಧಿಯೊಬ್ಬರು, ಉಕ್ರೇನ್ ಮೇಲಿನ ರಷ್ಯಾದ ದಾಳಿಯನ್ನು ತಾವು ಪ್ರತಿಭಟಿಸಿದ್ದಕ್ಕಾಗಿ ತಮ್ಮನ್ನು ಖಂಡಿಸಲಾಯಿತು ಎಂದು ಹೇಳಿದರು. ನಂತರ ತಿಳಿದು ಬಂದಿರುವುದೆಂದರೆ, ಮೊದಲಿಗೆ ಅವರು ದಾಳಿಯನ್ನು ವಿರೋಧಿಸಿದ್ದರೂ, ನಂತರ ರಷ್ಯಾದ ರಾಷ್ಟ್ರವಾದ ಮೇಲ್ಗೈ ಪಡೆದು ಅವರಲ್ಲಿನ ಒಂದು ಗುಂಪು ರಷ್ಯಾದ ಬಂಡವಾಳಶಾಹಿಯನ್ನು ಬೆಂಬಲಿಸಿದ್ದು, ಇದು ಪಕ್ಷವನ್ನು ಹೋಳಾಗಿಸಿದೆ. ತಮ್ಮನ್ನು ಮಾರ್ಕ್ಸ್‌ವಾದಿ–ಲೆನಿನ್‌ವಾದಿ–ಮಾವೋವಾದಿ ಎಂದು ಕರೆದುಕೊಳ್ಳುವ ಗುಂಪೊಂದು ಚೀನಾದಿಂದ ಬಂದಿತ್ತು. ಕೆನ್ಯಾದ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿ ಒಬ್ಬರು ಬಂದಿದ್ದರು.

ಭಾರತ ಒಂದು ಸಾಮ್ರಾಜ್ಯಶಾಹಿ ದೇಶ ಎಂಬ ನಮ್ಮ ವಿಶ್ಲೇಷಣೆಗೆ MLPDಯ ಸಹಮತವಿದೆ. ಈ ವಿಷಯದ ಬಗ್ಗೆ ಕಾ. ಚಟರ್ಜಿಯವರು ಲೆನಿನ್ ಕುರಿತ ವಿಚಾರ ಸಂಕಿರಣದಲ್ಲಿ ವಿಷದವಾಗಿ ಮಾತನಾಡಿದರು. ಮತ್ತು ಅವರು ಲೆನಿನ್ ಮಾದರಿಯ ಪಕ್ಷ ರಚನೆಯನ್ನು ಉಲ್ಲೇಖಿಸುತ್ತಾ, ಅದು, ಸಮಾನ ಮನಸ್ಕರು ಎಂಬುವ ಕೆಲ ಜನರು ಒಗ್ಗೂಡಿ, ಒಂದು ಗೊತ್ತುವಳಿಯೊಂದನ್ನು ಅಳವಡಿಸಿಕೊಂಡು ಪಕ್ಷವನ್ನು ಕಟ್ಟುವುದಲ್ಲ ಎಂದು ವಿವರಿಸಿದರು. ಕಾ. ಶಿವದಾಸ್ ಘೋಷ್‌ರವರು ತೋರಿಸಿಕೊಟ್ಟಂತೆ, ಪಕ್ಷವನ್ನು ಕಟ್ಟ ಬಯಸುವವರು ಮೊದಲಿಗೆ ಲೈಂಗಿಕ ಜೀವನವನ್ನೂ ಒಳಗೊಂಡಂತೆ ಜೀವನದ ಎಲ್ಲಾ ರಂಗಗಳನ್ನು ಆವರಿಸುವಂಥ ಒಂದು ಕಠಿಣ ವೈಚಾರಿಕಾ ಸಂಘರ್ಷವನ್ನು ನಡೆಸಲೇಬೇಕಾಗುತ್ತದೆ; ಈ ಮೂಲಕ ಚಿಂತನೆ ಮತ್ತು ನಿಲುವುಗಳಲ್ಲಿ ಏಕರೂಪತೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ನಮ್ಮ ಪಕ್ಷ ಈ ಮಾದರಿಯದೇ ಆಗಿದೆ. ಲೆನಿನ್ ಪ್ರಕಾರ, ಕ್ರಾಂತಿಯ ಸಿದ್ಧಾಂತವೆಂದರೆ, ಕ್ರಾಂತಿಯ ರಣನೀತಿ ಮತ್ತು ರಣತಂತ್ರವಲ್ಲ, ಬದಲಿಗೆ, ಕ್ರಾಂತಿಯ ಪ್ರತಿಯೊಂದು ಅಂಶವನ್ನೂ ನಿರ್ದೇಶಿಸುವಂಥ ಒಂದು ಸಮಗ್ರ ಕ್ರಾಂತಿಕಾರಿ ಸಿದ್ಧಾಂತ ಎಂದು ಸಹ ಕಾ. ಶಿವದಾಸ್ ಘೋಷ್ ತೋರಿಸಿಕೊಟ್ಟಿದ್ದಾರೆ. ಹಾಗಾಗಿಯೇ, ನಮ್ಮ ಪಕ್ಷದಲ್ಲಿ, ಪಕ್ಷದೊಂದಿಗೆ ಸದಸ್ಯರ ಐಕ್ಯತೆಯ ಮಟ್ಟದ ಆಧಾರದ ಮೇಲೆ 3 ತರಹದ ಸದಸತ್ವಗಳಿವೆ: ಅರ್ಜಿದಾರ ಸದಸ್ಯರು, ಸದಸ್ಯರು ಮತ್ತು ಸ್ಟಾಫ್ ಸದಸ್ಯರು.

ಸಾಮ್ರಾಜ್ಯವಾದವು ಬಂಡವಾಳವಾದದ ಅತ್ಯುನ್ನತ ಹಂತವಾಗಿದ್ದು ಅದಕ್ಕೆ ಮುನ್ನ ಏಕಸ್ವಾಮ್ಯ ಬಂಡವಾಳ ಬೆಳೆದಿರಬೇಕಾಗುತ್ತದೆ; ಈ ಆಧಾರದ ಮೇಲೆ ಒಂದು ದೇಶ ಸಾಮ್ರಾಜ್ಯಶಾಹಿಯೇ ಅಲ್ಲವೇ ಎಂದು ಪರಿಶೀಲಿಸಬೇಕಾಗುತ್ತದೆ ಎಂಬ ಕಾ. ಚಟರ್ಜಿಯವರ ಮಂಡಣೆಯನ್ನು ಎಲ್ಲರೂ ಕೇಳಿಸಿಕೊಂಡರು. ಮತ್ತೆ ಎಲ್ಲಾ ಪ್ರತಿನಿಧಿಗಳು ಇನ್ನೊಂದು ವಿಶ್ವಯುದ್ಧದ ಬಗ್ಗೆ, ವಿಶೇಷವಾಗಿ ಅಣುಯುದ್ಧದ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿದಾಗ, ಲೆನಿನ್, ಎಲ್ಲಿಯೂ 'ಸಾಮ್ರಾಜ್ಯವಾದ ವಿಶ್ವಯುದ್ಧಕ್ಕೆ ಜನ್ಮ ನೀಡುತ್ತದೆ' ಎಂದು ಹೇಳಿಲ್ಲ, 'ಸಾಮ್ರಾಜ್ಯವಾದ ಯುದ್ಧಕ್ಕೆ ಜನ್ಮ ನೀಡುತ್ತದೆ' ಎಂದು ಅವರು ಹೇಳಿದ್ದು, ಈ ಯುದ್ಧ ವಿಶ್ವಯುದ್ಧಕ್ಕೆ ಎಡೆ ಮಾಡಿಕೊಡಬಹುದು ಎಂದು ಕಾ. ಚಟರ್ಜಿಯವರು ಪ್ರತಿಪಾದಿಸಿದರು. ಇಂದು ಅಣು ಯುದ್ಧದ ಸಾಧ್ಯತೆಯ ಬಗ್ಗೆ ಪ್ರಶ್ನಿಸುತ್ತಾ ಅವರು, ರಷ್ಯಾ ಉಕ್ರೇನಿನ ಮೇಲೆ ಅಣುದಾಳಿಯನ್ನು ಮಾಡುವ ಬೆದರಿಕೆಯನ್ನು ಒಡ್ಡಿದೆ; ಆದರೆ, ಇದನ್ನು ಅದು ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದರು. ಏಕೆಂದರೆ, ಅದೇನಾದರೂ ಹೀಗೆ ಮಾಡಿದರೆ, ಉಕ್ರೇನ್ ಸಹ ಅಣ್ವಾಸ್ತ್ರಗಳಿಂದ ಪ್ರತಿಯುದ್ಧ ಹೂಡುವ ಸಾಧ್ಯತೆಯ ಬಗ್ಗೆ ರಷ್ಯಾಗೆ ಅರಿವಿದೆ. ಇದು, ಅಣುಶಕ್ತಿಯಿಂದ ಸುಸಜ್ಜಿತವಾಗಿರುವ ಭಾರತ ಮತ್ತು ಪಾಕಿಸ್ತಾನ, ಎರಡೂ ದೇಶಗಳಿಗೂ ಅನ್ವಯಿಸುತ್ತದೆ. ಹಾಗಾಗಿ, 'ಅಣುಯುದ್ಧ'ದ ಆತಂಕದಿಂದ ಭೀತಿಗೊಳ್ಳುವ ಅವಶ್ಯಕತೆ ಇಲ್ಲ. ಹೀಗೇನಾದರೂ ಆದರೆ, ನಾವು ಒಂದು ಶಾಂತಿಪ್ರಿಯ ನಿಲುವಿಗೆ ಬಲಿಯಾಗುತ್ತೇವೆ, ಕೈಮುಗಿದು ಶಾಂತಿಗಾಗಿ ಬೇಡಿಕೊಳ್ಳುವಂಥ ರಾಜಿಪರ ನಿಲುವನ್ನು ತಳೆಯುತ್ತೇವೆ. ಇದನ್ನು ಬೆಂಬಲಿಸಲಾಗದು ಎಂದು ಕಾ. ಚಟರ್ಜಿಯವರು ವಿವರಿಸಿದರು. ಇದನ್ನು ಕೇಳಿ ಇಟಲಿಯ ಓರ್ವ ಹಿರಿಯ ಪ್ರತಿನಿಧಿಯು ಅವರನ್ನು ಭೇಟಿಯಾಗಿ ಮುಂದೆ ಸಂಪರ್ಕಿಸುವ ಆಶಯ ವ್ಯಕ್ತಪಡಿಸಿದ್ದಾರೆ.

ಸಮ್ಮೇಳನದಲ್ಲಿ ನಮ್ಮ ಚಿಂತನೆಗೆ ಹೊಂದುವಂಥ ಚಿಂತನೆಯುಳ್ಳ ಪಕ್ಷವೇನಾದರೂ ಇದೆಯೇ ಎಂದು ಹುಡುಕಿದಾಗ, ಅವರು ಕಂಡುಕೊಂಡಿದ್ದೆಂದರೆ, MLPD ಮಾತ್ರವೇ ದೇಶೀಯ ಮತ್ತು ವಿದೇಶೀಯ ಸಂಗತಿಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ನಿಲುವುಳ್ಳ ಸಂಘಟಿತ ಪಕ್ಷವಾಗಿದ್ದು, ಈ ಬಗ್ಗೆ ಅದರ ಪ್ರಕಟಣೆಗಳಿವೆ; ವಿಶ್ವ ಕಮ್ಯುನಿಸ್ಟ್ ಆಂದೋಳನವೇ ಚೆಲ್ಲಾಪಿಲ್ಲಿಯಾಗಿರುವಂತಹ ಸ್ಥಿತಿಯಲ್ಲಿರುವುದರಿಂದ ಇನ್ನಿತರ ಹತ್ತು ಹಲವು ಸಂಘಟನೆಗಳು ಕೇವಲ ಬಣಗಳು ಮಾತ್ರ. ಉದಯೋನ್ಮುಖ ಬಂಡವಾಳಶಾಹಿ ದೇಶಗಳ ಪಾತ್ರದ ಬಗ್ಗೆ ಕಾ. ಶಿವದಾಸ್ ಘೋಷ್‌ರವರು ಒಂದು ವಿಶ್ಲೇಷಣೆ ನೀಡಿದ್ದಾರೆ. ಈ ಹಲವು ದೇಶಗಳು ಇಂದು ಉದಯೋನ್ಮುಖ ಸಾಮ್ರಾಜ್ಯಶಾಹಿ ಶಕ್ತಿಗಳಾಗಿವೆ ಎನ್ನುವುದು MLPDಯ ನಿಲುವು. 9ನೇ ಪುಟಕ್ಕೆ

# ಸಿಕ್ಕಿಂನಲ್ಲಿ ಮಾನವನಿರ್ಮಿತ ದುರಂತ

ಇತ್ತೀಚೆಗೆ ಒಂದರ ನಂತರ ಒಂದರಂತೆ ಸಂಭವಿಸಿದ ವಿನಾಶಕಾರಿ 'ನೈಸರ್ಗಿಕ' ವಿಪತ್ತುಗಳು ಇಡೀ ದೇಶವನ್ನು ತಲ್ಲಣಗೊಳಿಸಿವೆ. ಹಸಿರು ಮನೆ ಪರಿಣಾಮವನ್ನುಂಟು ಮಾಡುವ ಅನಿಲಗಳು, ಅರಣ್ಯನಾಶ ಹಾಗೂ ಜಾಗತಿಕ ತಾಪಮಾನದ ಏರಿಕೆಯಿಂದಾಗಿ ಉಂಟಾಗುವ ಶಕ್ತಿಶಾಲಿ ಚಂಡಮಾರುತಗಳು ಅಕಾಲಿಕ ಗುಡುಗು ಸಹಿತ ಮಳೆಗೆ ಕಾರಣವಾಗುತ್ತಿವೆ. ಜೊತೆಗೆ, ಕಾರ್ಪೊರೇಟ್ ಹೂಡಿಕೆದಾರರ ಹಿತಾಸಕ್ತಿಗಾಗಿ ವಿವೇಚನಾರಹಿತ ಅರಣ್ಯನಾಶವೂ ಇಂತಹ ದುರಂತಗಳಿಗೆ ಕೊಡುಗೆ ನೀಡುತ್ತಿದೆ. ಆದರೆ ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಬೂರ್ಜ್ವಾ ಸರ್ಕಾರಗಳು ದೊಡ್ಡ ಗುತ್ತಿಗೆದಾರರು ಮತ್ತು ಖಾಸಗಿ ಕಂಪನಿಗಳ ವಾಣಿಜ್ಯ ಹಿತಾಸಕ್ತಿಗಳನ್ನು ಪೋಷಿಸುವುದಕ್ಕಾಗಿ ತಜ್ಞರು ನೀಡಿದ ಎಚ್ಚರಿಕೆಗಳನ್ನು ನಿರ್ಲಕ್ಷಿಸಿ, ಕಾಡು, ಗುಡ್ಡಗಾಡು ಪ್ರದೇಶಗಳಲ್ಲಿ ಅವೈಜ್ಞಾನಿಕ ನಿರ್ಮಾಣ ಚಟುವಟಿಕೆಗಳಿಗೆ ಆಸ್ಪದ ಒದಗಿಸಿವೆ. ಉತ್ತರಾಖಂಡ, ಹಿಮಾಚಲ ಪ್ರದೇಶ ಮತ್ತು ಕೇರಳದಲ್ಲಿ ಉಂಟಾದ ಇತ್ತೀಚಿನ ವಿಪತ್ತುಗಳನ್ನು 'ಪ್ರಕೃತಿಯ ವಿಕೋಪ'ವೆಂದು ಸರಳೀಕರಿಸಿ ಹೇಳಲಾಗುವುದಿಲ್ಲ. ನಿಸ್ಸಂಶಯವಾಗಿ ಇವು ಮಾನವನ ಹಸ್ತಕ್ಷೇಪದಿಂದ ಉಂಟಾದ ದುರಂತಗಳು. ಹವಾಮಾನ ಬದಲಾವಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಆಯೋಜಿತ ಶೋಷಣೆಯಿಂದ ಉಂಟಾದ ಇಂತಹ ಮಾನವ ನಿರ್ಮಿತ ವಿಪತ್ತಿಗೆ ಇತ್ತೀಚಿನ ಉದಾಹರಣೆಯೆಂದರೆ, ಗುಡ್ಡಗಾಡು ರಾಜ್ಯ ಸಿಕ್ಕಿಂನಲ್ಲಿನ ವಿನಾಶ.

4 ಅಕ್ಟೋಬರ್ 2023 ರಂದು, 'ಮೇಘ ಸ್ಫೋಟ', ಅಂದರೆ ಭಾರೀ ಮಳೆಯಿಂದಾಗಿ, ಉತ್ತರ ಸಿಕ್ಕಿಂನಲ್ಲಿರುವ ಗ್ಲೇಶಿಯಲ್ ದಕ್ಷಿಣ ಲ್ಹೋನಕ್ ಸರೋವರದ ದಡವು ತೀಸ್ತಾ ನದಿಯಲ್ಲಿನ ಹಿಮಪ್ರವಾಹವನ್ನು ತಡೆಯಲು ವಿಫಲವಾಯಿತು. ಪ್ರವಾಹವು ಮಧ್ಯರಾತ್ರಿಯ ಹೊತ್ತಿಗೆ ಚುಂಗ್ಥಾಂಗ್‌ನಲ್ಲಿರುವ ತೀಸ್ತಾ–3 ಅಣೆಕಟ್ಟನ್ನು ತಲುಪಿ ಅದರ ಗೇಟುಗಳನ್ನು ತೆರೆಯುವ ಮೊದಲೇ ಕೆಲವೇ ನಿಮಿಷಗಳಲ್ಲಿ ಅಣೆಕಟ್ಟು ಒಡೆದು ನಾಶವಾಯಿತು. ನೂರಾರು ಜನರು ಸತ್ತರು, ಹಲವರು ಕಾಣೆಯಾದರು, ಬಹಳಷ್ಟು ಜನ ಮಣ್ಣಿನಲ್ಲಿ ಹೂತುಹೋದರು. ಈ ಹಠಾತ್ ಪ್ರವಾಹದಿಂದಾಗಿ ಉತ್ತರ ಸಿಕ್ಕಿಂನ ಕೆಲವು ಗ್ರಾಮಗಳು ಸಂಪೂರ್ಣವಾಗಿ ಕೊಚ್ಚಿಹೋಗಿವೆ. ಸರ್ಕಾರ ಇದನ್ನು 'ನೈಸರ್ಗಿಕ ವಿಕೋಪ' ಎಂದು ಬಣ್ಣಿಸಿದೆ. ಆದರೆ ಅದು ವಾಸ್ತವವೇ? ಸಮುದ್ರ ಮಟ್ಟದಿಂದ 5,200 ಮೀಟರ್‌ಗಳಷ್ಟು ಎತ್ತರದಲ್ಲಿರುವ ದಕ್ಷಿಣ ಲ್ಹೋನಕ್ ಸರೋವರವು, 2021 ರ ವೈಜ್ಞಾನಿಕ ಅಧ್ಯಯನದಿಂದ ಗುರುತಿಸಲ್ಪಟ್ಟ 21 ಸಂಭಾವ್ಯ ಅಪಾಯಕಾರಿ ಸರೋವರಗಳಲ್ಲಿ ಒಂದಾಗಿದೆ. ಹಿಮಾಲಯ ಪ್ರದೇಶದಲ್ಲಿನ ಸಂಭಾವ್ಯ ಅಪಾಯಕಾರಿ ಸರೋವರಗಳನ್ನು ಹೋಲಿಸಿದಾಗ, "ಜಲವಿದ್ಯುತ್‌ಗೆ ಸಿಕ್ಕಿಂನಲ್ಲಿ ಅತ್ಯಧಿಕ ಅಪಾಯವಿದೆ" ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ 2020ರ ವರದಿಯು ಗುರುತಿಸಿದೆ. ಹೀಗಾಗಿ, ಸ್ಕ್ರಾಲ್ ವರದಿಯ ಪ್ರಕಾರ, ತೀಸ್ತಾ ನದಿಗೆ ನಿರ್ಮಿಸಲಾದ ಅಣೆಕಟ್ಟುಗಳಿಗೆ ದಕ್ಷಿಣ ಲ್ಹೋನಕ್ ಸರೋವರದಿಂದ ಅಪಾಯವಿದೆ ಎಂದು ಸಿಕ್ಕಿಂ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಗೆ ಮೊದಲೇ ತಿಳಿದಿತ್ತು. ಇದರರ್ಥ ಕೇಂದ್ರ ಮತ್ತು ಸಿಕ್ಕಿಂ ರಾಜ್ಯ ಸರ್ಕಾರಗಳೆರಡೂ ಇಂತಹ ಅಪಾಯದ ಸಾಧ್ಯತೆಯ ಬಗ್ಗೆ ಚೆನ್ನಾಗಿ ತಿಳಿದಿದ್ದರೂ, ಸನ್ನಿಹಿತವಾದ ವಿಪತ್ತು ತಡೆಯಲು, ಸಾಮಾನ್ಯ ಜನರ ಜೀವ ಮತ್ತು ಆಸ್ತಿಯನ್ನು ಉಳಿಸಲು ಯಾವುದೇ ಪ್ರಯತ್ನ ಮಾಡಲಿಲ್ಲ.

ಅಕ್ಟೋಬರ್ 2023ರ ಹಠಾತ್ ಪ್ರವಾಹ ಮಾತ್ರವಲ್ಲ, ಈ ವರ್ಷದ ಜೂನ್ ತಿಂಗಳಲ್ಲಿ ಸುರಿದ ಸತತ ಮುಂಗಾರುಪೂರ್ವ ಮಳೆಯು ಸಿಕ್ಕಿಂ ಮತ್ತು ಡಾರ್ಜಿಲಿಂಗ್ ಬೆಟ್ಟಗಳ ವಿವಿಧ ಭಾಗಗಳಲ್ಲಿ ವಿನಾಶಕಾರಿ ಭೂಕುಸಿತಗಳನ್ನು ಉಂಟುಮಾಡಿತು. ಈ ಭೂಕುಸಿತಗಳಿಂದಾಗಿ, ಆಹಾರ ಮತ್ತು ಔಷಧಿ ಪೂರೈಕೆಗೆ ಅಗತ್ಯವಾದ, ಸಿಕ್ಕಿಂನ ಜೀವನಾಡಿಯಾಗಿರುವ ರಾಷ್ಟ್ರೀಯ ಹೆದ್ದಾರಿ–10 ಮಾತ್ರವಲ್ಲದೆ ಇತರ ರಾಜ್ಯ ಹೆದ್ದಾರಿಗಳೂ ಸಹ ತೀವ್ರವಾಗಿ ಹಾನಿಗೊಳಗಾದವು. 14ಕ್ಕೂ ಹೆಚ್ಚು ಸೇತುವೆಗಳು ಕುಸಿದವು. ಹಳ್ಳಿಯ ರಸ್ತೆಗಳಲ್ಲಿ ಮತ್ತು ಇನ್ನೂ ಕೆಲವು ಗ್ರಾಮಗಳಲ್ಲಿ ಭೂಕುಸಿತದಿಂದ ಭಾರೀ ಪ್ರಮಾಣದ ಜೀವಹಾನಿ, ಆಸ್ತಿ ಹಾನಿ ಸಂಭವಿಸಿತು. ಹೊರರಾಜ್ಯಗಳ ಸಾವಿರಾರು ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದರು. ಅನೇಕ ಪ್ರದೇಶಗಳು ನೀರು ಸರಬರಾಜು ಮತ್ತು ವಿದ್ಯುತ್ ಇಲ್ಲದೆ ಹಲವು ದಿನಗಳ ಕಾಲ ಉಳಿಯಬೇಕಾಯಿತು. ದೀರ್ಘಕಾಲದವರೆಗೆ ಭಾರತದ ಉಳಿದ ಭಾಗಗಳೊಂದಿಗೆ, ಅಷ್ಟೇ ಅಲ್ಲದೇ ಸಿಕ್ಕಿಂನ ಒಳಗೂ ರಸ್ತೆಮಾರ್ಗದ ಸಂಪರ್ಕಗಳು ಕಡಿತಗೊಂಡವು. ಇದಲ್ಲದೆ, ಈ ವರ್ಷ ಆಗಸ್ಟ್ 20ರಂದು ಸಿಂಗ್ಟಾಮ್ ಬಳಿಯ ತೀಸ್ತಾ–5 ವಿದ್ಯುತ್ ಸ್ಥಾವರವು ಭಾರಿ ಭೂಕುಸಿತದಿಂದ ಹಾನಿಗೊಳಗಾಯಿತು. ಅದು ಹಲವು ದಿನಗಳವರೆಗೆ ವಿದ್ಯುತ್ ಉತ್ಪಾದನೆಯನ್ನು ಸ್ಥಗಿತಗೊಳಿಸಿತು.

2005–2008ರ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯ ಅಣೆಕಟ್ಟುಗಳು ಮತ್ತು ಜಲವಿದ್ಯುತ್ ಯೋಜನೆಗಳನ್ನು ಘೋಷಿಸಲಾಯಿತು. ಸಿಕ್ಕಿಂ ಹಾಗೂ ಪಕ್ಕದ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಬೆಟ್ಟಗಳ ಮಧ್ಯೆ ಹರಿಯುವ ರಂಗೀತ್ ಮತ್ತು ಇತರ ನದಿಗಳನ್ನು ಒಳಗೊಂಡಿರುವ ತೀಸ್ತಾ ನದಿಯ ಜಲಾನಯನ ಭಾಗದ ಸಣ್ಣ ಪ್ರದೇಶದಲ್ಲಿ ಕೆಲವು ನಿರ್ಮಾಣಗಳು ಪ್ರಾರಂಭವಾದವು. ಆ ಸಮಯದಲ್ಲಿ ಅನೇಕ ಪರಿಸರ ತಜ್ಞರು, ಸರಕಾರೇತರ ಸಂಸ್ಥೆಗಳು ಮತ್ತು ಪ್ರಜ್ಞಾವಂತ ನಾಗರಿಕರು ಈ ಯೋಜನೆಗಳನ್ನು ವಿರೋಧಿಸಿದರು. ಈ ಪ್ರದೇಶಗಳಲ್ಲಿ ಭೂಕುಸಿತ, ಹಠಾತ್ ಪ್ರವಾಹ ಮತ್ತು ಇತರ ನೈಸರ್ಗಿಕ ವಿಕೋಪಗಳ ಮಿತಿಮೀರಿದ ಹೆಚ್ಚಳವಾಗುವುದೆಂದು ಎಚ್ಚರಿಸಿದರು. ಸುಪ್ರೀಂ ಕೋರ್ಟಿನಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದವು. ಆದರೆ ಕಾರ್ಪೊರೇಟ್ ಹೂಡಿಕೆದಾರರ ಹಿತಾಸಕ್ತಿಯಿಂದ ಪಶ್ಚಿಮ ಬಂಗಾಳ, ಸಿಕ್ಕಿಂ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ಈ ಮನವಿಗಳಿಗೆ ಗಮನ ಕೊಡಲಿಲ್ಲ. ಬದಲಿಗೆ, ಸರಿಯಾದ ಪರಿಸರ ಪರಿಣಾಮದ ಮೌಲ್ಯಮಾಪನ (EIA), ಸಾರ್ವಜನಿಕ ವಿಚಾರಣೆ ಇಲ್ಲದೆಯೇ, ಅಂತಹ ಪರಿಸರ–ಸೂಕ್ಷ್ಮ, ಭೂವೈಜ್ಞಾನಿಕವಾಗಿ ಸೂಕ್ಷ್ಮವಾದ ಹಾಗೂ ತೀವ್ರ ಭೂಕಂಪ ಪೀಡಿತ ವಲಯದಲ್ಲಿ ಹೆಚ್ಚು ಯೋಜನೆಗಳನ್ನು ಪ್ರಾರಂಭಿಸಲಾಯಿತು ಎಂಬ ಬಲವಾದ ಆರೋಪಗಳು ಕೇಳಿ ಬಂದವು. ಸಿಎಜಿ (ನಿಯಂತ್ರಕ ಮತ್ತು ಲೆಕ್ಕಪರಿಶೋಧಕ ಜನರಲ್) ಯ ಸಿಕ್ಕಿಂ 2009ರ ವರದಿಯಂತೆ ಪರಿಸರ ಸಂರಕ್ಷಣೆ ಕಾಯಿದೆ 1986ರ ಪ್ರಕಾರ ಕಡ್ಡಾಯವಾದ, ಅರಣ್ಯ ಪರಿಸರ ಮತ್ತು ವನ್ಯಜೀವಿ ನಿರ್ವಹಣಾ ಇಲಾಖೆಗಳ ಅನುಮತಿಯಿಲ್ಲದೆಯೇ EIA ಅನ್ನು ಮಾಡಲಾಗಿದೆ. ಇದಲ್ಲದೆ, ಭೂಕಂಪನ ಸಕ್ರಿಯವಾಗಿರುವ ಗುಡ್ಡಗಾಡು ಪ್ರದೇಶಗಳಲ್ಲಿ ಕೇವಲ 'ಚಿಕ್ಕ ಅಣೆಕಟ್ಟು'ಗಳನ್ನು ಮಾತ್ರ ನಿರ್ಮಿಸಬೇಕು ಎಂಬುದು ಅಂತರರಾಷ್ಟ್ರೀಯ ಮಟ್ಟದ ಮಾನದಂಡವಾಗಿದೆ. ಆದರೆ ಇಲ್ಲಿ ಪ್ರಬಲ ಭೂಕಂಪದ ಸಮಯದಲ್ಲಿ ಅಣೆಕಟ್ಟುಗಳಲ್ಲಿ ಬಿರುಕು ಉಂಟಾಗುವುದು ಮತ್ತು ಕುಸಿಯುವ ಸಾಧ್ಯತೆಯನ್ನು ನಿರ್ಲಕ್ಷಿಸಿ ಚಿಕ್ಕ ಅಣೆಕಟ್ಟುಗಳ ಬದಲಿಗೆ ಅನೇಕ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ ಎಂಬ ಆರೋಪಗಳಿವೆ. (ಅಂತಹ ಆರು ಸಂಭವನೀಯ ವಲಯಗಳ ಭೂಕಂಪ ಪೀಡಿತ ವಲಯಗಳಲ್ಲಿ ಸಿಕ್ಕಿಂ 2ನೇ ವರ್ಗದಲ್ಲಿದೆ) ಪರಿಣಾಮವಾಗಿ ಈ ದುರಂತ ಸಂಭವಿಸಿದೆ. ಕೊನೆಯದಾಗಿ ಈ ಅಣೆಕಟ್ಟುಗಳು ಮತ್ತು ವಿದ್ಯುತ್ ಸ್ಥಾವರಗಳ ನಿರ್ಮಾಣದ ಟೆಂಡರ್ ಅನ್ನು ಕಂಪನಿಗಳಿಗೆ ಹಂಚುವ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದ ಆರೋಪಗಳಿವೆ. ಮುಖ್ಯವಾಗಿ ಪರಿಸರ ಸೂಕ್ಷ್ಮ ವಲಯಗಳಲ್ಲಿ ಇಂತಹ ಅಣೆಕಟ್ಟುಗಳ ನಿರ್ಮಾಣದಲ್ಲಿ ಯಾವುದೇ ಅನುಭವವಿಲ್ಲದಿರುವ ಕಂಪನಿಗಳಿಗೂ ಈ ಜವಾಬ್ದಾರಿಯನ್ನು ಕೊಟ್ಟಿರುವ ಬಗ್ಗೆ ಆರೋಪಗಳಿವೆ. 2009ರ ಸಿಎಜಿ ಸಿಕ್ಕಿಂ ವರದಿಯು, "ಯೋಜನೆಗಳ ಅನುಷ್ಠಾನಕ್ಕಾಗಿ ಅಳವಡಿಸಿಕೊಂಡ ವಿಧಾನದ ಬಗ್ಗೆ ರಾಜ್ಯದಲ್ಲಿ ಸಾಕಷ್ಟು ಆಕ್ರೋಶ ಹಾಗೂ ವಿರೋಧ ಇದ್ದರೂ, ಸರ್ಕಾರವು ಯೋಜನೆಗಳ ಅನುಷ್ಠಾನದ ವಿಧಾನ, ಆಯ್ಕೆ ಮಾಡಿರುವ ಕಂಪನಿಗಳ ತಾಂತ್ರಿಕ ಸಾಮರ್ಥ್ಯ, ಆರ್ಥಿಕ ಸಾಮರ್ಥ್ಯ ಮತ್ತು ಅನುಭವ ಇತ್ಯಾದಿ ಬಗ್ಗೆ ಸಾರ್ವಜನಿಕರಿಗೆ ಬಹಿರಂಗಪಡಿಸಿಲ್ಲ. ಹೀಗಾಗಿ, ಅರಾಜಕ, ಯೋಜಿತವಲ್ಲದ, ಭ್ರಷ್ಟ ವಿಧಾನದಲ್ಲಿ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಸಲುವಾಗಿ ಜನರ ಮೇಲೆ ಜಲವಿದ್ಯುತ್ ಯೋಜನೆಗಳನ್ನು ಹೇರಲಾಯಿತು. ರಾಜ್ಯದ ಸಂಪನ್ಮೂಲಗಳು, ನಿವಾಸಿಗಳ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ಯಾವುದೇ ಕಾಳಜಿಯಿಲ್ಲದೇ ಸಿಕ್ಕಿಂ, ಡಾರ್ಜಿಲಿಂಗ್ ಬೆಟ್ಟಗಳು ಮತ್ತು ಕೆಳಭಾಗ, ತೀಸ್ತಾ ನದಿಯ ಜಲಾನಯನ ಪ್ರದೇಶಗಳವರೆಗೆ ಈ ಯೋಜನೆಗಳು ಹಬ್ಬಿದವು. ದುಃಖತಪ್ತ ಜನರ ಆರ್ತನಾದ ಮತ್ತು ಅಳಲು ಅರಣ್ಯರೋದನವಾದವು! ಆದರೆ, ಈ ಸನ್ನಿಹಿತ ಅಪಾಯವನ್ನು ತಡೆಗಟ್ಟಿ, ಸಾಮಾನ್ಯ ಜನರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಯಾವುದೇ ಪ್ರಯತ್ನ ಮಾಡಲಿಲ್ಲ. ಬರೀ ಬಾಯಿಮಾತಿನ ಉಪಚಾರ ಮತ್ತು ಅಗತ್ಯ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಪೊಳ್ಳು ಭರವಸೆಗಳು ವಿಜೃಂಭಿಸಿದವು. ಆದರೆ ವಾಸ್ತವಿಕವಾಗಿ ದುಡಿಯುವ ಬಡ ಜನರು ಕಂಗಾಲಾಗಿ ಹೋದರು.

ಸಾಮಾನ್ಯ ಜನರ ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ಯಾವುದೇ ಕಾಳಜಿಯಿಲ್ಲದೆ ನಮ್ಮ ದೇಶದ ಕಾರ್ಪೊರೇಟ್ ಹೂಡಿಕೆದಾರರ ಮಿತಿಮೀರಿದ ಲಾಭದ ದುರಾಸೆಯ ಫಲಿತಗಳೇ ಇಂತಹ ವಿಪತ್ತುಗಳು. ಸರ್ಕಾರಗಳು ಮತ್ತು ಪರಿಸರ ಮತ್ತು ಅರಣ್ಯ ಸಚಿವಾಲಯ, ಜಾಗತಿಕ ಪರಿಸರ ಆಂದೋಲನ ಮತ್ತು ನಮ್ಮ ದೇಶದೊಳಗಿನ ಚಳುವಳಿಗಳ ಕಾರಣದಿಂದ ಸ್ವಲ್ಪ ಮಟ್ಟಿಗಾದರೂ ನಮ್ಮ ದೇಶದ ಜೀವಿಗಳು ಮತ್ತು ಪರಿಸರವನ್ನು ರಕ್ಷಿಸಲು ಕಾನೂನುಗಳನ್ನು ಜಾರಿಗೆ ತಂದಿವೆ. ಆದರೆ, 1) ಆ ಕಾನೂನುಗಳು ಸರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಲಂಚ ತೆಗೆದುಕೊಳ್ಳುವುದರಿಂದ ಅಥವಾ ಪ್ರಭಾವಿ ಲಾಬಿಗಳ ಒತ್ತಡದಿಂದ, ಈ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕಾದ ಸರ್ಕಾರಿ ಅಧಿಕಾರಿಗಳು, ಈ ಕಾನೂನುಗಳ ಸಂಪೂರ್ಣ ಉಲ್ಲಂಘನೆಗೆ ಅವಕಾಶ ಮಾಡಿಕೊಡುತ್ತಾರೆ. 2) ಕಾನೂನುಗಳನ್ನು ಜಾರಿಗೊಳಿಸಿದಾಗ, ಅದು ಬಡವರ ಹಿತಾಸಕ್ತಿಗೆ ವಿರುದ್ಧವಾಗಿವೆಯೇ ವಿನಃ ಪ್ರಬಲ ಕಾರ್ಪೊರೇಟ್ ಹೂಡಿಕೆದಾರರ ವಿರುದ್ಧ ಅಲ್ಲ. ಉದಾಹರಣೆಗೆ, ಬುಡಕಟ್ಟು ಅರಣ್ಯವಾಸಿಗಳು, ಪೀಳಿಗೆಯಿಂದ ಪೀಳಿಗೆಗೆ, ಸಾವಿರಾರು ವರ್ಷಗಳಿಂದ ಕಾಡಿನಲ್ಲಿ ಅರಣ್ಯ ಸಂಪನ್ಮೂಲಗಳನ್ನು ಅವಲಂಬಿಸಿ, ಅರಣ್ಯಗಳ ಪರಿಸರವನ್ನು ಹೆಚ್ಚು ಬದಲಾಯಿಸದೆ ಅಲ್ಲಿ ವಾಸ ಮಾಡುತ್ತಿರುತ್ತಾರೆ. ಆದರೆ ಬಂಡವಾಳಶಾಹಿ ಹೂಡಿಕೆದಾರರು ಅರಣ್ಯಗಳನ್ನು ಗಣಿಗಾರಿಕೆ, ಪ್ರವಾಸೋದ್ಯಮ, ಕೈಗಾರಿಕೆ ಸ್ಥಾಪನೆ ಇತ್ಯಾದಿಗಳ ಹೂಡಿಕೆಯ ತಾಣವಾಗಿ ನೋಡಲು ಪ್ರಾರಂಭಿಸಿದಾಗ ಅರಣ್ಯ ಪರಿಸರ ದೊಡ್ಡ ಪ್ರಮಾಣದಲ್ಲಿ ನಾಶವಾಗುತ್ತದೆ. 'ಕಾನೂನಿನ ರಕ್ಷಕರು' ಸಾಂಪ್ರದಾಯಿಕ ಬಡ ಅರಣ್ಯವಾಸಿಗಳಿಗೆ ಬದುಕಲು ಯಾವುದೇ ಪರ್ಯಾಯ ಮಾರ್ಗವನ್ನು ಒದಗಿಸದೆ ಅವರ ವಿರುದ್ಧ ಕಾನೂನುಗಳನ್ನು ಜಾರಿಗೆ ತರುತ್ತಾರೆ. ಆದರೆ ಅವರು 'ಸಾರ್ವಜನಿಕ ಹಿತಾಸಕ್ತಿ' ಎಂದು ಕರೆಯಲ್ಪಡುವ ಪ್ರಬಲ ಹೂಡಿಕೆದಾರರ ಚಟುವಟಿಕೆಗಳತ್ತ ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತಾರೆ. 3) ಸಾಮಾನ್ಯವಾಗಿ ಅಸ್ತಿತ್ವದಲ್ಲಿರುವ ಸಮರ್ಥ ಪರಿಸರ ಕಾನೂನುಗಳನ್ನು ಲಾಭದ ದುರಾಸೆಯ ಕಾರ್ಪೊರೇಟ್ ದೈತ್ಯರ ಹಿತಾಸಕ್ತಿಯಲ್ಲಿ ಮಾರ್ಪಡಿಸಲಾಗುತ್ತಿದೆ. ಕಳೆದ ವರ್ಷ 2023ರ ಅರಣ್ಯ (ಸಂರಕ್ಷಣೆ) ತಿದ್ದುಪಡಿ ಕಾಯಿದೆಯು ಅರಣ್ಯವಾಸಿಗಳನ್ನು ಅವರ ಪೂರ್ವಜರ ಭೂಮಿಯಿಂದ ಹೊರಹಾಕುವ ನಿಬಂಧನೆಯನ್ನು ರಚಿಸಿ ಕಾರ್ಪೊರೇಟ್ ಹೂಡಿಕೆದಾರರಿಗೆ ಗಣಿಗಾರಿಕೆ, ಪ್ರವಾಸೋದ್ಯಮ ಮತ್ತು ಇತರ ಹೂಡಿಕೆಯ ಉದ್ದೇಶಗಳಿಗಾಗಿ ದೊಡ್ಡ ಪ್ರಮಾಣದ ಅರಣ್ಯ ಭೂಮಿಯನ್ನು ಬಳಸಲು ಅವಕಾಶ ಮಾಡಿಕೊಟ್ಟಿತು.

ಹವಾಮಾನ ಬದಲಾವಣೆ, ಜಾಗತಿಕ ತಾಪಮಾನ, ನಮ್ಮ ಪರಿಸರದ ಬಿಕ್ಕಟ್ಟು, ಇದು ಇಂದು ದೊಡ್ಡ ಸಮಸ್ಯೆಯಾಗಿದೆ. ಸುಮಾರು 150 ವರ್ಷಗಳ ಹಿಂದೆಯೇ ವಿಶ್ವ ಶ್ರಮಜೀವಿಗಳ ನಾಯಕರು, ಶ್ರೇಷ್ಠ ಮಾರ್ಕ್ಸ್‌ವಾದಿ ಚಿಂತಕರು, ಶ್ರಮಜೀವಿಗಳ ಮಹಾನ್ ನಾಯಕರು ಹಾಗೂ ಕಾರ್ಲ್ ಮಾರ್ಕ್ಸ್ ಅವರೊಂದಿಗೆ ಮಾರ್ಕ್ಸ್‌ವಾದದ ಸಹ–ಲೇಖಕರಾದ ಫ್ರೆಡ್ರಿಕ್ ಎಂಗೆಲ್ಸ್ ಹೇಳಿದ್ದರು: "ಏನೇ ಆಗಲಿ, ಪ್ರಕೃತಿಯ ಮೇಲಿನ ವಿಜಯದ ಕಾರಣಕ್ಕಾಗಿ ಮನುಷ್ಯರು ತಮ್ಮನ್ನು ತಾವು ಬಹಳ ಹೊಗಳಿಕೊಳ್ಳಬಾರದು. ಸತ್ಯವೆಂದರೆ ಪ್ರಕೃತಿಯ ಮೇಲಿನ ಪ್ರತಿ ವಿಜಯಕ್ಕೂ ಪ್ರಕೃತಿಯು ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತದೆ. ಮೊದಲ ಹಂತದಲ್ಲಿ ನಾವು ನಿರೀಕ್ಷಿಸಿದ ಫಲಿತಾಂಶಗಳು ಬರುತ್ತವೆ ನಿಜ. ಆದರೆ ಎರಡನೆಯ ಮತ್ತು ಮೂರನೇ ಹಂತದಲ್ಲಿ ಇದು ವಿಭಿನ್ನವಾದ, ಅನಿರೀಕ್ಷಿತ ಪರಿಣಾಮಗಳನ್ನು ಉಂಟು ಮಾಡಿ ಮೊದಲನೆಯ ಫಲಿತಾಂಶವನ್ನು ರದ್ದುಗೊಳಿಸುತ್ತದೆ." (ವಾನರನಿಂದ ಮಾನವನ ಪರಿವರ್ತನೆಯಲ್ಲಿ ಶ್ರಮದ ಪಾತ್ರ) ಅವರು ಮುಂದುವರೆದು ಹೇಳಿದ್ದರು, "ಹೀಗೆ ಪ್ರತಿ ಹೆಜ್ಜೆಯಲ್ಲೂ ವಿದೇಶಿಯರನ್ನು ಗೆದ್ದವರಂತೆ, ನಿಸರ್ಗದಾಚೆ ನಿಂತವರಂತೆ ನಾವು ನಿಸರ್ಗವನ್ನು ಆಳುವುದು ಸಾಧ್ಯವಿಲ್ಲ – ಬದಲಿಗೆ ಮಾಂಸ, ರಕ್ತ ಮತ್ತು ಮೆದುಳಿನಿಂದ ಕೂಡಿದ ನಾವು ಈ ಪ್ರಕೃತಿಗೆ ಸೇರಿದವರು ಎಂದು ಸದಾ ನೆನಪಿಸಿಕೊಳ್ಳಬೇಕು. ಅದರ ಮಧ್ಯೆಯೇ ನಮ್ಮ ಅಸ್ತಿತ್ವವಿದೆ. ನಿಸರ್ಗದ ನಿಯಮಗಳನ್ನು ಅಧ್ಯಯನ ಮಾಡಿ ಅವುಗಳನ್ನು ಸರಿಯಾಗಿ ಅನ್ವಯಿಸುವುದರಲ್ಲಿ ನಾವು ಸಮರ್ಥರಾಗಿರುವುದರಿಂದಲೇ, ಇತರೆಲ್ಲಾ ಜೀವಿಗಳಿಗಿಂತಲೂ ನಾವು ಮೇಲ್ಮಟ್ಟದಲ್ಲಿರುವುದು ಹಾಗೂ ನಿಸರ್ಗದ ಮೇಲೆ ಹತೋಟಿ ಸಾಧಿಸಿರುವುದು." ಎಂಗೆಲ್ಸ್ ಅವರ ಈ ಬೋಧನೆಯು ಬಂಡವಾಳಶಾಹಿ ವರ್ಗದ ಲಾಭದ ದುರಾಸೆಯಿಂದ ಪ್ರಕೃತಿಯ ಅರಾಜಕ ಶೋಷಣೆಗೆ ಬದಲಾಗಿ, ಮಾನವಕುಲದ ಸಾಮೂಹಿಕ ಹಿತಾಸಕ್ತಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಸಮಗ್ರ ವಿಧಾನಕ್ಕಾಗಿ ಆಗ್ರಹಿಸುತ್ತದೆ. ವಾಸ್ತವವಾಗಿ, 19ನೇ ಶತಮಾನದ ಅಂತ್ಯದ ವೇಳೆಗೆ ಮಾರ್ಕ್ಸ್–ಎಂಗೆಲ್ಸ್ ಈ ನಿಲುವನ್ನು ಒದಗಿಸುವುದರೊಂದಿಗೆ ಜಾಗತಿಕ ಪರಿಸರ ಚಳುವಳಿ ಪ್ರಾರಂಭವಾಯಿತೆನ್ನಬೇಕು.

ಇಂದು, ಸಮಾಜದ ಒಟ್ಟಾರೆ ಹಿತಾಸಕ್ತಿಯಲ್ಲಿ ಕೇವಲ ಯೋಜಿತ ಆರ್ಥಿಕತೆ ಮತ್ತು ಪಳೆಯುಳಿಕೆ ಇಂಧನಗಳ ಮಿತವಾದ ಬಳಕೆಯಿಂದ ಮಾತ್ರವೇ ಇಂತಹ ದುರಂತಗಳನ್ನು ತಡೆಗಟ್ಟಬಹುದು. ಕಾರ್ಪೊರೇಟ್ ದೈತ್ಯರ ಗರಿಷ್ಠ ಲಾಭದ ಉದ್ದೇಶ ಹೊಂದಿರುವ ಬಂಡವಾಳಶಾಹಿ ಸಮಾಜವು ಅಂತಹ ಯೋಜಿತ ಆರ್ಥಿಕತೆಗೆ ತದ್ವಿರುದ್ಧವಾದ ವ್ಯವಸ್ಥೆಯಾಗಿದೆ. ಇಂತಹ ನೈಸರ್ಗಿಕ ವಿಕೋಪಗಳಿಂದ ಸಾರ್ವಜನಿಕರನ್ನು ರಕ್ಷಿಸಲು ಬಲಿಷ್ಠ ಪರಿಸರ ಆಂದೋಲನ ನಡೆಯಬೇಕಾಗಿದೆ. ಆದರೆ ಇದು ರಾಜಕೀಯ ದೃಷ್ಟಿಕೋನದಿಂದ ಮುಕ್ತವಾಗಿರಬೇಕಾಗಿಲ್ಲ. ಬದಲಿಗೆ ಈ ಅಮಾನವೀಯ ನಿರ್ದಯ ಶೋಷಣೆಯ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ನಿರ್ದೇಶಿಸಲ್ಪಟ್ಟ ಪರಿಸರ ಚಳುವಳಿ ನಮ್ಮ ಮುಂದಿರುವ ತುರ್ತು ಅಗತ್ಯವಾಗಿದೆ.

# ಕೆಲಸದ ಅವಧಿಯ ಹೆಚ್ಚಳ – ಶ್ರಮಿಕರ ಕಠೋರ ಶೋಷಣೆ

ಗುಲಾಮಗಿರಿ ವ್ಯವಸ್ಥೆಯಲ್ಲಿ, ಗುಲಾಮರೊಡೆಯರಿಗೆ ಗುಲಾಮರ ಮೇಲೆ ಅವರ ಶ್ರಮವನ್ನೂ ಸೇರಿದಂತೆ ಸಂಪೂರ್ಣ ಒಡೆತನವಿತ್ತು. ಒಡೆಯರ ಆದೇಶದ ಮೇರೆಗೆ ಗುಲಾಮರು ಪ್ರತಿಕೂಲ ಪರಿಸ್ಥಿತಿಯಲ್ಲೂ ಸಮಯದ ಪರಿವೆಯಿಲ್ಲದೆ ಕೆಲಸ ಮಾಡಬೇಕಿತ್ತು. ಅದರೆ ಗುಲಾಮರೊಡೆಯರಿಗೆ ಗುಲಾಮರ ಜೀವಕ್ಕೆ ಕುತ್ತುಬರುವಷ್ಟು ಕೆಲಸ ಮಾಡಿಸಬಾರದೆಂಬ ಎಚ್ಚರಿಕೆಯೂ ಇತ್ತು. ಕಾರಣ, ಗುಲಾಮರು ಸತ್ತರೆ ಒಡೆಯರ ಸುಖ ಸಂಪತ್ತಿಗೆ ಹಾನಿಯಾಗುತ್ತಿತ್ತು. ನಂತರ ಇತಿಹಾಸ ಸಾಬೀತುಪಡಿಸಿದಂತೆ ಆಫ್ರಿಕಾ ಮತ್ತಿತರ ದೇಶಗಳಲ್ಲಿ ಅಸಂಖ್ಯಾತ ಗುಲಾಮರು ದೊರೆತ ಕಾರಣ ಗುಲಾಮರಿಗೆ ದೊರೆಯುತ್ತಿದ್ದ ಅಲ್ಪಸ್ವಲ್ಪ ವಿರಾಮವೂ ಇಲ್ಲದಂತಾಯಿತು. ಅಮೆರಿಕದಲ್ಲಿ ಅದೆಷ್ಟೋ ಗುಲಾಮರು ದುಡಿದುಡಿದು ಅಕಾಲಿಕ ಸಾವನ್ನಪ್ಪಿ ತೋಟಗಳಿಗೆ ಗೊಬ್ಬರವಾದರು. ಗುಲಾಮನೋರ್ವನ ಸಾಮರ್ಥ್ಯವನ್ನೆಲ್ಲ ಆದಷ್ಟು ಬೇಗನೆ ಹೀರಿ ಆತನನ್ನು ಸಾವಿಗೆ ತಳ್ಳುವುದು ಒಡೆಯರಿಗೆ ಹೆಚ್ಚು ಲಾಭದಾಯಕವೆನಿಸತೊಡಗಿತು.

ಪ್ರಸಕ್ತವಾಗಿ ನಾವೀಗ ಹೆಚ್ಚುಕಡಿಮೆ ಮುಂದುವರಿದ ಬಂಡವಾಳಶಾಹಿ ಸಮಾಜವಾಗಿ ಪ್ರಗತಿ ಹೊಂದಿದ್ದೇವೆ. ಆದರೆ ಗುಲಾಮಗಿರಿಯು ಇನ್ನೊಂದು ರೂಪದಲ್ಲಿ ಮುಂದುವರಿಯುತ್ತಿದೆ. ಮಹಾನ್ ಮಾರ್ಕ್ಸ್‌ರವರು ತೋರಿಸಿದಂತೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರು ವೇತನ ಗುಲಾಮರಾಗಿದ್ದಾರೆ. ಅವರ ಶ್ರಮಕ್ಕೆ ನೀಡಬೇಕಾಗಿದ್ದ ವೇತನದಲ್ಲಿ ಕಡಿತ ಮಾಡಿ, ಕೊಡದ ವೇತನವೇ ಬಂಡವಾಳಿಗನಿಗೆ ಲಾಭವಾಗುತ್ತದೆ. ಗರಿಷ್ಠ ಲಾಭದ ಆಸೆಯೇ ಬಂಡವಾಳಶಾಹಿಗಳು ಒಬ್ಬ ಕಾರ್ಮಿಕನಿಂದ ಅತಿ ಹೆಚ್ಚು ಶ್ರಮವನ್ನು ಬಲವಂತವಾಗಿ ಹೀರಲು ಪ್ರೇರೇಪಿಸುತ್ತದೆ. ಹಾಗಾಗಿ ಯಾವುದೇ ಪರಿಹಾರ ಕೊಡದೆ ಕೆಲಸದ ಅವಧಿಯನ್ನು ಹೆಚ್ಚಿಸುವುದು ವ್ಯವಸ್ಥೆಯ ಒಂದು ಲಕ್ಷಣವಾಗಿದೆ. ಕೆಲಸದ ಅವಧಿಯನ್ನು ಹೆಚ್ಚಿಸುವ ಪ್ರಕ್ರಿಯೆಯು ಎಂದೂ ನೀಗದ ಹಸಿವಿನಂತಿದ್ದು, ಎಲ್ಲಾ ಮಾನವೀಯ ಗುಣಗಳನ್ನು ಅದು ತಿಂದುಹಾಕುತ್ತದೆ. ದಿನಕ್ಕೆ ಎಂಟು ಗಂಟೆ ಎಂಬ ಕೂಗು ಮೊಟ್ಟಮೊದಲಿಗೆ ಕೇಳಿಬಂದದ್ದು 19ನೇ ಶತಮಾನದ ದ್ವಿತೀಯಾರ್ಧ ಭಾಗದಲ್ಲಿ. ಈ ಘೋಷಣೆಯನ್ನು ಮೊದಲು 1866ರಲ್ಲಿ ಅಮೆರಿಕನ್ ಲೇಬರ್ ಕಾಂಗ್ರೆಸ್‌ನಲ್ಲಿ ಮತ್ತು ಕಾರ್ಲ್ ಮಾರ್ಕ್ಸ್‌ರ ಮಾರ್ಗದರ್ಶನದ ಮೊದಲನೆಯ ಅಂತರರಾಷ್ಟ್ರೀಯದಲ್ಲಿ ಎತ್ತಲಾಯಿತು. ದಿನಕ್ಕೆ 8 ಗಂಟೆಗಳ ದುಡಿಮೆಗೆ ಮಾತ್ರ ಆಗ್ರಹಿಸುವ ಹೋರಾಟವು ವಿಶ್ವದ ಕಾರ್ಮಿಕ ಚಳುವಳಿಗಳಲ್ಲಿ ಕೇವಲ ಆರ್ಥಿಕ ಹೋರಾಟದ ಭಾಗವಷ್ಟೇ ಅಲ್ಲದೆ ಅದು ರಾಜಕೀಯ ಹೋರಾಟದ ಭಾಗವಾಯಿತು. 19ನೇ ಶತಮಾನದ ಕೊನೆಯ ಭಾಗದಲ್ಲಿ ಕಾರ್ಮಿಕ ವರ್ಗವು ದಿನಕ್ಕೆ 9 ಗಂಟೆಗಳ ಕೆಲಸಕ್ಕೆ ಸತತ ಹೋರಾಟ ನಡೆಸಿತು. ಕೆಲಸದ ವಾತಾವರಣ ಕೆಟ್ಟದಾಗಿದ್ದು, ಅಸುರಕ್ಷಿತ ವಾತಾವರಣದಲ್ಲಿ ದಿನಕ್ಕೆ 10 ರಿಂದ 16 ಗಂಟೆಗಳ ದುಡಿತ ಸಾಮಾನ್ಯವಾಗಿತ್ತು. ಸಾವು ನೋವುಗಳು ಎಷ್ಟೋ ಕೆಲಸದ ತಾಣಗಳಲ್ಲಿ ಸರ್ವೇಸಾಮಾನ್ಯವಾಗಿದ್ದವು.

1886ರಲ್ಲಿ ಅಮೆರಿಕದ ಷಿಕಾಗೋನ ಹೇ ಮಾರ್ಕೆಟ್‌ನಲ್ಲಿ ಕಾರ್ಮಿಕರು ಸಂಘಟಿಸಿದ ಪ್ರತಿಭಟನೆಯಲ್ಲಿ ಪೊಲೀಸರು ಮತ್ತು ಕಾರ್ಮಿಕರ ನಡುವೆ ಭೀಕರ ಘರ್ಷಣೆ ನಡೆಯಿತು. ಚಾಲ್ತಿಯಲ್ಲಿದ್ದ 12 ರಿಂದ 16 ಗಂಟೆಗಳ ಘೋರ ಕೆಲಸದ ಅವಧಿಯನ್ನು ವಿರೋಧಿಸಿ ಕೇವಲ 8 ಗಂಟೆ ಮಾತ್ರ ಕೆಲಸದ ಅವಧಿ ಇರಬೇಕೆಂದು ಕಾಮಿಕರು ಚಳುವಳಿ ನಡೆಸಿದರು. ವಿಶ್ವದಾದ್ಯಂತ ದುಡಿಯುವ ಜನತೆಯ ನ್ಯಾಯಯುತವಾದ ಹೋರಾಟ, ದಿಟ್ಟತನ, ಧೈರ್ಯ, ನಿರ್ಧಾರವು ಹುಟ್ಟಿರುವುದು ಷಿಕಾಗೋ ಚಳುವಳಿಯ ಹೋರಾಟದಿಂದ. ಅಲ್ಲಿ ಹುತಾತ್ಮರಾದ ಕಾರ್ಮಿಕರ ರಕ್ತದ ಪ್ರವಾಹದಲ್ಲಿ ತೊಯ್ದ ರಕ್ತಸಿಕ್ತ ಕೆಂಪು ಬಾವುಟವು ಹೋರಾಟದ ಲಾಂಛನವಾಯಿತು. ಜೊತೆಗೆ ಆ ಕೆಂಬಾವುಟವು ಎಲ್ಲಾ ತರಹದ ಶೋಷಣೆ ಮತ್ತು ಅನ್ಯಾಯ ಹಾಗೂ ಶೋಷಿತರ ಗೌರವವನ್ನು ಅಭಿವ್ಯಕ್ತಿಸಿತು.

1886ರ ಸುಪ್ರಸಿದ್ಧ ಮೇ ದಿನಾಚರಣೆಯ ಹೋರಾಟ ಮತ್ತು ಕಾರ್ಮಿಕರ ಬಲಿದಾನವು ವಿಶ್ವದಾದ್ಯಂತ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿತು. 1889ರಲ್ಲಿ ಪ್ಯಾರೀಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸೋಷಲಿಸ್ಟ್ ಸಮ್ಮೇಳನ, ಮೇ 1ನ್ನು ಅಂತರರಾಷ್ಟ್ರೀಯ ಕಾರ್ಮಿಕರ ದಿನವನ್ನಾಗಿ ಘೋಷಿಸಿತು. 1917ರಲ್ಲಿ ವಿಶ್ವದಲ್ಲಿ ಮೊಟ್ಟ ಮೊದಲ ಬಾರಿಗೆ ರಷ್ಯಾದ ಕಾರ್ಮಿಕರು ಬಂಡವಾಳಶಾಹಿ ಆಡಳಿತವನ್ನು ಹೊರಗಟ್ಟಿ ಕಾರ್ಮಿಕ ಸರ್ಕಾರವನ್ನು ಸ್ಥಾಪನೆ ಮಾಡಿದರು. ಅದರಿಂದ ಕೆಲಸದ ಅವಧಿಯನ್ನು ಹೆಚ್ಚಿಸಿ ಕಾರ್ಮಿಕರ ಶೋಷಣೆ ಮಾಡುವುದು ರಷ್ಯಾದಲ್ಲಿ ಕೊನೆಯಾಯಿತು. ಸಮಾಜವಾದಿ ಪುನರ್ನಿರ್ಮಾಣದ ಪ್ರಗತಿಯೊಂದಿಗೆ ರಷ್ಯಾದಲ್ಲಿ ಕೆಲಸದ ಅವಧಿಯು ಕ್ರಮೇಣವಾಗಿ ಕಡಿಮೆಯಾಯಿತು. 1927ರಲ್ಲಿ ಕೆಲಸದ ಸಮಯ ದಿನಕ್ಕೆ 6 ಗಂಟೆಗಳಾಗಿ, 104 ದಿನಗಳ ವೇತನ ಸಹಿತ ರಜೆ ಜಾರಿಗೊಳಿಸಲಾಯಿತು. 1929ರಲ್ಲಿ ದುಡಿಮೆಯನ್ನು ವಾರಕ್ಕೆ 5 ದಿನಗಳಿಗೆ ಇಳಿಸಲಾಯಿತು.

ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ದುರ್ಬಲಗೊಂಡ ಬೆನ್ನಲ್ಲೇ ಸೋವಿಯತ್‌ನ ಪತನಾನಂತರ ಚೀನಾದಲ್ಲಿ ಸಮಾಜವಾದದ ಪತನವಾಯಿತು. ಬಂಡವಾಳಶಾಹಿ ವ್ಯವಸ್ಥೆಯ ನಿಯಮದಂತೆ ಪ್ರತಿಕ್ಷಣ ಬಿಕ್ಕಟ್ಟಿನಲ್ಲಿ ಸಿಲುಕಿರುವ ಏಕಸ್ವಾಮ್ಯಾಧಿಪತಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು, ಕಾರ್ಮಿಕರ ದೇಹದಲ್ಲಿ ರಕ್ತದ ಕೊನೆಯ ತೊಟ್ಟಿರುವವರೆಗೂ ಅದನ್ನು ಹೀರಲು ಕಾತುರರಾಗಿರುತ್ತಾರೆ. ನಿರುದ್ಯೋಗಿಗಳ ಸೈನ್ಯವೇ ಸೃಷ್ಟಿಯಾಗಿ, ಕಾರ್ಖಾನೆಗಳ ಗೇಟಿನೆದುರು ಕೆಲಸಕ್ಕಾಗಿ ಅವರು ಕಾಯುತ್ತಿರುತ್ತಾರೆ. ಅಂತಹ ಸಂದರ್ಭದಲ್ಲಿ, ಸಿಕ್ಕ ಕೆಲಸದಿಂದ ವಜಾಗೊಳ್ಳುವ ಭಯದಲ್ಲಿ ಕಾರ್ಮಿಕರು ಯಾವುದೇ ರೀತಿಯ ಹೀನಾಯ ಶೋಷಣೆಗೂ ಒಳಗಾಗಲು ಒಪ್ಪಿಕೊಳ್ಳುತ್ತಾರೆ.

ಇಂದಿನ ಜಾಗತೀಕರಣ–ಉದಾರೀಕರಣ–ಖಾಸಗೀಕರಣದ ಕಾಲದಲ್ಲಿ, ಕಾರ್ಮಿಕರ ಪರವಾಗಿದ್ದ ನಾಗರಿಕ ಕಾನೂನುಗಳನ್ನೆಲ್ಲ ಒಂದೊಂದಾಗಿ ಹಿಂಪಡೆಯಲಾಗುತ್ತಿದೆ. ಭಾರತದಲ್ಲಿ ಉದ್ಯೋಗದಲ್ಲಿರುವ ಶೇಕಡ 93 ರಷ್ಟು ಶ್ರಮಿಕರು ಅಸಂಘಟಿತ ವಲಯದಲ್ಲಿದ್ದಾರೆ. ಬಂಡವಾಳಶಾಹಿಗಳು ಯಾವುದೇ ಉದ್ಯೋಗ ಭದ್ರತೆ ನೀಡದ ಈ ವರ್ಗವನ್ನು ಕ್ರೂರ ಶೋಷಣೆಗೆ ಒಳಪಡಿಸಿದ್ದಾರೆ. ಉದ್ಯೋಗದ ಅವಧಿ ಹಿಂದೆ ಇದ್ದಂತೆ ದಿನಕ್ಕೆ 14 ರಿಂದ 16 ಗಂಟೆಗಳ ವರೆಗೆ ನಡೆಯುತ್ತಿದೆ. ಭಾರತದಲ್ಲಿ ಸುಮಾರು 42 ಕೋಟಿ ವಲಸೆ ಕಾರ್ಮಿಕರಿದ್ದು, ಅವರು ಪರಿಚಿತ ಸಾಮಾಜಿಕ ವಾತಾವರಣದಿಂದ ಸ್ಥಳಾಂತರಗೊಂಡಿದ್ದಾರೆ. ಯಾವುದೇ ಸಾಮಾಜಿಕ ಬೆಂಬಲ, ಕುಟುಂಬದ ಬೆಂಬಲವೂ ಇಲ್ಲದ ಅನಾಥ ಮತ್ತು ಅಸಂಘಟಿತ ಕಾರ್ಮಿಕರು ಶೋಷಣೆಗೆ ಕೊನೆಯಿಲ್ಲದೆ ಗುಲಾಮರಂತೆ ಶರಣಾಗುತ್ತಿದ್ದಾರೆ. ಸಂಘಟಿತ ವಲಯವೆಂದೇ ಪರಿಗಣಿಸಲಾಗುವ ಸರ್ಕಾರಿ ಉದ್ದಿಮೆಗಳಲ್ಲೂ ಗುತ್ತಿಗೆ ಕಾರ್ಮಿಕರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಖಾಯಂ ಹುದ್ದೆಗಳನ್ನು ಭರ್ತಿ ಮಾಡುವ ಬದಲು, ಯಾವುದೇ ಕಾರ್ಮಿಕ ಕಾನೂನುಗಳು ಅನ್ವಯವಾಗದ ಗುತ್ತಿಗೆ ನೌಕರರನ್ನೇ ನೇಮಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ಹಲವಾರು ಹಂತದಲ್ಲಿ ಗುತ್ತಿಗೆದಾರರು ಕೆಲಸ ಮಾಡುತ್ತಾರೆ. ಗುತ್ತಿಗೆ ನೌಕರರನ್ನು ಅತಿ ಕಡಿಮೆ ಸಂಬಳಕ್ಕೆ ಬೇಕಾದಷ್ಟು ಗಂಟೆಗಳ ಕಾಲ ಕೆಲಸ ಮಾಡಿಸಲಾಗುತ್ತದೆ. ಸುಮಾರು 1 ಕೋಟಿ ಇರುವ ಸ್ಕೀಮ್ ಕಾರ್ಮಿಕರ ಪರಿಸ್ಥಿತಿಯೂ ಭಿನ್ನವಿಲ್ಲ. ಖಾಸಗಿ ಆಸ್ಪತ್ರೆ ವಲಯದಲ್ಲಿ 50 ಲಕ್ಷ ಮತ್ತು ಸಣ್ಣ ವ್ಯಾಪಾರದಲ್ಲಿ ಸುಮಾರು 4 ಕೋಟಿ ನೌಕರರು 12



ಗಂಟೆ ಮತ್ತು ಅದಕ್ಕೂ ಹೆಚ್ಚು ಕಾಲ ದುಡಿಯುತ್ತಾರೆ.

ಇಷ್ಟಲ್ಲದೆ, ಕೆಲಸದ ಸಮಯವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಇದೀಗ ಹೈಟೆಕ್ ಐಟಿ ಉದ್ಯಮಕ್ಕೂ ವಿಸ್ತರಿಸಲಾಗಿದೆ. ಕಾರ್ಮಿಕ ಕಾನೂನುಗಳ ವ್ಯಾಪ್ತಿಗೆ ಒಳಪಡದ ವಿಶೇಷ ಆರ್ಥಿಕ ವಲಯಗಳಲ್ಲಿ ಹೆಚ್ಚಿನ ಐಟಿ ಕಂಪನಿಗಳು ನೆಲೆಸಿವೆ. ಇದುವರೆಗೂ ಉದ್ಧರಿಸಿದಂತೆ ಖಾಯಂ ಉದ್ಯೋಗದ ದಿನಗಳು ಗತಕಾಲದ ಮಾತಾಗಿವೆ. ಐಟಿ ಉದ್ಯಮದಲ್ಲೂ ಕೆಲಸ ಉಳಿಯುವ ಯಾವುದೇ ಗ್ಯಾರಂಟಿ ಇಲ್ಲ. ಐಟಿ ಉದ್ಯಮದ ವಿಧಾನವೆಂದರೆ, ಅತಿ ಕಡಿಮೆ ಸಮಯದಲ್ಲಿ ತರುಣ ಉದ್ಯೋಗಿಗಳ ಚೈತನ್ಯವನ್ನು ಎಷ್ಟು ಸಾಧ್ಯವೋ ಅಷ್ಟು ಹೀರಿಬಿಡುವುದಾಗಿದೆ. ಯಾವುದೇ ಒಬ್ಬ ಐಟಿ ಉದ್ಯೋಗಿಯ ಉತ್ಪಾದಕತೆಯು ಬದಲಾಗುತ್ತಿರುವ ಅವಶ್ಯಕತೆಗೆ ಸರಿದೂಗದಿದ್ದರೆ ಅಥವಾ ಕಡಿಮೆಯಾಗಿದ್ದರೆ, ಆತ ಅಥವಾ ಆಕೆಯನ್ನು ಕೆಲಸದಿಂದ ಹೊರಹಾಕಿ ಹೊಸ ಉದ್ಯೋಗಿಗಳನ್ನು ತರಲಾಗುತ್ತದೆ. ಐಟಿ ಸಿಬ್ಬಂದಿಗಳನ್ನು, ವಿಶೇಷವಾಗಿ ಐಟಿ ಸೇವಾ ಸಿಬ್ಬಂದಿಗಳನ್ನು 12, 14, 16 ಗಂಟೆಗಳ ಕಾಲ ಕೆಲಸ ಮಾಡಿಸಲಾಗುತ್ತದೆ. ಇತ್ತೀಚೆಗೆ ಕಾಂಗ್ರೆಸ್ ನೇತೃತ್ವದ ಕರ್ನಾಟಕ ರಾಜ್ಯ ಸರ್ಕಾರವು ಐಟಿ ಉದ್ಯಮದ ಕೆಲಸದ ಅವಧಿಯನ್ನು 14 ಗಂಟೆಗಳವರೆಗೆ ವಿಸ್ತರಿಸುವ ಕಾನೂನಿನ ಪ್ರಸ್ತಾಪದೊಂದಿಗೆ ಮುಂದೆ ಬಂದಿದೆ. ಹೀಗೆ ಕಾರ್ಮಿಕ ಶೋಷಣೆಯನ್ನು ಕಾನೂನುಬದ್ಧಗೊಳಿಸುವುದು ಮಾನವೀಯ ನ್ಯಾಯಪರತೆ ಮತ್ತು ನಾಗರೀಕತೆಯ ಎಲ್ಲಾ ಪರಿಕಲ್ಪನೆಗಳನ್ನು ಮೀರಿದೆ. ಈ ಕ್ರಮವು 60 ಲಕ್ಷ ಐಟಿ ವೃತ್ತಿಪರರ ಮೇಲೆ ಪರಿಣಾಮ ಬೀರಲಿದೆ. ಸಿಪಿಎಂ ನೇತೃತ್ವದ ಕೇರಳ ರಾಜ್ಯ ಸರ್ಕಾರವೂ ಕಾರ್ಮಿಕರ ಇಂತಹ ಶೋಷಣೆಗೆ ಹೊರತಾಗಿಲ್ಲ. ಕಾರ್ಮಿಕ ಕಾನೂನುಗಳನ್ನು ಬದಿಗೊತ್ತಿ ಅವರನ್ನು ಹೆಚ್ಚು ಕಾಲ ಕೆಲಸಕ್ಕೆ ಹಚ್ಚುತ್ತಿದೆ. ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮವು ಮೊದಲು ಸರ್ಕಾರಿ ಇಲಾಖೆಯಾಗಿದ್ದು ನಂತರ ಅದನ್ನು ನಿಗಮವಾಗಿ ಮಾರ್ಪಡಿಸಲಾಯಿತು.

ಕೆಎಸ್‌ಆರ್‌ಟಿಸಿ ಒಳಗೆ ಎಸ್.ಡಬ್ಲ್ಯೂ.ಐ.ಎಫ್.ಟಿ (SWIFT) ಎಂಬ ಕಂಪನಿಯನ್ನು ಸರ್ಕಾರ ತಂದಿತು. ಇಲ್ಲಿ ಕೆಲಸದ ಅವಧಿ 12 ಗಂಟೆಗಳು. ಒಂದು ವರ್ಗದ ಕಾರ್ಮಿಕರು ಬಸ್ ನಿಲ್ದಾಣಕ್ಕೆ ಬೇಗನೆ ಬಂದು ಅವರಿಗೆ ಕೆಲಸ ಹಂಚಿಕೆಯಾಗುವವರೆಗೆ ಕಾಯುತ್ತಿರುತ್ತಾರೆ. ಅವರು ಕೆಲಸ ಪ್ರಾರಂಭ ಮಾಡಿದ ನಂತರವೇ 12 ಗಂಟೆಗಳು ಲೆಕ್ಕಕ್ಕೆ ಬರುವುದು. ಕೆಲಸಕ್ಕೆ ಕಾಯುವ ಸಮಯ ಗಂಟೆಗಟ್ಟಲೆ ಆದರೂ ಅದು 12 ಗಂಟೆಯೊಳಗೆ ಸೇರುವುದಿಲ್ಲ. ಹೀಗೆ ಪ್ರಯಾಣಿಕರ ಸುರಕ್ಷತೆ, ಭದ್ರತೆ, ಸರಾಗ ಮತ್ತು ಸಕಾಲ ಸೇವೆ ನೀಡುವ ಕಾರ್ಮಿಕರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ, ವಾಹನ ಚಾಲನೆಗೆ ಅವಶ್ಯವಿರುವ ಏಕಾಗ್ರತೆಯಿಂದ ಕೆಲಸದಲ್ಲಿ ತೊಡಗಿರುತ್ತಾರೆ. ಬಿಜೆಪಿ ಆಡಳಿತದ ಗುಜರಾತ್‌ನಲ್ಲಿ ಅಂಗಡಿ ಮುಂಗಟ್ಟುಗಳ ಕೆಲಸಗಾರರಿಗೆ, ಕೆಲವೊಂದು ಸಂದರ್ಭಗಳಲ್ಲಿ 12 ಗಂಟೆಗಳ ಕೆಲಸದ ಅವಧಿಯಿದೆ. ಐಟಿ ಕ್ಷೇತ್ರದಲ್ಲಿ ತುರ್ತು ಕೆಲಸಗಳು ಬಂದಲ್ಲಿ, ಪ್ರತಿ ದಿನ ಹತ್ತು ಗಂಟೆಗಳಿಗೂ ಹೆಚ್ಚು ಕಾಲ ಕೆಲಸ ಮಾಡಬೇಕಾಗುತ್ತದೆ. ಇಂತಹ ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದಾಗಿದೆ.

ಆಳುವ ಬಂಡವಾಳಶಾಹಿ ವರ್ಗ ಮತ್ತು ಅದರ ಅಡಿಯಾಳು ಸರ್ಕಾರಗಳು ಕೆಲಸದ ಅವಧಿಯನ್ನು ಹೆಚ್ಚಿಸುತ್ತಿರುವುದು ಏಕೆ? ಏಕೆಂದರೆ ನಿರ್ದಯ ಶೋಷಣೆಯ ಮೂಲಕ ಗರಿಷ್ಠ ಲಾಭಗಳಿಸುವ ಅವರ ನೀಗದ ಹಸಿವಿನಿಂದಾಗಿ. ಇದು ಇತರೆ ಎಲ್ಲಾ ಪರಿಗಣನೆಯನ್ನೂ ಮೀರಿದ್ದಾಗಿದೆ. ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಹೆಚ್ಚಾದಂತೆ, ಅದು ಫ್ಯಾಸೀವಾದದೆಡೆಗೆ ವಾಲುತ್ತದೆ, ಕಾರ್ಮಿಕರು ಕಷ್ಟಪಟ್ಟು ಗಳಿಸಿದ ಎಲ್ಲಾ ಪ್ರಜಾತಾಂತ್ರಿಕ ಹಕ್ಕುಗಳು, ಆಚರಣೆಗಳು ಒಂದೊಂದಾಗಿ ತುಳಿಯಲ್ಪಡುತ್ತವೆ. ಹೆಚ್ಚುವರಿ ಸಂಬಳ ನೀಡದೆ, ಇಲ್ಲವೇ ಸ್ವಲ್ಪ ಮಾತ್ರ ಹೆಚ್ಚು ವೇತನ ನೀಡಿ ಓವರ್ ಟೈಮ್ ಕೆಲಸ ಮಾಡಿಸಿ, ಅಥವಾ ಗುತ್ತಿಗೆಯಾಧಾರದ ಕೆಲಸಗಾರರನ್ನು ನೇಮಿಸಿ, ತಮ್ಮ ಉತ್ಪಾದನಾ ವೆಚ್ಚವನ್ನು ಕನಿಷ್ಠತಮ ಇಡಲು ಹವಣಿಸುತ್ತಾರೆ. ಇದರ ಪರಿಣಾಮವೆಂದರೆ ಬೆಟ್ಟದಂತಹ ನಿರುದ್ಯೋಗದ ಸಮಸ್ಯೆ.

ವೈಟ್ ಕಾಲರ್ ಐಟಿ ವೃತ್ತಿಪರರೂ ಸೇರಿದಂತೆ ಕಾರ್ಮಿಕ ವರ್ಗವು ಈ ಅಮಾನವೀಯ ಕೆಲಸದ ಪರಿಸ್ಥಿತಿಯನ್ನು ಪ್ರತಿಭಟಿಸುವ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ಎಲ್ಲಾ ಸ್ತರದವರನ್ನು ಒಗ್ಗೂಡಿಸುತ್ತಾ ಸಂಘಟಿತ, ಜಾಗೃತ, ನಿರಂತರ ಪ್ರಬಲ ಕಾರ್ಮಿಕ ಚಳುವಳಿಯನ್ನು ಪ್ರಾಮಾಣಿಕವಾಗಿ ಕಟ್ಟಬೇಕಿದೆ. ಇಲ್ಲದಿದ್ದಲ್ಲಿ ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಇನ್ನೂ ಹದಗೆಡಲಿದೆ.

## 5ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಎಸ್‌ಯುಸಿಐ(ಸಿ)

7ನೇ ಪುಟದಿಂದ ನಾವಿದನ್ನು ಸ್ಥೂಲವಾಗಿ ಒಪ್ಪಿಕೊಂಡರೂ, ಇತರರಿಗೆ ಈ ಬಗ್ಗೆ ಒಮ್ಮತ ಇಲ್ಲ.

ಸಮ್ಮೇಳನದಲ್ಲಿ 32 ದೇಶಗಳ 700 ಪ್ರತಿನಿಧಿಗಳು ಭಾಗವಹಿಸಿದ್ದು, ಕೆಲವು ಹಿರಿಯರನ್ನು ಹೊರಪಡಿಸಿದರೆ, ಬಹುತೇಕ ಯುವಜನರು MLPDಯ ಸ್ವಯಂಸೇವಕರಾಗಿದ್ದರು.

ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳಲ್ಲಿ ಬಹುತೇಕರು ನಮ್ಮ ಪಕ್ಷದ ಬಗ್ಗೆ ಒಮ್ಮತ ಸೂಚಿಸುತ್ತಾ ನಮ್ಮ ಕುರಿತು ಇನ್ನೂ ಹೆಚ್ಚಿಗೆ ತಿಳಿಯಲು ಬಯಸಿದರು. ಒಂದು ನೈಜ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು, ಲೆನಿನ್‌ವಾದಿ ತತ್ವಗಳನ್ನು ಆಧರಿಸಿದ ಕಾ. ಶಿವದಾಸ್ ಘೋಷ್‌ರವರ ಬೋಧನೆಗಳು ಮತ್ತು ನಿದರ್ಶನ ಮಾತ್ರವೇ ನಮಗೆ ದಾರಿದೀಪವಾಗಬಲ್ಲವು; ಇಲ್ಲದಿದ್ದರೆ, ಒಂದು ನೈಜ ಕಮ್ಯುನಿಸ್ಟ್ ಪಕ್ಷದ ರಚನೆ ಸಾಧ್ಯವಿಲ್ಲ, ಒಂದೊಮ್ಮೆ ಪಕ್ಷದ ರಚನೆಯಾದರೂ ಅದನ್ನು ಉಳಿಸಲಾಗದು ಎಂದು ಕಾ. ಚಟರ್ಜಿಯವರು ಸ್ಪಷ್ಟವಾಗಿ ಹೇಳಿದರು.

ಜರ್ಮನಿಯಲ್ಲಿ ಕಾ. ಚಟರ್ಜಿಯವರಿಗೆ ಸಹಚರ್ಯ ನೀಡಿದ ಕಾ. ಎಮಿಲ್‌ರವರು ಆಗ್ಸಬರ್ಗ್‌ನಲ್ಲಿ ಒಂದು ಚರ್ಚೆಯನ್ನು ಏರ್ಪಡಿಸಿದ್ದರು. ಅಲ್ಲಿಯೂ ಅವರು ಭಾರತದ ಬಗ್ಗೆ ಮಾತನಾಡಿದರು. ಅಲ್ಲಿ MLPD ಕಾಮ್ರೇಡರು ರಸ್ತೆಗಳಲ್ಲಿ ಜನರಿಂದ ನಿಧಿ ಸಂಗ್ರಹ ಮಾಡಿದ್ದನ್ನು, ಜನರ ಹಲವು ಸಮಸ್ಯೆಗಳ ಬಗ್ಗೆ ಜನರಿಂದ ಸಹಿ ಸಂಗ್ರಹ ಮಾಡಿದ್ದನ್ನು, ತನ್ಮೂಲಕ ಜನ ಸಂಪರ್ಕವನ್ನು ಹೆಚ್ಚಿಸಿಕೊಳ್ಳುವುದನ್ನು ಗಮನಿಸಿದರು.

ಕೊನೆಯದಾಗಿ, ಕಾ. ಅಮಿತಾವ ಚಟರ್ಜಿಯವರು, ಇಂದು ಕಾ. ಶಿವದಾಸ್ ಘೋಷ್ ಚಿಂತನೆಯಿಲ್ಲದೆ ಯಾವುದೇ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷ ಕಟ್ಟುವುದು ಅಸಾಧ್ಯ ಎಂಬುದನ್ನು ಜರ್ಮನಿಯ ಅನುಭವದಿಂದ ಮನಗಂಡೆ ಎಂದು ಹೇಳಿದ್ದಾರೆ.

## ಒಂದು ದೇಶ, ಒಂದು ಚುನಾವಣೆ:

# ಅಧಿಕಾರ ಕೇಂದ್ರೀಕರಣದ ಕುಟಿಲ ಕುತಂತ್ರ

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳು, ಎರಡಕ್ಕೂ ಏಕಕಾಲದಲ್ಲಿ ಚುನಾವಣೆ ನಡೆಸಲು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಯಿಂದ ಬಂದ 'ಒಂದು ದೇಶ, ಒಂದು ಚುನಾವಣೆ' (ಒನ್ ನೇಷನ್, ಒನ್ ಎಲೆಕ್ಷನ್) ಶಿಫಾರಸಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ. ಮುಂದಿನ ಲೋಕಸಭೆ ಚುನಾವಣೆ ಹೊತ್ತಿಗೆ ಈ ಶಿಫಾರಸ್ಸನ್ನು ಜಾರಿಗೆ ತರಲು ಮಸೂದೆ ಹೊರಡಿಸುವತ್ತ ಸರ್ಕಾರ ಆಲೋಚಿಸುತ್ತಿದೆ.

### ಸರ್ಕಾರದ ವಾದ ಮತ್ತು ಅದರ ಹಿಂದಿನ ವಿವಾದ

ಸರ್ಕಾರವು, ತಾನು ಈ ಕ್ರಮ ಕೈಗೊಳ್ಳಲು ಮೂರು ಮುಖ್ಯ ಕಾರಣಗಳಿವೆ ಎಂದು ವಾದಿಸುತ್ತಿದೆ. ಅವೆಂದರೆ, ವೆಚ್ಚ ಕಡಿತ, ನೀತಿಗಳನ್ನು ಜಾರಿಗೊಳಿಸಲು ಬರುವ ಅಡ್ಡಿಗಳನ್ನು ಕನಿಷ್ಠಮಟ್ಟಕ್ಕೆ ಇಳಿಸವುದು ಮತ್ತು ಭದ್ರತಾ ಪಡೆಗಳ ಉತ್ತಮ ನಿಯೋಜನೆ. ಆದರೆ, ವಾಸ್ತವಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ, ಇಲ್ಲಿ ಸಮಸ್ಯೆಗಳೇ ಎದ್ದು ಕಾಣುತ್ತವೆ. ಮೊದಲನೆಯದಾಗಿ, ಏಕಕಾಲದ ಚುನಾವಣೆಗಳಿಂದ ಖರ್ಚು ಕಡಿಮೆಯಾಗುತ್ತದೆ ಎಂಬುದಕ್ಕೆ ಯಾವುದೇ ದತ್ತಾಂಶ ಆಧಾರಿತ ಪುರಾವೆ ಲಭ್ಯವಿಲ್ಲ. ಅದೇ ರೀತಿ, ಚುನಾವಣಾ ನೀತಿಸಂಹಿತೆಯನ್ನು ಜಾರಿಗೆ ತರುವುದರಿಂದ ಆಡಳಿತಕ್ಕೆ ಧಕ್ಕೆಯಾಗುತ್ತದೆ ಎಂಬುದಕ್ಕೂ ಯಾವುದೇ ಆಧಾರವಿಲ್ಲ. ಚುನಾವಣಾ ನೀತಿಸಂಹಿತೆಯು ಸರ್ಕಾರಗಳ ಹೊಸ ಯೋಜನೆ ಅಥವಾ ಕ್ರಮಗಳ ಘೋಷಣೆಗೆ ತಡೆಯೊಡ್ಡುತ್ತದೆಯೇ ಹೊರತು, ನಡೆಯುತ್ತಿರುವ ಯೋಜನೆಗಳಿಗೆ ಅಡ್ಡಿ ಮಾಡುವುದಿಲ್ಲ. ಮತ್ತು ಭದ್ರತಾ ಪಡೆಗಳ ಕರ್ತವ್ಯವೇ ಭದ್ರತೆ ನೀಡುವುದಾಗಿರುವುದರಿಂದ ಇದರಲ್ಲಿ ಹೆಚ್ಚುವರಿ ಏನಿಲ್ಲ.

ಬಹುಪಕ್ಷೀಯ ಪ್ರಜಾತಂತ್ರವು ಉದಯಿಸಿದ್ದೇ, ಹಲವು ರೀತಿಯ ಹಿತಾಸಕ್ತಿಗಳನ್ನು ಹೊಂದಿರುವ ಹಲವಾರು ಬಂಡವಾಳಿಗರ ಸಮಾನ ಪೈಪೋಟಿಯ ಬಂಡವಾಳವಾದ(ಲೇಸೆಫೈರ್ ಕ್ಯಾಪಿಟಲಿಸಂ)ದಿಂದ ಎಂಬುದನ್ನು ಮರೆಯಬಾರದು. ಆದರೆ ಬಂಡವಾಳವಾದವು ಏಕಸ್ವಾಮ್ಯ ಹಂತವನ್ನು ತಲುಪಿ, ಕೆಲವೇ ಕೆಲವು ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ಹುಟ್ಟಿಕೊಂಡಾಗ, ಸಣ್ಣ ಬಂಡವಾಳಶಾಹಿಗಳನ್ನು ದೊಡ್ಡ ಬಂಡವಾಳಶಾಹಿ ತಿಮಿಂಗಲಗಳು ನುಂಗಿಹಾಕಿ, ಚಿಕ್ಕ ಬಂಡವಾಳಿಗರ ಹಿತಾಸಕ್ತಿಯನ್ನು ಕಾಪಾಡುತ್ತಿದ್ದ ಚಿಕ್ಕ ಪಕ್ಷಗಳು ದುರ್ಬಲವಾಗುತ್ತಾ ಸಾಗಿದವು. ಹಾಗಾಗಿ, ಬಹುಪಕ್ಷೀಯ ಪ್ರಜಾತಂತ್ರಕ್ಕೆ ಬದಲಾಗಿ ಒಂದು ಅಥವಾ ಎರಡು ಪಕ್ಷಗಳು ಮಾತ್ರ ಇರುವ ಪ್ರಜಾತಂತ್ರವನ್ನು ರೂಪಿಸುವುದೇ ಅವರ ಮಹದಾಸೆ. ಆರಂಭದಲ್ಲಿ ಬಹುಪಕ್ಷೀಯ ಪ್ರಜಾತಂತ್ರಕ್ಕೆ ಬದಲಾಗಿ ದ್ವಿಪಕ್ಷೀಯ ಪ್ರಜಾತಂತ್ರವನ್ನು ಸ್ಥಾಪಿಸಲು ಅವರು ಪ್ರಯತ್ನಿಸಿದರು. ಇದರಿಂದ, ಅಮೇರಿಕಾ, ಇಂಗ್ಲೆಂಡ್ ಹಾಗೂ ಇತರ ಕೆಲವು ದೇಶಗಳಂತೆಯೇ, ಬಂಡವಾಳಿಗರ ಎರಡು ಸೇವಕ ಪಕ್ಷಗಳ ನಡುವೆ ಯಾವುದಾದರೂ ಒಂದನ್ನು ಚುನಾಯಿಸುವುದರ ಹೊರತಾಗಿ ಜನರಿಗೆ ಇನ್ಯಾವುದೇ ಆಯ್ಕೆ ಇರದಂತೆ ಮಾಡಲು ಅವರು ಬಯಸಿದ್ದರು. ಇದರಿಂದ ಬಂಡವಾಳಿಗರ ಆಳ್ವಿಕೆಗೆ ಯಾವುದೇ ತೊಡಕು ಉಂಟಾಗುತ್ತಿರಲಿಲ್ಲ. ವಾಸ್ತವವಾಗಿ, ಅಂತಹ ದ್ವಿಪಕ್ಷೀಯ ಚುನಾವಣೆಗಳು ನಮ್ಮ ದೇಶದಲ್ಲೂ ನಡೆಯುತ್ತಿವೆ. ಮಾಧ್ಯಮ ಹಾಗೂ ಅಧಿಕಾರಶಾಹಿಯ ನೆರವಿನೊಂದಿಗೆ ಎರಡು ಪಕ್ಷಗಳು ಅಥವಾ ಎರಡು ಮೈತ್ರಿಕೂಟಗಳನ್ನು ಕುತಂತ್ರದಿಂದ ಮುನ್ನೆಲೆಗೆ ತಂದು ಉಳಿದ ಪಕ್ಷಗಳನ್ನು ಮರೆಗೆ ಸರಿಸುವುದೇ ಇದರ ಉದ್ದೇಶ. ಹೀಗೆ, ಚುನಾವಣಾ ನೀತಿ ಸಂಹಿತೆ ಹಾಗೂ ಇತರ ಚುನಾವಣಾ ನೀತಿ ನಿಬಂಧನೆಗಳಲ್ಲಿ ಮಾಡಲ್ಪಟ್ಟ ತಿದ್ದುಪಡಿಗಳಿಂದಲೂ ಸಣ್ಣ ಪುಟ್ಟ ಪಕ್ಷಗಳ ಸಂಸದರು ಮತ್ತು ಶಾಸಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ನೀತಿ ನಿಬಂಧನೆಗಳ ಮುಖ್ಯ ಉದ್ದೇಶವೆಂದರೆ, ಬಡವರು ಹಾಗೂ ನಿರ್ಗತಿಕರಿಗಾಗಿ ಶ್ರಮಿಸುವ ಕ್ರಾಂತಿಕಾರಿ ಪಕ್ಷಗಳಿಗೆ ತೊಡಕು ಉಂಟುಮಾಡುವುದು. ಚುನಾವಣೆ ಡೆಪಾಸಿಟ್ ಮೊತ್ತವನ್ನು ಹೆಚ್ಚಿಸುವುದು, ಚುನಾವಣೆ ಸಮಯದಲ್ಲಿ ಮಾಹಿತಿ ಒದಗಿಸಲು ಸಾಕಷ್ಟು ಷರತ್ತುಗಳನ್ನು ಹೇರುವುದು, ಇಂತಹ ಕ್ರಮಗಳಿಂದ ನೈಜ ಕ್ರಾಂತಿಕಾರಿ ಪಕ್ಷವು ಯಾವುದೇ ಚುನಾವಣೆಯನ್ನು ಸ್ಪರ್ಧಿಸುವುದನ್ನೇ ತಪ್ಪಿಸಿದಂತೆ ಆಗುತ್ತದೆ. ಇದರಿಂದ ಎರಡೇ ಪಕ್ಷಗಳ ನಡುವೆ ಒಂದನ್ನು ಆರಿಸುವ ಆಯ್ಕೆಯು ಇನ್ನಷ್ಟು ಗಟ್ಟಿಯಾಗುತ್ತದೆ ಹಾಗೂ ವಿಭಿನ್ನ ಪಕ್ಷಗಳ ವಿಭಿನ್ನ ದೃಷ್ಟಿಕೋನಗಳು ಜನರ ಕಣ್ಣಿಗೆ ಕಾಣದಂತೆ ಮಸುಕಾಗಿಸಿದಂತಾಗುತ್ತದೆ. ಇಂತಹ ಮಾಧ್ಯಮ–ಪ್ರೇರಿತ, ಆಡಳಿತ–ಬೆಂಬಲಿತ ಚುನಾವಣೆಯಿಂದ ಬಂಡವಾಳಿಗರು ನಿರೀಕ್ಷಿಸುವ ಆಡಳಿತದ ಮಾದರಿ ಬರುತ್ತದೆಯೇ ಹೊರತು, ನೈಜಸತ್ವದ ಪ್ರಜಾತಂತ್ರ ಅಸ್ತಿತ್ವಕ್ಕೆ ಬರುವುದೇ ಇಲ್ಲ.

ಆಡಳಿತ ವರ್ಗವು ದ್ವಿಪಕ್ಷೀಯ ಧ್ರುವೀಕರಣ ಮತ್ತು ಅಧಿಕಾರ ಕೇಂದ್ರೀಕರಣಕ್ಕೆ ಬಳಸಿರುವ ಇನ್ನೊಂದು ವಾದವೆಂದರೆ, ರಾಷ್ಟ್ರಪತಿ ಮಾದರಿ ಸರ್ಕಾರದ ರಚನೆ(ಅಮೆರಿಕದ ಮಾದರಿ). 1960 ಮತ್ತು 1970ರ ದಶಕದಲ್ಲಿ, ಈ ಮಾದರಿಯನ್ನು ಅನುಸರಿಸಿದರೆ ಚುನಾವಣಾ ವ್ಯವಸ್ಥೆಯ ಎಲ್ಲ ಕೊಳಕು ಮತ್ತು ಕಳಂಕಗಳು ಕಾಣೆಯಾಗುತ್ತವೆ ಎಂಬ ಭ್ರಮೆಯನ್ನು ಸೃಷ್ಟಿಸಲಾಯಿತು. ನಮ್ಮ ಪಕ್ಷ, ಎಸ್‌ಯುಸಿಐ(ಸಿ) ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಹಾನ್ ಮಾರ್ಕ್ಸ್‌ವಾದಿ ಚಿಂತಕರೂ ಆದ ಶಿವದಾಸ್ ಘೋಷ್ ಬಹಳ ಹಿಂದೆಯೇ, ಮರಣಾಸನ್ನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ – ಅದು ಅಭಿವೃದ್ಧಿ ಹೊಂದಿದ ದೇಶವಾಗಿರಲಿ, ಅಥವಾ ಅಭಿವೃದ್ಧಿಶೀಲ ದೇಶವಾಗಿರಲಿ–ಎಲ್ಲ ಬದಲಾವಣೆಗಳೂ ಫ್ಯಾಸೀವಾದವನ್ನು ಜಾರಿಗೆ ತರುವ ಬಂಡವಾಳಿಗರ ತಂತ್ರ ಆಗಿರುತ್ತವಷ್ಟೇ ಎಂಬುದನ್ನು ತೋರಿಸಿಕೊಟ್ಟಿದ್ದರು.

ಭಾರತದಲ್ಲಿ ಪ್ರಾದೇಶಿಕ ಬಂಡವಾಳಿಗರು ಅಸ್ತಿತ್ವದಲ್ಲಿ ಇರುವುದರಿಂದ ಫ್ಯಾಸೀವಾದವನ್ನು ದಿಢೀರನೆ ತರಲು ಸಾಧ್ಯವಾಗಲಿಲ್ಲವಾದರೂ, 'ಒಂದು ದೇಶ, ಒಂದು ಚುನಾವಣೆ' ಎಂಬ ತಂತ್ರದ ಮೂಲಕ ಆಳ್ವಿಕ ಬಂಡವಾಳಿಗರು ಅಧಿಕಾರದ ಕೇಂದ್ರೀಕರಣಕ್ಕೆ ಈಗ ಹೊಸ ತಂತ್ರ ಹೆಣೆದ್ದಿದ್ದಾರೆ ಅಷ್ಟೇ. ಇದರಿಂದ, ಸಣ್ಣಪುಟ್ಟ ಪಕ್ಷಗಳು ಅಳಿವಿನಂಚಿಗೆ ಹೋಗುತ್ತವೆ ಹಾಗೂ ಪ್ರಾದೇಶಿಕ ಬಂಡವಾಳಿಗರಿಗೆ ಬೆಂಬಲ ನೀಡುವ ಪ್ರಾದೇಶಿಕ ಪಕ್ಷಗಳು ಹಿಂದೆ ಸರಿಯುತ್ತವೆ. ಆಗ ಚುನಾವಣೆಯಲ್ಲಿ ಎರಡೇ ದೊಡ್ಡ ಬೂರ್ಜ್ವಾ ಪಕ್ಷಗಳು ಅಥವಾ ಅವರ ಮೈತ್ರಿಕೂಟಗಳು ಕಾಣ ಸಿಗುತ್ತವೆ. ಇದು ಇಂದಿನ ಭಾರತದಲ್ಲಿ, ಬಿಜೆಪಿ ಮತ್ತು ಅದನ್ನೇ ಹೋಲುವ ಕಾಂಗ್ರೆಸ್ ಹಾಗೂ ಅವರ ಮಿತ್ರ ಪಕ್ಷಗಳ ಕೂಟಗಳು ಇರುವಂತೆ.

### ಪ್ರಾದೇಶಿಕ ಪಕ್ಷಗಳ ಪಾತ್ರ

ಪ್ರಾದೇಶಿಕ ಪಕ್ಷಗಳು ಅಥವಾ ಪ್ರಾದೇಶಿಕ ಬಂಡವಾಳಿಗರು ಇರುವುದೇ ಭಾರತದ ಆರ್ಥಿಕ–ರಾಜಕೀಯ ಪರಿಸ್ಥಿತಿಯ ವೈಶಿಷ್ಟ್ಯ. ಈ ಪ್ರಾದೇಶಿಕ ಬಂಡವಾಳಿಗರಿಗೂ, ಏಕಸ್ವಾಮ್ಯಾಧಿಪತಿಗಳು ಹಾಗೂ ಬೃಹತ್ ಬಹುರಾಷ್ಟ್ರೀಯ ಬಂಡವಾಳಿಗರಿಗೂ ಆಗಿ ಬರುವುದಿಲ್ಲ. ಹಾಗಾಗಿ, ಭಾರತದ ಪರಿಸ್ಥಿತಿಯಲ್ಲಿ ಈ ಪ್ರಾದೇಶಿಕ ಬಂಡವಾಳಿಗರು ಪೋಷಿಸುವ ಪ್ರಾದೇಶಿಕ ಪಕ್ಷಗಳು ಮಹತ್ವದ ಪಾತ್ರವನ್ನು ಹೊಂದಿವೆ. ಈಗ ಹಲವಾರು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಸರ್ಕಾರಗಳಿವೆ. ಇದರಿಂದ ಬಹುಪಕ್ಷೀಯ ವ್ಯವಸ್ಥೆಯನ್ನು ರದ್ದುಗೊಳಿಸಿ, ಫ್ಯಾಸೀವಾದವನ್ನು ನೇರವಾಗಿ ಹೇರುವುದು ಕಷ್ಟವಾಗುತ್ತದೆ. ಆದರೆ, ಒಳಜಗಳ, ಗುಂಪುಗಳ ನಡುವೆ ವೈಮನಸ್ಸು, ನಾಯಕತ್ವದ ವೈಫಲ್ಯ ಇತ್ಯಾದಿಗಳಿಂದಾಗಿ ಕಾಂಗ್ರೆಸ್ ಪಕ್ಷವು ದುರ್ಬಲವಾಗಿರುವುದರಿಂದ, ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಮಟ್ಟಕ್ಕೆ ಏರಲು ಪ್ರಯತ್ನಿಸುತ್ತಿವೆ ಮಾತ್ರವಲ್ಲ, ವಿವಿಧ ಪ್ರಾದೇಶಿಕ ಪಕ್ಷಗಳು ಸೇರಿ, ಬಿಜೆಪಿ ಇಲ್ಲವೇ ಕಾಂಗ್ರೆಸ್ ಜೊತೆ ಮೈತ್ರಿಕೂಟವನ್ನು ರಚಿಸಿಕೊಂಡು ರಾಷ್ಟ್ರ ರಾಜಕಾರಣದಲ್ಲಿ ಪ್ರಭಾವ ಬೀರಲು ಯತ್ನಿಸುತ್ತಿವೆ. ಇದಕ್ಕೆ ಆಳ್ವಿಕ ಬಂಡವಾಳಿಗರ ಸಹಮತವೂ ಇದೆ. ಏಕೆಂದರೆ, ದ್ವಿಪಕ್ಷೀಯ ಪ್ರಜಾತಂತ್ರ ಪ್ರಬಲವಾಗಲು ಇದು ಸಹಕಾರಿಯಾಗಿದೆ.

### ಐದು ಸಾಂವಿಧಾನಿಕ ತಿದ್ದುಪಡಿಗಳು ಬೇಕಾಗುತ್ತವೆ

'ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಒಟ್ಟಿಗೇ ನಡೆಯುತ್ತಿದ್ದವು. ಈ ಸಂಪ್ರದಾಯವನ್ನು ಯಾಕೆ ಮುಂದುವರೆಸಬಾರದು' ಎಂಬ ವಾದವನ್ನು 'ಒಂದು ದೇಶ ಒಂದು ಚುನಾವಣೆ'ಯನ್ನು ಬೆಂಬಲಿಸುವವರು ಈಗ ಮುಂದಿಡುತ್ತಿದ್ದಾರೆ. ಭಾರತದ ಈಗಿನ ವಾಸ್ತವಿಕ ಪರಿಸ್ಥಿತಿಯನ್ನು ಸರಿಯಾಗಿ ಅವಲೋಕಿಸದೇ ಆಲಿಸಿದರೆ, ಈ ವಾದವು ಸರಿ ಎನಿಸುತ್ತದೆ. ಆದರೆ ವಾಸ್ತವವೇನು? ಪಕ್ಷಾಂತರ, ಬೆಂಬಲ ಹಿಂಪಡೆತ, ಸರ್ಕಾರಗಳ ವಜಾ ಇತ್ಯಾದಿ ಕಾರಣಗಳಿಂದ ಆಡಳಿತಾರೂಢ ಸರ್ಕಾರವು ಮುಗ್ಗರಿಸಿದಾಗ, ಕೇಂದ್ರ ಮತ್ತು ರಾಜ್ಯದಲ್ಲಿ ಮಧ್ಯಂತರ ಚುನಾವಣೆಗಳು ನಡೆಯುತ್ತಾ ಬಂದಿವೆ. ಹಾಗಾಗಿ, ವಿವಿಧ ಸರ್ಕಾರಗಳ ಆಡಳಿತಾವಧಿ ಬೇರೆ ಬೇರೆಯಾಗುತ್ತಾ ಸಾಗಿದೆ. ಈಗ 'ಒಂದು ದೇಶ ಒಂದು ಚುನಾವಣೆ'ಯನ್ನು ಜಾರಿಗೆ ತಂದರೆ, ಹಲವಾರು ರಾಜ್ಯ ಸರ್ಕಾರಗಳ ಆಡಳಿತಾವಧಿ ಮಧ್ಯದಲ್ಲಿಯೇ ಕಡಿತಗೊಂಡು, ಹಲವಾರು ಅನ್ಯಾಯಗಳಿಗೆ ಮತ್ತು ಸಂವಿಧಾನದ ಉಲ್ಲಂಘನೆಗೆ ಕಾರಣವಾಗಬಹುದು.

ಸಂವಿಧಾನ ರಚನೆಯ ಸಂದರ್ಭದಲ್ಲಿ, 1949ರಲ್ಲಿ ಭಾರತದ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಸದಸ್ಯರಾಗಿದ್ದ ಶಿಬ್ಬನ್ ಲಾಲಾ ಸಕ್ಸೇನಾ, "ನಮ್ಮ ಸಂವಿಧಾನದಲ್ಲಿ, ಎಲ್ಲಾ ಚುನಾವಣೆಗಳು ಏಕಕಾಲದಲ್ಲಿ ನಡೆಯುವುದಿಲ್ಲ. ವಿವಿಧ ಶಾಸಕಾಂಗಗಳಲ್ಲಿ ನಡೆಯುವ ಅವಿಶ್ವಾಸ ನಿರ್ಣಯ ಹಾಗೂ ಶಾಸಕಾಂಗದ ವಿಸರ್ಜನೆಗೆ ತಕ್ಕಂತೆ ವಿವಿಧ ಅವಧಿಗಳಲ್ಲಿ ನಡೆಯುತ್ತವೆ. ನಮ್ಮ ಸಂವಿಧಾನವು ಅಮೆರಿಕಾ ಸಂಯುಕ್ತ ಸಂಸ್ಥಾನದ ಹಾಗೆ ನಾಲ್ಕು ವರ್ಷಗಳ ನಿಗದಿತ ಆಡಳಿತವನ್ನು ನೀಡುವುದಿಲ್ಲ. ಒಂದಲ್ಲಾ ಒಂದು ರಾಜ್ಯದಲ್ಲಿ ಚುನಾವಣೆಗಳು ಯಾವಾಗಲೂ ನಡೆಯುತ್ತಿರುತ್ತವೆ. ಅವಿಶ್ವಾಸ ಮತದೊಂದಿಗೆ ಶಾಸಕಾಂಗವನ್ನು ವಿಸರ್ಜಿಸಲು ನಮ್ಮ ಸಂವಿಧಾನವು ಅಧಿಕಾರ ನೀಡುತ್ತದೆ" ಎಂದು ವಿವರಿಸಿದ್ದರು. "ಹಾಗಾಗಿ, ರಾಜ್ಯಗಳು ಮತ್ತು ಕೇಂದ್ರದ ವಿವಿಧ ಶಾಸಕಾಂಗಗಳ ಚುನಾವಣೆಗಳು ಏಕಕಾಲದಲ್ಲಿ ನಡೆಯಲು ಸಾಧ್ಯವಿಲ್ಲ" ಎಂದೂ ಅವರು ಹೇಳಿದ್ದರು. ಸಂವಿಧಾನ ಸಭೆಯ ಇನ್ನೊಬ್ಬ ಸದಸ್ಯರಾಗಿದ್ದ ಆರ್.ಕೆ. ಸಿಧ್ವಾ, "ಈಗ ನಾವು ಎಲ್ಲಾ ಪ್ರದೇಶಗಳಿಂದ 4000 ಸದಸ್ಯರನ್ನು ಹೊಂದಬಹುದು ಹಾಗೂ ಅಲ್ಲಿ ಉಪ ಚುನಾವಣೆಗಳೂ ಇರುತ್ತವೆ. ಕೆಲವರು ಸಾಯಬಹುದು, ಕೆಲವರು ಮೇಲ್ದರ್ಜೆಗೆ ಏರಬಹುದು, ಕೆಲವರು ಎಲ್ಲಿಗಾದರೂ ಹೋಗಬಹುದು. ಇದೇ ಸಂವಿಧಾನ ಸಭೆಯಲ್ಲೂ ಸಹ, ಅಲ್ಪಕಾಲದಲ್ಲಿ ಹಲವಾರು ಉಪಚುನಾವಣೆಗಳು ನಡೆದಿವೆ" ಎಂದು ಹೇಳುತ್ತಾರೆ. ಹಲವಾರು ಚುನಾವಣೆಗಳಿಂದ ಹೆಚ್ಚು ಹಣ ಖರ್ಚು ಹೆಚ್ಚಾಗುತ್ತದೆ ಎನ್ನುವವರ ಮಾತಿಗೆ ಸಿಧ್ವಾ ಕಿವಿಗೊಡಲಿಲ್ಲ. ಆದರೆ ಅವರು ನಿಷ್ಪಕ್ಷಪಾತವಾದ ನ್ಯಾಯೋಚಿತತೆ ಮತ್ತು ಸಮಗ್ರತೆಯಿಂದ ಕೂಡಿದ ಚುನಾವಣೆ ನಡೆಸುವ ಚುನಾವಣಾ ಆಯೋಗವನ್ನು ಬಯಸಿದ್ದರು. ಸಂವಿಧಾನ ಸಭೆಗೆ ಎಲ್ಲಾ ಚುನಾವಣೆಗಳನ್ನು ಒಟ್ಟಿಗೇ ನಡೆಸುವ ಉದ್ದೇಶವೇ ಇರಲಿಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಹಾಗಾಗಿ, ಏಕಕಾಲಕ್ಕೆ ಚುನಾವಣೆಗಳನ್ನು ನಡೆಸಲು ಕೇಂದ್ರ ಎನ್‌ಡಿಎ ಸರ್ಕಾರವು ಸಂವಿಧಾನದ ಐದು ಅನುಚ್ಛೇಧಗಳಿಗೆ ತಿದ್ದುಪಡಿ ತರಬೇಕಾಗುತ್ತದೆ.

### ಭಾರತದ ಒಕ್ಕೂಟ ವ್ಯವಸ್ಥೆಗೆ ಸಂಚಕಾರ

ಒಂದೇ ಚುನಾವಣೆಯನ್ನು ಎಲ್ಲರ ಮೇಲೆ ಹೇರುವ ಮೂಲಕ, "ಒಂದು ದೇಶ, ಒಂದು ಚುನಾವಣೆ" ತಂತ್ರವು ಭಾರತದ ಒಕ್ಕೂಟ ವ್ಯವಸ್ಥೆಗೆ ಅಪಾಯ ಒಡ್ಡಲಿದೆ. ವಿಶಿಷ್ಟ ರಾಜಕೀಯ ಪರಿಸ್ಥಿತಿಯನ್ನು ಹೊಂದಿರುವ ರಾಜ್ಯಗಳನ್ನು ಇದು ಗಣನೆಗೆ ತೆಗೆದುಕೊಳ್ಳುವುದಿಲ್ಲ. ರಾಜಕೀಯ ಪ್ರಾತಿನಿಧ್ಯವನ್ನು ಹಗುರವಾಗಿಸುತ್ತದೆ ಹಾಗೂ ಕಾರ್ಪೊರೇಟ್ ಹಿತಾಸಕ್ತಿಗಳು ಮತ್ತು ಕೇಂದ್ರೀಯ ನಾಯಕತ್ವಕ್ಕೆ ಬೆಂಬಲ ನೀಡುತ್ತಾ ಒಂದು ಏಕಾಧಿಪತ್ಯದ, ಸರ್ವಾಧಿಕಾರದ ರಾಷ್ಟ್ರವನ್ನು ಸ್ಥಾಪಿಸಿ, ಪ್ರಜಾತಂತ್ರದ ಬದಲು ಸಂಪೂರ್ಣ ಕೇಂದ್ರೀಕೃತ ನಿಯಂತ್ರಣಕ್ಕೆ ಒತ್ತು ನೀಡುವ ದೇಶವನ್ನಾಗಿ ಭಾರತವನ್ನು ಪರಿವರ್ತಿಸುತ್ತದೆ.

ಅದಲ್ಲದೇ, ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಸಮಸ್ಯೆಗಳಿಗೆ ಮಹತ್ವ ಸಿಗುತ್ತದೆ. ಹಾಗೆಯೇ, ವಿಧಾನಸಭೆ ಚುನಾವಣೆಗಳಲ್ಲಿ ಪ್ರಾದೇಶಿಕ ಸಮಸ್ಯೆಗಳಿಗೆ ಒತ್ತು ದೊರಕುತ್ತದೆ. ಏಕಕಾಲದ ಚುನಾವಣೆಯಿಂದ ಸ್ಥಳೀಯ ಸಮಸ್ಯೆಗಳ ಕಡೆಗಣನೆ ಮಾತ್ರವಲ್ಲದೇ, ಕೇಂದ್ರಸರ್ಕಾರದ ಮೇಲಿನ ಅವಲಂಬನೆ ಹೆಚ್ಚಾಗುವ ಸಾಧ್ಯತೆಯೂ ಇದೆ. ಜೊತೆಗೆ, ಕೇಂದ್ರದ ಕೆಲವು ನೀತಿಗಳು ರಾಜ್ಯಗಳ ಹಿತಾಸಕ್ತಿಗೆ ಪೂರಕವಾಗಿ ಇಲ್ಲದೆಯೂ ಇರಬಹುದು. ಅಲ್ಲದೆ, ಇದರಿಂದ ಪ್ರಾದೇಶಿಕ ಪಕ್ಷಗಳ ಕಡೆಗಣನೆಯೂ ನಡೆದು, ಫ್ಯಾಸೀವಾದದ ಹೇರಿಕೆಗೆ ಇಷ್ಟು ದಿನ ತಡೆಯೊಡ್ಡಿದ್ದ ಪ್ರಾದೇಶಿಕ ಪಕ್ಷಗಳು ದುರ್ಬಲವಾಗಬಹುದು. ಸ್ವಾತಂತ್ರ್ಯ ನಂತರದ ಭಾರತವನ್ನು ರೂಪಿಸಿದ್ದ ಬಹುತ್ವ ಮತ್ತು ಒಕ್ಕೂಟವಾದಿ ವಿಚಾರಗಳನ್ನು ರಕ್ಷಿಸಲು ಇದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ.

### ಇನ್ನೊಂದು ಒಳಗುಟ್ಟು

ಬಹಳ ಕಾಲದಿಂದ ಬಿಜೆಪಿಯು, ಆಳ್ವಿಕ ಏಕಸ್ವಾಮ್ಯಾಧಿಪತಿಗಳ ಮಾತಿಗೆ ಕಿವಿಗೊಟ್ಟು, 'ಏಕತ್ವ'ದ ಘೋಷಣೆ ಎತ್ತುತ್ತಾ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳನ್ನು ಅವರಿಗಾಗಿ ಸುಗಮಗೊಳಿಸಲು ಪ್ರಯತ್ನಿಸುತ್ತಿದೆ. ಎರಡನೆಯದಾಗಿ, 'ಒಂದು ದೇಶ ಒಂದು ತೆರಿಗೆ' ಎಂಬ ಹೆಸರಿನಲ್ಲಿ ಜಿಎಸ್‌ಟಿಯನ್ನು ಜಾರಿಗೆ ತಂದಾಗಿನಿಂದ, ತೆರಿಗೆಗಳು ಸರಳವಾಗುವ ಬದಲು ಆರ್ಥಿಕ ಕೇಂದ್ರೀಕರಣ ಅಸ್ತಿತ್ವಕ್ಕೆ ಬಂದು, ರಾಜ್ಯಗಳು ತೆರಿಗೆಯ ತಮ್ಮ ಪಾಲನ್ನು ಪಡೆಯಲು ಕೇಂದ್ರ ಸರ್ಕಾರವನ್ನು ಅಂಗಲಾಚುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಭಾರತ ಒಕ್ಕೂಟದ ಸಮತೋಲನಕ್ಕೆ ಹಾನಿಯಾಗಿದೆ ಮತ್ತು ರಾಜ್ಯಗಳ ಆರ್ಥಿಕ ಸ್ವಾಯತ್ತತೆಗೆ ಹಾನಿಯಾಗಿದೆ.

### ಕೊನೆಯ ನುಡಿ

'ಒಂದು ದೇಶ ಒಂದು ಚುನಾವಣೆ' ಎಂಬುದು ಒಂದು ತಂತ್ರವಷ್ಟೇ. ಇದು ಕೇವಲ ಆಡಳಿತಾತ್ಮಕ ಸುಧಾರಣೆಯಲ್ಲ. ಅಧಿಕಾರವನ್ನು ಕೇಂದ್ರೀಕರಿಸಿ, ಭಾರತದ ಪ್ರಜಾತಂತ್ರವನ್ನು ಬದಲಾಯಿಸುವ ತಂತ್ರ. ಪ್ರಾದೇಶಿಕ ಧ್ವನಿಗಳನ್ನು ಹತ್ತಿಕ್ಕಿ, ಕೇಂದ್ರ ಸರ್ಕಾರದ ಮೇಲಿನ ಅವಲಂಬನೆಯನ್ನು ಹೆಚ್ಚಿಸಿ, ಈ ತಂತ್ರವು ಭಾರತದ ಪ್ರಜಾತಾಂತ್ರಿಕ ಮತ್ತು ಒಕ್ಕೂಟ ವ್ಯವಸ್ಥೆಯುಳ್ಳ ರಾಷ್ಟ್ರದ ಚೌಕಟ್ಟನ್ನೇ ಬದಲಾಯಿಸಲಿದೆ.

ಈ ವಂಚಕ ತಂತ್ರವು ನಮ್ಮ ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಅಳಿದುಳಿದಿರುವ ಪ್ರಜಾತಾಂತ್ರಿಕ ಆಚರಣೆಗಳನ್ನೂ ಹಾಳುಗೆಡವಿ, ಜನರು ತಮ್ಮ ನ್ಯಾಯಯುತ ಅಭಿಪ್ರಾಯವನ್ನು ಚುನಾವಣೆಗಳಲ್ಲಿ ವ್ಯಕ್ತಪಡಿಸುವ ಅವಕಾಶವನ್ನೂ ಅವರಿಂದ ಕಸಿದುಕೊಳ್ಳುವ ಕೇಂದ್ರೀಕೃತ ಚುನಾವಣಾ ವ್ಯವಸ್ಥೆಯನ್ನು ಅವರ ಮೇಲೆ ಹೇರುತ್ತದೆ. ಈ ಸತ್ಯವನ್ನು ಪ್ರಜಾತಾಂತ್ರಿಕ ಮನಸ್ಸುಳ್ಳ ಎಲ್ಲಾ ಜನರೂ ಅರ್ಥ ಮಾಡಿಕೊಂಡು, "ಒಂದು ದೇಶ ಒಂದು ಚುನಾವಣೆ" ಎಂಬ ಪ್ರಸ್ತಾವನೆಯನ್ನು ಒಕ್ಕೊರಲಿನಿಂದ ವಿರೋಧಿಸಬೇಕು.

## ಜಮ್ಮು – ಕಾಶ್ಮೀರ ಚುನಾವಣಾ ಫಲಿತಾಂಶ:

# ಶೋಷಿತ ಜನತೆಯಲ್ಲಿ ಮೂಡಿಸಿಲ್ಲ ಭರವಸೆಯ ಆಶಾಕಿರಣ!

ಇತ್ತೀಚೆಗೆ ನಡೆದ ಜಮ್ಮು ಮತ್ತು ಕಾಶ್ಮೀರ ಚುನಾವಣೆಗಳು ಕೆಲವೊಂದು ವಾಸ್ತವಿಕ ಸತ್ಯಗಳನ್ನು ತೆರೆದಿಟ್ಟಿವೆ. ಬಿಜೆಪಿ ಸರ್ಕಾರವು 2019ರ ಆಗಸ್ಟ್ 5ರಂದು ಏಕಪಕ್ಷೀಯವಾಗಿ ಮತ್ತು ನಿರಂಕುಶವಾಗಿ ವಿಧಿ 370ನ್ನು ಹಿಂಪಡೆಯಿತು, ಅದಾಗಿ ಈಗ 5 ವರ್ಷಗಳು ಕಳೆದಿವೆ. ಎಲ್ಲಾ ಪ್ರಜಾತಾಂತ್ರಿಕ ರೂಢಿ–ಆಚರಣೆಗಳನ್ನು ಹತ್ತಿಕ್ಕಿ ಇದನ್ನು ಮಾಡಲಾಗಿದೆ. ಹಾಗೂ 1947ರ ಅಕ್ಟೋಬರ್‌ನಲ್ಲಿ, ಭಾರತೀಯ ಗಣರಾಜ್ಯದಲ್ಲಿ ಅಂದು ಸ್ವತಂತ್ರ ರಾಜ್ಯವಾಗಿದ್ದ ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆಯ ಒಪ್ಪಂದದ ಅನುಚ್ಛೇದವನ್ನು ಸಂವಿಧಾನದಲ್ಲಿ ಸೇರಿಸಿದ ಐತಿಹಾಸಿಕ ಸಂದರ್ಭವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಅಷ್ಟು ಮಾತ್ರವಲ್ಲ, ಬಿಜೆಪಿ ಸರ್ಕಾರವು ಈ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಪುನರ್ ರಚಿಸಿತು. ಇದನ್ನು ರಾಜ್ಯದ ವಿಧಾನಸಭೆಯ ಅಭಿಪ್ರಾಯ ಅಥವಾ ಒಪ್ಪಿಗೆಯನ್ನು ಹಾಗೂ ಜಮ್ಮು ಮತ್ತು ಕಾಶ್ಮೀರ ಜನತೆಯ ಒಪ್ಪಿಗೆಯನ್ನು ಪಡೆಯದೆಯೇ ಮಾಡಿತು. ಕೇಂದ್ರ ಸರ್ಕಾರವು, ಈ ಕ್ರಮವು ಈ ರಾಜ್ಯಕ್ಕೆ ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ ಹಾಗೂ ಭಯೋತ್ಪಾದಕ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ ಎಂದು ಹೇಳಿಕೊಂಡರೂ ವಾಸ್ತವಿಕ ಅಂಶಗಳು ಬೇರೆಯದನ್ನೇ ಹೇಳುತ್ತವೆ.

ಈ ರಮಣೀಯ ರಾಜ್ಯದ ಜನತೆಯ ಅಶೋತ್ತರಗಳು ಮತ್ತಷ್ಟು ತಳ ಕಂಡಿವೆ. ಸಾವಿರಾರು ರಾಜಕೀಯ ಕಾರ್ಯಕರ್ತರನ್ನು ಸೆರೆಹಿಡಿಯಲಾಗಿದೆ ಅಥವಾ ಗೃಹಬಂಧನದಲ್ಲಿರಿಸಲಾಗಿದೆ. ಕರಾಳ ಆಫ್ಸಾ ಕಾಯಿದೆಯಿಂದ ಪುಷ್ಟಿ ಪಡೆದ ಸೈನ್ಯ ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಗಳ ಕಾರ್ಯಾಚರಣೆಯಿಂದ ಶಾಲಾ–ಕಾಲೇಜುಗಳು ಮತ್ತು ಎಲ್ಲಾ ಸಾರ್ವಜನಿಕ ಸ್ಥಳಗಳು ರಣರಂಗಗಳಾಗಿವೆ. ಇದರ ಜೊತೆಗೆ ಕೇಂದ್ರ ಸರ್ಕಾರ ಅಲ್ಲಿಗೆ ನೇಮಕ ಮಾಡಿರುವ ರಾಜ್ಯಪಾಲರ ಧೋರಣೆಯೂ ಸೇರಿಕೊಂಡಿದೆ. ಈ ರಾಜ್ಯವು ತನ್ನ ಪಾಳೇಗಾರಿಕೆ ಎಂಬಂತಹ ಧೋರಣೆಯ ರಾಜ್ಯಪಾಲರಲ್ಲಿದೆ ಎಂಬ ಆರೋಪವು ಅವರ ಮೇಲಿದೆ. ಜನರ ಧ್ವನಿಯನ್ನು ಹತ್ತಿಕ್ಕಲಾಗಿದೆ, ಜನರನ್ನು ಚುಚ್ಚು ಮಾತುಗಳಿಂದ ಮೂದಲಿಸಲಾಗಿದೆ, ಚಿತ್ರಹಿಂಸೆಗೆ ಒಳಪಡಿಸಲಾಗಿದೆ, ಅವರನ್ನು ಮನೆಯಲ್ಲಿ ಬಂಧಿಸಲಾಗಿದೆ. ಭಯೋತ್ಪಾದನೆಯನ್ನು ತಡೆಹಿಡಿಯುವ ಹೆಸರಿನಲ್ಲಿ ಕರ್ಫ್ಯೂ ತರಹದ ಸಂದರ್ಭಗಳನ್ನು ಹೇರಲಾಗಿದ್ದು, ಅನಾರೋಗ್ಯ ಪೀಡಿತರು, ವೃದ್ಧರು ಔಷಧಿಯನ್ನು ಕೊಳ್ಳಲಾಗಿಲ್ಲ. ಅನೇಕ ಯುವಕರನ್ನು ಭಯೋತ್ಪಾದಕರೆಂದು ಕರೆದು ಸೆರೆಮನೆಗೆ ತಳ್ಳಲಾಗಿದೆ ಅಥವಾ ಗುಪ್ತವಾಗಿ ಗಲ್ಲಿಗೇರಿಸಲಾಗಿದೆ. ಇಡೀ ರಾಜ್ಯವನ್ನೇ ಒಂದು ದೊಡ್ಡ ಸೆರೆಮನೆಯಾಗಿ ಪರಿವರ್ತಿಸಲಾಗಿದೆ. ಈ ಕ್ರಮಗಳು ಜನರ ಮನಸ್ಸನ್ನು ಘಾಸಿಗೊಳಿಸಿವೆ, ಆಳುವ ಬಿಜೆಪಿ ಸರ್ಕಾರದ ಬಗ್ಗೆ ಭ್ರಮನಿರಸನ ಉಂಟು ಮಾಡಿವೆ.

ಬಿಜೆಪಿಯೂ ಸಹ ರಾಜ್ಯದಲ್ಲಿ ಚುನಾವಣೆಯನ್ನು ಉದ್ದೇಶಪೂರ್ವಕವಾಗಿಯೇ ನಿಧಾನ ಮಾಡುತ್ತಿತ್ತು ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನ–ಮಾನವನ್ನು ಪುನಃ ಸ್ಥಾಪಿಸುವ ವಾಗ್ದಾನವನ್ನು ನಿರಾಕರಿಸುತ್ತಾ ಬಂದಿತ್ತು. ಅದರ ಉದ್ದೇಶವು ರಾಜ್ಯಪಾಲರನ್ನು ತನ್ನ ಸೂತ್ರದ ಬೊಂಬೆಯಂತೆ ಬಳಸಿಕೊಂಡು ವಾಸ್ತವವಾಗಿ ತನ್ನ ರಾಕ್ಷಸೀ ಆಳ್ವಿಕೆಯನ್ನು ಮುಂದುವರೆಸುವುದಾಗಿತ್ತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಹತ್ತು ವರ್ಷಗಳ ನಂತರ ವಿಧಾನಸಭಾ ಚುನಾವಣೆಯನ್ನು ನಡೆಸಲಾಯಿತು. ಈ 10 ವರ್ಷಗಳಲ್ಲಿ ಹೇಗೆ ಪ್ರಾಂತೀಯ ಹಾಗೂ ರಾಷ್ಟ್ರೀಯ ಪಕ್ಷಗಳೆರಡೂ ಸಹ ಅಧಿಕಾರಕ್ಕೆ ಬರಲು ತಮ್ಮನ್ನು ಬಳಸಿಕೊಂಡಿವೆ ಎಂಬುದನ್ನು ಅಲ್ಲಿಯ ಜನ ಕಂಡಿದ್ದಾರೆ. ಜನರು ವಾಸ್ತವದಲ್ಲಿ ಅದರಲ್ಲೂ ಕಾಶ್ಮೀರ ಪ್ರಾಂತ್ಯದಲ್ಲಿ ಬಿಜೆಪಿಯನ್ನು ತಿರಸ್ಕರಿಸಿದ್ದಾರೆ. ಮತ್ತು ಕಾಂಗ್ರೆಸ್ ತನ್ನ ಹಿಂದಿನ ವರ್ಷಗಳ ದುರಾಡಳಿತದಿಂದ ಮತ್ತು ಜಮ್ಮು–ಕಾಶ್ಮೀರವನ್ನು ಭಾರತಕ್ಕೆ ಸೇರ್ಪಡೆ ಮಾಡುವಾಗ ಮಾಡಿಕೊಂಡಂಥ ಒಪ್ಪಂದದ ನಿಬಂಧನೆಗಳನ್ನು ಪಾಲಿಸುವಲ್ಲಿ ವಿಫಲವಾಗಿರುವುದರಿಂದ ಕುಖ್ಯಾತಿ ಪಡೆದಿದೆ. ಹಾಗೆಯೇ ಜನರಿಗೆ ಯಾವುದೇ ಪ್ರಾಂತೀಯ ಪಕ್ಷಗಳಲ್ಲಿ – ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ, ಅಪ್ನೀ ಪಕ್ಷ, ಇಂಜಿನಿಯರ್ ರಶೀದ್‌ರವರ ಐತಿಹಾದ್ ಪಕ್ಷ ಇವುಗಳಲ್ಲಿ ವಿಶ್ವಾಸವಿಲ್ಲ.

ಬಿಜೆಪಿಯು ಕಾಶ್ಮೀರದಲ್ಲಿ ತಳ ಊರುವ ಯಾವುದೇ ಸಾಧ್ಯತೆ ಇಲ್ಲದ ಹಿನ್ನೆಲೆಯಲ್ಲಿ ವಿಧಾನಸಭಾ ಸೀಟುಗಳ ಮರು ವಿಂಗಡನೆ ಅವಕಾಶವನ್ನು ಬಳಸಿಕೊಂಡು ಹಿಂಬಾಗಿಲಿನಿಂದ ಬರುವ ಯತ್ನವನ್ನು ಮಾಡಿತು. 2022ರ ಮೇ 5ರಂದು ಬಿಡುಗಡೆಯಾದ ಅಂತಿಮ ವರದಿಯು ಜಮ್ಮು ವಿಭಾಗಕ್ಕೆ ಆರು ಸೀಟುಗಳು ಮತ್ತು ಕಾಶ್ಮೀರ ವಿಭಾಗಕ್ಕೆ ಒಂದು ಸೀಟನ್ನು ಶಿಫಾರಸ್ಸು ಮಾಡಿದ್ದು ಅವು ಒಟ್ಟು 90 ಸ್ಥಾನಗಳಾಗುತ್ತವೆ. ಅಷ್ಟು ಮಾತ್ರವಲ್ಲದೆ, ರಾಜ್ಯದ ಮೇಲೆ ಹತೋಟಿ ಹೊಂದಲು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಿಗೆ 5 ಜನರನ್ನು ವಿಧಾನಸಭೆಗೆ ನೇಮಕ ಮಾಡಲು ಹೆಚ್ಚುವರಿ ಅಧಿಕಾರವನ್ನು ನೀಡಿತು. ನಂತರ ಬಿಜೆಪಿಯು ಜಮ್ಮು ಪ್ರಾಂತ್ಯದಲ್ಲಿ ಹಿಂದೂ ಮತಗಳನ್ನು ಪಡೆಯಲು ತನ್ನ ಉಗ್ರ ಕೋಮುವಾದಿ ಪ್ರಚಾರವನ್ನು ತಾರಕಕ್ಕೆ ಏರಿಸಿತು. ಮತ್ತೊಂದೆಡೆ ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್ ಮತ್ತು ಸಿಪಿಎಂ ನೊಡನೆ ಮೈತ್ರಿಯನ್ನು ರಚಿಸಿಕೊಂಡಿತು ಮತ್ತು ಪಿಡಿಪಿ ಏಕೈಕವಾಗಿ ಸ್ಪರ್ಧಿಸಲು ನಿರ್ಧರಿಸಿತು.

ಆಶ್ಚರ್ಯಕರವೆಂದರೆ, ತನ್ನ ಮೂಲಭೂತವಾದಿ ಮತ್ತು ಬಂಡಾಯದ ನಿಲುವಿನಿಂದಾಗಿ ಭಾರತ ಸರ್ಕಾರದಿಂದ ನಿಷೇಧಿಸಲ್ಪಟ್ಟ ಮೂಲಭೂತವಾದಿ ಸಂಘಟನೆಯಾದ ಜಮಾತೆ ಇಸ್ಲಾಮಿ ಹಲವಾರು ದಶಕಗಳ ನಂತರ ಚುನಾವಣೆಯಲ್ಲಿ ಭಾಗವಹಿಸಿತು. ಜಮಾತೆ ಇಸ್ಲಾಮಿಯು ಮುಸ್ಲಿಂ ಮತಗಳನ್ನು ವಿಭಜಿಸಿ, ಬಿಜೆಪಿಯು ಕಣಿವೆಯಲ್ಲಿ ಗೆಲ್ಲುವಂತೆ ನೆರವಾಗಲು ಚುನಾವಣೆಯಲ್ಲಿ ಸ್ಪರ್ಧಿಸಿತು ಎಂಬುದು ಕೆಲ ಜನರ ನಂಬಿಕೆ. ಇದೇ ಉದ್ದೇಶದಿಂದಲೇ ಬಿಜೆಪಿ, ಇಂಜಿನಿಯರ್ ರಶೀದ್ ಅವರ ಐತಿಹಾದ್ ಪಕ್ಷವನ್ನು ಪರೋಕ್ಷವಾಗಿ ಬೆಂಬಲಿಸಿದೆ ಎಂಬ ಆರೋಪ ಸಹ ಇದೆ.

ಜಮ್ಮು ಮತ್ತು ಕಾಶ್ಮೀರದ ಚುನಾವಣೆ ನಡೆದ ಹಿನ್ನೆಲೆ ಇದು. ಕಣಿವೆಯಲ್ಲಿ ಮತದಾನ ಮಾದರಿಯೂ 2014 ಚುನಾವಣೆಗಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿರಲಿಲ್ಲ. ಆದರೆ, ಜಮ್ಮು ಪ್ರಾಂತ್ಯದಲ್ಲಿ ಮತದಾನದ ಶೇಕಡವು, ಬಿಜೆಪಿ ಹಿಡಿತವಿದ್ದೆಡೆ ಬಹಳ ಹೆಚ್ಚಿದೆ. ಸರಾಸರಿ ಶೇಕಡ 60ರಷ್ಟು ಮತದಾನವಾಗಿದ್ದರೂ ಜನರಲ್ಲಿನ ಒಟ್ಟಾರೆ ಪ್ರತಿಕ್ರಿಯೆ ಕಡಿಮೆಯೇ ಇತ್ತು. ಏಕೆಂದರೆ ಚುನಾವಣೆಯ ನಂತರ ಏನಾದರೂ ಬದಲಾವಣೆ ಆಗುತ್ತದೆ ಎಂದವರಿಗೆ ಅನಿಸಲಿಲ್ಲ. ಜನರು ತಮ್ಮ ಜೀವನದ ಜ್ವಲಂತ ಸಮಸ್ಯೆಗಳಾದ ಬೆಲೆ ಏರಿಕೆ, ಯುವಜನತೆಯ ನಿರುದ್ಯೋಗ ಸಮಸ್ಯೆ, ಸಣ್ಣ ವ್ಯಾಪಾರಿಗಳ ಮತ್ತು ಸಾಂಪ್ರದಾಯಿಕ ಕಸುಬುಗಳ ಅವನತಿ, ದೊಡ್ಡ ಪ್ರಮಾಣದ ಕಾರ್ಪೊರೇಟ್ ತಿಮಿಂಗಿಲಗಳ ನುಸುಳುವಿಕೆ ಮತ್ತು ಸ್ಥಳೀಯ ಜನತೆಯನ್ನು ಮತ್ತಷ್ಟು ತುಳಿಯುತ್ತಾ ಬಹು ರಾಷ್ಟ್ರೀಯ ಕಂಪನಿಗಳು ನೈಸರ್ಗಿಕ ಸಂಪನ್ಮೂಲಗಳನ್ನು ದೋಚಲು ಮತ್ತು ಪ್ರವಾಸಿ ಉದ್ಯಮಕ್ಕಾಗಿ ಕಾಡುಗಳನ್ನು ನಾಶಪಡಿಸುವುದು ಮತ್ತು ಬಂಡೆಗಳನ್ನು ಒಡೆಯುವುದು ಮುಂತಾದ ಸಮಸ್ಯೆಗಳನ್ನು ಈ ಚುನಾವಣೆ ಬಗೆಹರಿಸುತ್ತದೆ ಎಂಬುದರ ಬಗ್ಗೆ ಯಾವುದೇ ಭರವಸೆಯನ್ನು ಹೊಂದಿರಲಿಲ್ಲ. ಸೈನ್ಯದ ಓಡಾಟಕ್ಕೆ ನೆರವಾಗಲು ಹೊಸ ರೈಲ್ವೆ ಹಳಿಗಳನ್ನು ಹಾಕುವುದನ್ನು ಬಿಟ್ಟರೆ ಕಳೆದ 5 ವರ್ಷಗಳಲ್ಲಿ ಯಾವುದೇ ಬೆಳವಣಿಗೆಯನ್ನು ಈ ಕಣಿವೆಯಲ್ಲಿ ಕಾಣಲಾಗಿಲ್ಲ. ವಿಧಿ 370ನ್ನು ಹಿಂಪಡೆದುಕೊಳ್ಳುವುದಕ್ಕಿಂತ ಮುಂಚೆ ಇರದಿದ್ದ ಆಸ್ತಿ ತೆರಿಗೆಯು ಈಗ ಚಾಲ್ತಿಯಲ್ಲಿದ್ದು ಜನ ಅದನ್ನು ತೆರಬೇಕಾಗಿದೆ. ಮುಂಚೆ ಪರವಾನಿಗೆಯನ್ನು ಹೊಂದಿದ್ದ ಕೆಲವು ಪಂಚತಾರಾ ಹೋಟೆಲ್‌ಗಳನ್ನು ಬಿಟ್ಟು ಕಾಶ್ಮೀರದಲ್ಲಿ ಎಲ್ಲೂ ಬಹಿರಂಗವಾಗಿ ಮದ್ಯ ದೊರಕುತ್ತಿರಲಿಲ್ಲ. ಆದರೆ ಈಗ ಪ್ರವಾಸಿಗರನ್ನು ಆಕರ್ಷಿಸುವ ನೆಪದಲ್ಲಿ ಬಹಳಷ್ಟು ಮದ್ಯದ ಅಂಗಡಿಗಳು ತೆರೆಯಲ್ಪಟ್ಟಿವೆ, ಇದು ಸಹ ಕಾಶ್ಮೀರ ಕಣಿವೆಯ ಜನರಲ್ಲಿ ಅತೃಪ್ತಿಯ ವಿಷಯವಾಗಿದೆ.

ನಿರೀಕ್ಷೆಯಂತೆ ಬಿಜೆಪಿಯ ಬೆಳವಣಿಗೆಗೆ ಕಡಿವಾಣ ಹಾಕಲಾಗಿದೆ. ಮತ್ತೊಂದೆಡೆ ನ್ಯಾಷನಲ್ ಕಾನ್ಫರೆನ್ಸ್–ಕಾಂಗ್ರೆಸ್ ಮೈತ್ರಿಕೂಟ ಬಹುಮತ ಪಡೆದು ಸರ್ಕಾರವನ್ನು ರಚಿಸಿದೆ. ಬಿಜೆಪಿ ವಿರೋಧಿ ಭಾವನೆ ಹಾಗೂ ಕೆಲವು ಪ್ರಾಂತೀಯ ಭಾವನೆಗಳನ್ನು ಬಳಸಿಕೊಂಡು ಅದು ಒಂದು ವಿಧದಲ್ಲಿ ಲಾಭ ಪಡೆಯಿತು. ಅವರಾಗಲಿ ಅಥವಾ ಅವರ ಮಿತ್ರರಾದ ಸಿಪಿಐ(ಎಂ) ಆಗಲಿ, ಕಾಶ್ಮೀರದ ಜನರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ವಿರುದ್ಧ ಪ್ರಜಾಸತ್ತಾತ್ಮಕ ಸಮೂಹ ಹೋರಾಟಗಳನ್ನು ಬೆಳೆಸಲು ಮುಂದೊಡಗನ್ನು ತೋರಲಿಲ್ಲ. ನಿರೀಕ್ಷೆಯಂತೆ ಬಿಜೆಪಿಯು ಚುನಾವಣಾ ಫಲಿತಾಂಶದ ಕುರಿತು ತುಟಿ ಬಿಚ್ಚುತ್ತಿಲ್ಲ. ಜಮ್ಮುವಿನ 11 ಸ್ಥಾನಗಳಿಗೆ ಅವರು 'ಹಿಂದುಗಳು ಅಪಾಯದಲ್ಲಿದ್ದಾರೆ' ಎಂಬ ಘೋಷಣೆಯ ಮೇಲೆ ಅವಲಂಬಿತರಾಗಿದ್ದರೂ ಫಲಿತಾಂಶ ಅವರಿಗೆ ನಿರಾಶದಾಯಕವಾಗಿತ್ತು. ಕಾಶ್ಮೀರಿ ಪಂಡಿತರೂ ಸಹ ಭಯೋತ್ಪಾದಕ ಮೂಲಭೂತವಾದಿ ಸಂಘಟನೆಗಳಿಂದ ಬಿಜೆಪಿಯು ತಮಗೆ ರಕ್ಷಣೆ ನೀಡುತ್ತದೆ ಎಂಬ ಭರವಸೆಯ ಯಾವುದೇ ಲಕ್ಷಣವನ್ನು ಕಾಣಲಿಲ್ಲ. ಚುನಾವಣೆಯನ್ನು ಗೆದ್ದರೆ ಸಂಸತ್ತಿನಲ್ಲಿ ಶಾಸನವನ್ನು ಬದಲಿಸದೆ ವಿಧಿ 370ನ್ನು ಪುನಃ ಜಾರಿಗೆ ತರುವುದು ಸಾಧ್ಯವಿಲ್ಲವೆಂಬುದು ತಿಳಿದಿದ್ದರೂ ಸಹ ಕಾಂಗ್ರೆಸ್ ಪಕ್ಷವು ಅವರಿಗೆ ಆ ಭರವಸೆಯನ್ನು ನೀಡಿತ್ತು. ಆದರೆ ಇದನ್ನು ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರಲಿಲ್ಲ. ಹಾಗೆಯೇ ಜಮ್ಮು ಪ್ರಾಂತ್ಯದಲ್ಲಿಯೂ ಸಹ ಜನರ ಜ್ವಲಂತ ಸಮಸ್ಯೆಗಳ ಕುರಿತು ಸಾಕಷ್ಟು ಅತೃಪ್ತಿ ಇತ್ತು.

ಬಿಜೆಪಿಯ ಸೋಲು ನಿಸ್ಸಂಶಯವಾಗಿಯೂ ಒಂದು ಸಕಾರಾತ್ಮಕ ಗುಣಲಕ್ಷಣವಾದರೂ ನ್ಯಾಷನಲ್ ಕಾನ್ಫರೆನ್ಸ್– ಕಾಂಗ್ರೆಸ್ ಸರ್ಕಾರವೂ ಸಹ ಜನವಿರೋಧಿ ಬೂರ್ಜ್ವಾ ನೀತಿಗಳನ್ನು ಪಾಲಿಸುವುದರಿಂದ ಅದರಿಂದಲೂ ಹೆಚ್ಚಿನದೇನನ್ನೂ ಅಪೇಕ್ಷಿಸಲು ಸಾಧ್ಯವಿಲ್ಲ. ಸರಿಯಾದ ನಾಯಕತ್ವದಡಿ ಕ್ರಾಂತಿಕಾರಿ ಎಡಪಂಥೀಯ ನಿಲುವಿನಿಂದ ಒಗ್ಗೂಡಿದ ಸಂಘಟಿತ ಸಮೂಹ ಹೋರಾಟವನ್ನು ಬೆಳೆಸಿದಾಗ ಮಾತ್ರವೇ ಅವರ ಜರ್ಝರಿತ ಜೀವನದ ಪರಿಸ್ಥಿತಿಗೆ ಸ್ವಲ್ಪ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ ಎಂಬುದನ್ನು ಸಂಕಷ್ಟದಲ್ಲಿರುವ ಕಾಶ್ಮೀರಿ ಜನತೆ ಅರಿತುಕೊಳ್ಳುವ ಕಾಲ ಬಂದಿದೆ.

# "ಸಾರ್ವಜನಿಕ ಹಿತಕ್ಕಾಗಿ" ಔಷಧಿಗಳ ಬೆಲೆಯನ್ನು ಏರಿಸಲಾಗಿದೆ!

ನೀವು ಕೇಳುತ್ತಿರುವುದು, ನಿಜ! ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಎಂಟು ಅತ್ಯಾವಶ್ಯಕ ಔಷಧಿಗಳ (ಅಸ್ತಮಾಕ್ಕಾಗಿನ ಸಾಲ್‌ಬುಟಮಾಲ್, ಟಿಬಿ ಖಾಯಿಲೆಗಾಗಿ ಬೇಕಾದ ಸ್ಟ್ರೆಪ್ಟೋಮೈಸಿನ್ ಇಂಜೆಕ್ಷನ್, ಬೈಪೋಲಾರ್ ಸಮಸ್ಯೆಗಾಗಿ ಲಿಥಿಯಮ್, ಗ್ಲಾಕೊಮಾ ಕಣ್ಣಿನ ಖಾಯಿಲೆಗಾಗಿ ಪೈಲೊಕಾರ್ಪಿನ್ ಔಷಧಿಗಳನ್ನು ಒಳಗೊಂಡಂತೆ) ಬೆಲೆಯನ್ನು ಅಕ್ಟೋಬರ್ 14ರಿಂದ 50% ಹೆಚ್ಚಳ ಮಾಡಿದೆ. ಔಷಧಿಗಳ ಬೆಲೆ ನಿಯಂತ್ರಣಕ್ಕಾಗಿ ಕೇಂದ್ರ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಸಚಿವಾಲಯದಡಿಯಲ್ಲಿ ಎನ್‌ಪಿಪಿಎ (ನ್ಯಾಷನಲ್ ಫಾರ್ಮಸ್ಯೂಟಿಕಲ್ ಪ್ರೈಸಿಂಗ್ ಅಥಾರಿಟಿ) ಸಂಸ್ಥೆ ಇದೆ. ಸಾರ್ವಜನಿಕ ಹಿತಾಸಕ್ತಿಗಾಗಿ ಸಾಮಾನ್ಯ ಖಾಯಿಲೆಗಳಿಗೆ ಬಳಸುವ, ಮತ್ತು ಬಹು ದಿನಗಳ ಕಾಲ ತೆಗೆದುಕೊಳ್ಳುವಂತಹ 'ಬಡಜನರ ಔಷಧಿಗಳ ಬೆಲೆಗಳನ್ನು' ಏರಿಸಿದ್ದೇವೆ ಎಂದು ಎನ್‌ಪಿಪಿಎ ಹೇಳಿದೆ!



ಅವಶ್ಯಕ ಔಷಧಿಗಳ ಬೆಲೆಯನ್ನು ಜನತೆಯ ಹಿತಾಸಕ್ತಿಗಾಗಿ ಏರಿಸಿರುವುದನ್ನು, ನಾವೆಂದೂ ಕೇಳಿಲ್ಲ! ಇದು ಹಾಸ್ಯಾಸ್ಪದವೇ ಸರಿ. ಈ ರೀತಿಯಾಗಿ ಬೆಲೆ ಹೆಚ್ಚಳದ ಹಿಂದಿನ ಕಾರಣವಾದರೂ ಏನು? ಅವರು ನೀಡುವ ಸಿದ್ಧ ಉತ್ತರವೆಂದರೆ ಔಷಧಿಗಳ 'ಸುಸ್ಥಿರ ಉತ್ಪಾದನೆಯಲ್ಲಿ ಅವ್ಯವಹಾರ' ಮತ್ತು ಕೆಲವು ಔಷಧಿ ಉತ್ಪಾದಕರು 'ಔಷಧಿಗಳ ಉತ್ಪಾದನೆಯು ನಷ್ಟದಾಯಕವೆಂಬ ಕಾರಣವೊಡ್ಡಿ ಸ್ಥಗಿತಗೊಳಿಸುವುದಕ್ಕಾಗಿ ಅರ್ಜಿ ಸಲ್ಲಿಸಿರುವುದು.'

ಸೆಪ್ಟೆಂಬರ್ ತಿಂಗಳಲ್ಲಿ ಸರ್ಕಾರವೇ ಬಿಡುಗಡೆಗೊಳಿಸಿದ ನ್ಯಾಷನಲ್ ಹೆಲ್ತ್ ಅಕೌಂಟ್ಸ್ ವರದಿಯ ಪ್ರಕಾರ, ಆರೋಗ್ಯಕ್ಕಾಗಿನ ವೆಚ್ಚದಲ್ಲಿ, 30.84% ಔಷಧಿಗಳಿಗಾಗಿಯೇ ಆಗುತ್ತಿರುವುದು ಕಂಡುಬಂದಿದೆ. ಈಗಾಗಲೇ ಸತ್ತು ಸುಣ್ಣವಾದವರ ರಕ್ತ ಮತ್ತಷ್ಟು ಹೀರಿದಂತಲ್ಲವೇ ಈ ಬೆಲೆ ಏರಿಕೆ ಮಾಡುತ್ತಿರುವುದು?

ಅಥವಾ, ದೊಡ್ಡ ದೊಡ್ಡ ಫಾರ್ಮಾ ಕಂಪನಿಗಳು ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ದೇಣಿಗೆ ನೀಡಿದ್ದರ ಪ್ರತಿಫಲವಾಗಿ ತಮ್ಮ ಪಾಲನ್ನು ತೆಗೆದುಕೊಳ್ಳುತ್ತಿವೆಯೇ? ಬಹುಶಃ ಎನ್‌ಪಿಪಿಎಯ ಬೆಲೆ ಏರಿಕೆಯ "ಅಸಾಧಾರಣ ಸಂದರ್ಭ"ದ ಹಿಂದಿನ ಮರ್ಮ ಇದೇ ಇರಬೇಕು!

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

### ಬಾಂಗ್ಲಾದೇಶದಲ್ಲಿ ಮತ್ತು ಭಾರತದಲ್ಲಿ ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ವಿರುದ್ಧ

# ಪ್ರತಿರೋಧ ದಿನಾಚರಣೆ

ಬಾಂಗ್ಲಾದೇಶ ಮತ್ತು ಭಾರತದಲ್ಲಿ ಹೆಚ್ಚುತ್ತಿರುವ ಕೋಮುವಾದವನ್ನು ವಿರೋಧಿಸಿ ಅಖಿಲ ಭಾರತ ಪ್ರತಿರೋಧ ದಿನದ ಅಂಗವಾಗಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ವತಿಯಿಂದ ರಾಜ್ಯದ ವಿವಿಧೆಡೆಗಳಲ್ಲಿ ಪ್ರತಿಭಟನೆ ನಡೆಸಲಾಯಿತು.

1971ರ ಬಾಂಗ್ಲಾದೇಶ ವಿಮೋಚನಾ ಚಳುವಳಿಯಲ್ಲಿ ಮತ್ತು ಶೇಖ್ ಹಸೀನಾರನ್ನು ಪದಚ್ಯುತಗೊಳಿಸಿದ ಇತ್ತೀಚಿನ ಐತಿಹಾಸಿಕ ವಿದ್ಯಾರ್ಥಿ ಬಂಡಾಯದಲ್ಲಿ ಮುಸಲ್ಮಾನರು ಮತ್ತು ಹಿಂದೂಗಳು ಪರಸ್ಪರರಿಗಾಗಿ ಜೀವಕೊಟ್ಟು ಹೋರಾಡಿದ್ದರು. ಆದರೆ ಈಗ ಅಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿಯಂತಹ ಘಟನೆಗಳು ವರದಿಯಾಗುತ್ತಿವೆ. ಅಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಕೋಮುವಾದಿ ಶಕ್ತಿಗಳು ದುರುಪಯೋಗ ಪಡಿಸಿಕೊಳ್ಳುತ್ತಿವೆ.

ಇನ್ನೊಂದೆಡೆ, ಭಾರತದಲ್ಲಿ ಕೂಡ ಅಲ್ಪಸಂಖ್ಯಾತರ ಮೇಲೆ ಪದೇ ಪದೇ ದಾಳಿ, ಹಲ್ಲೆಗಳು ನಡೆಯುತ್ತಿವೆ. 1992ರ ಡಿಸೆಂಬರ್ 6 ರಂದು, ಬಿಜೆಪಿ ಸಂಘ ಪರಿವಾರ ಸುಪ್ರೀಂಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿದ್ದ ವಿವಾದಿತ ಮಸೀದಿಯ ಕಟ್ಟಡವನ್ನು ಕೆಡವಿ, ತನ್ನ ರಾಜಕೀಯ ಲಾಭಕ್ಕಾಗಿ ಇಡೀ ದೇಶದಲ್ಲಿ ಕೋಮುವಾದವನ್ನು ಹರಡುವ ಪಿತೂರಿ ಮಾಡಿತು. ಈಗ ಮತ್ತೆ ಅದೇ ರೀತಿ ಇತರ ಮಸೀದಿಗಳಲ್ಲಿ ಇಂತಹ ವಿವಾದವನ್ನು ಹುಟ್ಟು ಹಾಕುತ್ತಿದೆ. ಎನ್‌ಡಿಎ ಮಿತ್ರ ಪಕ್ಷ ಅಧಿಕಾರದಲ್ಲಿರುವ ಮಣಿಪುರದಲ್ಲಿ ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಜನಾಂಗೀಯ ಕಲಹದಲ್ಲಿ ನೂರಾರು ಮಂದಿ ಜೀವ ಕಳೆದುಕೊಂಡಿದ್ದಾರೆ. ಹೀಗೆ ಬಾಂಗ್ಲಾದೇಶ ಮತ್ತು ಭಾರತ ಎರಡೂ ದೇಶಗಳ ಆಳ್ವಿಕರಿಗೂ ಕೂಡ ಜನರನ್ನು ಒಡೆದು ಆಳಲು ಕೋಮುವಾದ, ಜನಾಂಗೀಯವಾದ ಬೇಕಾಗಿದೆ.

ಎರಡೂ ದೇಶಗಳಲ್ಲಿ ಸಾಮಾನ್ಯ ಜನತೆ ಬೆಲೆ ಏರಿಕೆ, ನಿರುದ್ಯೋಗ, ಕೃಷಿ ಬಿಕ್ಕಟ್ಟು ಮುಂತಾದ ಸಮಸ್ಯೆಗಳಿಂದ ಹೈರಾಣಾಗಿದ್ದಾರೆ. ಶೋಷಣೆ ಆಧಾರಿತ ಬಂಡವಾಳಶಾಹಿ ವ್ಯವಸ್ಥೆಯೇ ಈ ಸಮಸ್ಯೆಗಳಿಗೆ ಕಾರಣ. ಇಂತಹ ಸಮಸ್ಯೆಗಳ ವಿರುದ್ಧ ಜನರ ಆಕ್ರೋಶವನ್ನು ದಿಕ್ಕು ತಪ್ಪಿಸಲು ಆಳುವ ಬಂಡವಾಳಶಾಹಿ ಪಕ್ಷಗಳು ಎಲ್ಲ ಧರ್ಮಗಳ ಜನರ ಮನಸ್ಸಿನಲ್ಲಿ ಕೋಮು ವಿಷಬೀಜವನ್ನು ಬಿತ್ತುತ್ತಿವೆ. ದುಡಿಯುವ ಜನತೆ ಈ ಪಿತೂರಿಯನ್ನು ಅರ್ಥ ಮಾಡಿಕೊಂಡು ತಮ್ಮ ಒಗ್ಗಟ್ಟನ್ನು ಕಾಪಾಡಿಕೊಳ್ಳಬೇಕು ಮತ್ತು ಜೀವನದ ನೈಜ ಸಮಸ್ಯೆಗಳ ವಿರುದ್ಧ ಒಗ್ಗಟ್ಟಾಗಿ ಹೋರಾಡಲು ಮುಂದೆ ಬರಬೇಕು.




ಬಾಂಗ್ಲಾದೇಶ ಹಾಗೂ ಭಾರತ ಗಳಲ್ಲಿ ಹೆಚ್ಚುತ್ತಿರುವ ಕೋಮುವಾದವನ್ನು ವಿರೋಧಿಸಿ, ಸೆಂಟರ್ ಫಾರ್ ಪ್ರೊಟೆಕ್ಷನ್ ಆಫ್ ಡೆಮೊಕ್ರೆಟಿಕ್ ರೈಟ್ಸ್ ಅಂಡ್ ಸೆಕ್ಯುಲರಿಸಂ(ಸಿ.ಪಿ.ಡಿ.ಆರ್.ಎಸ್)ನಿಂದ ಧಾರವಾಡದಲ್ಲಿ ಪ್ರತಿರೋಧ ದಿನಾಚರಣೆ







# ಕಾರ್ಪೋರೇಟ್ ಪರ, ರೈತ ವಿರೋಧಿ ಕೃಷಿ ನೀತಿಗಳನ್ನು ಕೈಬಿಡಿ

**– ಎಐಕೆಕೆಎಮ್ಎಸ್**

ಬಂಡವಾಳಶಾಹಿಗಳಿಗೆ ಲಾಭ ತಂದು ಕೊಡುವ ರೈತ ವಿರೋಧಿ ಕೃಷಿ ನೀತಿಗಳನ್ನು ಕೈಬಿಡಬೇಕೆಂದು ಒತ್ತಾಯಿಸಿ ಆಲ್ ಇಂಡಿಯಾ ಕಿಸಾನ್ ಖೇತ್ ಮಜ್ದೂರ್ ಸಂಘಟನೆ (ಎಐಕೆಕೆಎಂಎಸ್)ಯ ನೇತೃತ್ವದಲ್ಲಿ ವಿವಿಧ ಜಿಲ್ಲೆಯ ರೈತರು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದರು.










### ಕಲಬುರಗಿ ಗ್ರಾಮೀಣ ಭಾಗದಲ್ಲಿ ಬರುವ ಬಗರ್ ಹುಕುಂ ಸಾಗುವಳಿದಾರರಿಗೆ ಕೂಡಲೇ ಹಕ್ಕುಪತ್ರಗಳನ್ನು ನೀಡಬೇಕೆಂದು ಆಗ್ರಹ – ಎಐಕೆಕೆಎಮ್ಎಸ್




Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA